
# ಕಮಲ ಪಥ

RNI No.:KARKAN/2023/84034 | ಸಂಪುಟ : 02 | ಸಂಚಿಕೆ : 10 | ಜನವರಿ 2025 | ಬೆಂಗಳೂರು | ₹ 10/-







ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಮಾಜಿ ಪ್ರಧಾನಿ ದಿ. ಅಟಲ್ ಬಿಹಾರಿ ವಾಜಪೇಯಿ ರವರ ಜನ್ಮದಿನದಂದು ಮಾಜಿ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ ರವರಿಂದ ಪ್ರದರ್ಶಿನಿ ಉದ್ಘಾಟನೆ




ಸಂವಿಧಾನ ಸನ್ಮಾನ ಅಭಿಯಾನ, ಶಿಕಾರಿಪುರ, ಶಿವಮೊಗ್ಗ



ಬಿಜೆಪಿ ರಾಜ್ಯ ಕಾನೂನು ಪ್ರಕೋಷ್ಠ ವತಿಯಿಂದ ವಿಶೇಷ ಸಭೆ



ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ 'ವೀರ ಬಾಲ ದಿವಸ' ಆಚರಣೆ




ಭೀಮಾ ಸಮಾವೇಶ, ಬೆಂಗಳೂರು ಉತ್ತರ



ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಸ್ವಾಮಿ ವಿವೇಕಾನಂದ ಜಯಂತಿ ಆಚರಣೆ

# ಕಮಲ ಪಥ

**ಪ್ರಕಾಶಕರು**
ಹೆಚ್.ಎಸ್. ಗೋಪಿನಾಥ್
ಮೊ : 9341231253


**ಸಂಪಾದಕರು**
ಬಿದರೆ ಪ್ರಕಾಶ್
ಮೊ : 9513447961


## ಸುಭಾಷಿತ



**ಹಿಂದಿರುಗಿ ನೋಡುವ ಅವಶ್ಯಕತೆ ಇಲ್ಲ, ಮುಂದೆ ನೋಡಿ, ನಮಗೆ ಅನಂತ ಶಕ್ತಿ ಅನಂತ ಉತ್ಸಾಹ ಅನಂತ ತಾಳ್ಮೆ ಬೇಕು, ಆಗ ಮಾತ್ರ ಮಹತ್ಕಾರ್ಯವನ್ನು ನಾವು ಸಾಧಿಸಬಹುದು.**

- ★★★★★★★★★★





**ಕಮಲ ಪಥ ಪತ್ರಿಕೆಗಾಗಿ ಸಂಪರ್ಕಿಸಿ :**
☎ : 08022041976, 23569999
ಅಜಿತ್‌ಶೆಟ್ಟಿ ಹೆರಂಜೆ 97430 91999
ಪದ್ಮಾವತಿ ಜೋಷಿ : 95380 20388
email : bjpkamalapatha@gmail.com
#7/6, 4ನೇ ತಿರುವು, ಸಿ.ಸಿ. ರಸ್ತೆ,
ಸರ್ವಜ್ಞನಗರ, ಕಾಕ್ಸ್ ಟೌನ್,
ಬೆಂಗಳೂರು 560 005


# ಈ ಸಂಚಿಕೆಯಲ್ಲಿ




06 ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಬಿಜೆಪಿ





17 ಜಾರ್ಜ್ ಸೋರಸ್ ಮತ್ತು ಕಾಂಗ್ರೆಸ್ ಪಕ್ಷಕ್ಕೂ ಇರುವ ಸಂಬಂಧವಾದರೂ ಏನು ?

- **ದೀವಟಿಗೆ : ಲಾಲಾ ಲಜಪತ್ ರಾಯ್** ........ 05
- ವಿದೇಶಾಂಗ ನೀತಿಯಲ್ಲಿ ಚಾಣಕ್ಯ ಮೋದಿ ಸರ್ಕಾರ........13
- ಕಾಟಾಚಾರಕ್ಕೆ ಅಧಿವೇಶನ ಮುಗಿಸಿದ ಕಾಂಗ್ರೆಸ್ ಸರ್ಕಾರ!!!........21
- ಬಿಜೆಪಿಯಿಂದ 'ಭೀಮ ಸಂಗಮ' ಅಭಿಯಾನ........24
- ಖರ್ಗೆ ಕ್ಷೇತ್ರದಲ್ಲಿ ಕೇಸರಿ ಪಡೆ ಘರ್ಜನೆ........27
- ಬಾಬಾ ಸಹೇಬರು, ಅಟಲ್ ಜೀ ಕನಸು, ಮೋದಿ ಜೀ ರವರಿಂದ ನನಸು!!!........29
- **ಹಿರಿಯ ಕಾರ್ಯಕರ್ತರ ಪರಿಚಯ ಮಾಲೆ:** ದಿ. ರಾಮಚಂದ್ರ, ವೀರಪ್ಪ........31
- ವೈಚಾರಿಕ ಉಪನ್ಯಾಸ : ಅರ್ಥಪೂರ್ಣ ಜೀವನಕ್ಕಾಗಿ ಧನಾತ್ಮಕ ಮನೋವಿಜ್ಞಾನ.....33
- **ಮನ್ ಕಿ ಬಾತ್**– ಏಕತೆಯ ಮಹಾಕುಂಭ........34

# ಹತಾಶೆಯೋ?, ಆತ್ಮಸ್ಥೈರ್ಯವನ್ನು ಕುಗ್ಗಿಸುವ ತಂತ್ರವೋ?

ಕರುನಾಡು ಸದ್ಯ ಭಯದ ಪರಿಸ್ಥಿತಿಯಲ್ಲಿ ನರಳಾಡುತ್ತಿದೆ. ಆಡಳಿತ ವ್ಯವಸ್ಥೆ ಕಳ್ಳರು, ರೌಡಿಗಳ ಕೈಯಲ್ಲಿ ಸಿಲುಕಿ ಒದ್ದಾಡುತ್ತಿರುವಂತೆ ಕಾಣುತ್ತಿದೆ. ಹೇಗಾದರೂ ಕೊಲ್ಲು, ಹೇಗಾದರೂ ಗೆಲ್ಲು ಎನ್ನುವ ಮನಸ್ಥಿಯಲ್ಲಿರುವ ಕಾಂಗ್ರೆಸ್ ಸರ್ಕಾರದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ಹಾದಿ ತಪ್ಪಿದೆ.

ಕಾಂಗ್ರೆಸ್ ತನ್ನ ತಪ್ಪುಗಳ ಹತಾಶೆ ನಡೆಯಿಂದ, ಮುಸ್ಲಿಂ ಸಮುದಾಯದ ಓಲೈಕೆಗಾಗಿ ಬಹುಸಂಖ್ಯಾತ ಹಿಂದುಗಳ ಆತ್ಮಸ್ಥೈರ್ಯ ಕುಗ್ಗಿಸುವ ಕುತಂತ್ರಕ್ಕೆ ಕೈ ಹಾಕಿದೆ. ಪ್ರಜಾಪ್ರಭುತ್ವದ ವ್ಯವಸ್ಥೆಯೊಳಗಡೆ ಹೋರಾಟ ಮಾಡುವ ಪ್ರತಿಪಕ್ಷ ಬಿಜೆಪಿ ನಾಯಕರು, ಕಾರ್ಯಕರ್ತರನ್ನು ಬಂಧಿಸುತ್ತಾರೆ. ಅದೇ ಆರೋಪವನ್ನು ಹೊತ್ತ ಕಾಂಗ್ರೆಸ್ ಬೆಂಬಲಿಗರನ್ನು ಬಂಧಿಸುವುದಿರಲಿ, ರಾಜರೋಷವಾಗಿ ಓಡಾಡಲು ಬಿಡುತ್ತಾರೆ.

ಎಲ್ಲಾ ಆಯಾಮಗಳಲ್ಲೂ ಆಡಳಿತ ವ್ಯವಸ್ಥೆ ಹದಗೆಟ್ಟಿದೆ. ಒಂದೆಡೆ ಸರಣಿ ಬಾಣಂತಿಗಳ ಸಾವು, ಅಧಿಕಾರಿಗಳ ಆತ್ಮಹತ್ಯೆ, ಇನ್ನೊಂದೆಡೆ ಹಿಂದೂ ಭಾವನೆಗಳಿಗೆ ಧಕ್ಕೆ, ಪ್ರತಿಪಕ್ಷ ನಾಯಕರ ಮೇಲೆ ಪಿತೂರಿ, ಕಾರ್ಯಕರ್ತರನ್ನು ಭಯಗೊಳಿಸುವುದು, ಒಟ್ಟಾರೆ ರಾಜ್ಯವನ್ನು ಮತ್ತೊಂದು ಪಶ್ಚಿಮ ಬಂಗಾಳವನ್ನು ಮಾಡುವತ್ತ ಸಿದ್ದರಾಮಯ್ಯ ಸರ್ಕಾರ ಮುಂದಾಗಿದೆ.

ಗುತ್ತಿಗೆದಾರ ಸಚಿನ್ ಸಾವಿನ ಹಿಂದೆ ಸಚಿವ ಪ್ರಿಯಾಂಕ ಖರ್ಗೆ ಕೈವಾಡವಿದ್ದು, ಅವರನ್ನು ಬಂಧಿಸುವಂತೆ ಹೋರಾಟ ಮಾಡಿದ ಬಿಜೆಪಿ ಕಾರ್ಯಕರ್ತರ ಮೇಲೆ ತರಾತುರಿಯಲ್ಲಿ ಎಫ್ಐಆರ್ ಹಾಕಿ, ಬಿಜೆಪಿ ಕಾರ್ಯಕರ್ತರನ್ನು ಬೆದರಿಸುವ ತಂತ್ರ ಒಂದೆಡೆಯಾದರೆ, ಕಾನೂನಿನ ಎಲ್ಲೆ ಮೀರಿ ಸುವರ್ಣಸೌಧದಲ್ಲಿ ಬಿಜೆಪಿಯ ವಿಧಾನಪರಿಷತ್ ಸದಸ್ಯರಾದ ಡಾ. ಸಿ.ಟಿ. ರವಿ ಅವರನ್ನು ಬಂಧಿಸಿ, ನಂತರ ಕನಿಷ್ಠ ಸೌಲಭ್ಯವನ್ನೂ ನೀಡದೆ ಅಮಾನುಷವಾಗಿ ನಡೆಸಿಕೊಂಡು ಬಿಜೆಪಿ ನಾಯಕರ ಆತ್ಮಸ್ಥೈರ್ಯ ಕುಗ್ಗಿಸುವ ಹುನ್ನಾರಕ್ಕೆ ಇನ್ನೊಂದೆಡೆ ಕೈ ಹಾಕಿದೆ. ಇಷ್ಟೇ ಮಾಡುವ ಕಾಂಗ್ರೆಸ್ ಸರ್ಕಾರ, ಕೊಲೆ ಆರೋಪ ಹೊತ್ತಿರುವ ಅವರ ಸಚಿವರನ್ನು ವಜಾ ಮಾಡುವುದಿಲ್ಲ, ಅಲ್ಲದೆ ಇತರ ಆರೋಪಿಗಳನ್ನು ಬಂಧಿಸಲು ಹೋಗುವುದಿಲ್ಲ. ಬದಲಾಗಿ ಆರೋಪಿಗಳಿಗೆ ಸರ್ಕಾರ ಎಷ್ಟು ಬೆಂಬಲವಾಗಿ ನಿಂತಿದೆ ಅಂದರೆ ಆರೋಪಿಗಳು ನಿರೀಕ್ಷಣಾ ಜಾಮೀನಿಗೆ ಅರ್ಜಿಯನ್ನು ಹಾಕಿಕೊಳ್ಳದೆ ರಾಜರೋಷವಾಗಿ ಓಡಾಡುತ್ತಿದ್ದಾರೆ.

## ಸಂಪಾದಕೀಯ

ಇಷ್ಟಕ್ಕೇ ಮುಗಿಯದ ಕಾಂಗ್ರೆಸ್ ಅನೈತಿಕ ಕಾರ್ಯ ಚಟುವಟಿಕೆ, ಹಿಂದೂಗಳನ್ನು ಸಹ ಹೆದರಿಸಿ, ಕುಗ್ಗಿಸುವ ಕಾರ್ಯಗಳಿಗೆ ಕುಮ್ಮಕ್ಕು ನೀಡುತ್ತಿದೆ. ಇದಕ್ಕೆ ಉದಾಹರಣೆ ಎಂದರೆ ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಮಲಗಿದ್ದ ಹಸುವಿನ ಕೆಚ್ಚಲು ಕೊಯ್ದ ಅಮಾನವೀಯ ಘಟನೆ ಸಾಕ್ಷಿಯಾಗಿದೆ. ಇನ್ನು ರಾಜ್ಯದ ವಿವಿದೆಡೆ ಕಳಪೆ ಔಷಧಿಯಿಂದ ಬಾಣಂತಿಯರ ಮತ್ತು ಹಸುಗೂಸುಗಳ ಮರಣವಾಗುತ್ತಿದ್ದರೂ, ಆ ಬಗ್ಗೆ ಸಹ ಕಾಂಗ್ರೆಸ್ ಸರ್ಕಾರ ಮೌನವಾಗಿದ್ದು, ರಾಜ್ಯದ ಜನತೆಯ ಜೀವಕ್ಕೆ ಬೆಲೆ ಇಲ್ಲದಂತಾಗಿದೆ. ರಾಜ್ಯದಲ್ಲಿ ಕ್ರಿಮಿನಲ್‌ಗಳಿಗೆ ಈ ಸರ್ಕಾರದಲ್ಲಿ ಏನೇ ಮಾಡಿದರೂ ಬಚಾವ್ ಆಗಬಹುದು ಎನ್ನುವ ಮನಸ್ಥಿತಿ ಬಂದಿದ್ದು ಅಂತಹ ವಾತಾವರಣವನ್ನು ಕಾಂಗ್ರೆಸ್ ಸರ್ಕಾರ ಸೃಷ್ಟಿಸಿದೆ. ಓಲೈಕೆಯ ರಾಜಕಾರಣ ಹದ್ದು ಮೀರಿದ್ದು, ಹಿಂದೂ ಸಮುದಾಯದವರ ಮೇಲೆ ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಿದೆ. ಹಸುಗೂಸಿನಿಂದ, ವೃದ್ಧರವರೆಗೆ, ಅಧಿಕಾರಿಯಿಂದ ಗುತ್ತಿಗೆದಾರರವರೆಗೆ ಜೀವಗಳಿಗೆ ಗ್ಯಾರಂಟಿ ಇಲ್ಲದಂತಾಗಿದೆ. ಆದರೆ ಕಾಂಗ್ರೆಸ್ ನಾಯಕರು ಪರಸ್ಪರ ಅವರ ಕುರ್ಚಿ ಉಳಿಸಿಕೊಳ್ಳುವ ತಂತ್ರಗಾರಿಕೆಯಲ್ಲಿ ಮುಳುಗಿದ್ದಾರೆ. ರಾಜ್ಯದ ಜನತೆ ಎಲ್ಲವನ್ನೂ ಗಮನಿಸುತ್ತಿದ್ದಾರೆ. ರಾಜ್ಯ ಸರ್ಕಾರದ ವಿರುದ್ಧ ಅದುಮಿಟ್ಟ ಆಕ್ರೋಶದ ಭಾವನೆಗಳ ಪ್ರಕಟೀಕರಣಕ್ಕೆ ಅವಕಾಶವನ್ನು ಕಾಯುತ್ತಿದ್ದಾರೆ.

ಈ ಎಲ್ಲದರ ನಡುವೆ 144 ವರ್ಷಗಳಿಗೆ ಒಮ್ಮೆ ಬರುವ ಮಹಾಕುಂಭ ಮೇಳ ಪ್ರಧಾನಿ ಶ್ರೀ ಮೋದಿಯವರ ಮಾರ್ಗದರ್ಶನದಲ್ಲಿ, ಶ್ರೀ ಯೋಗಿ ಆದಿತ್ಯನಾಥ್ ರವರ ನೇತೃತ್ವದಲ್ಲಿ ಅತ್ಯಂತ ವ್ಯವಸ್ಥಿತವಾಗಿ ಪ್ರಯಾಗ್‌ರಾಜ್‌ನಲ್ಲಿ ಚಾಲನೆಗೊಂಡಿದೆ. ವಿಶ್ವದ ಅತಿದೊಡ್ಡ ಧಾರ್ಮಿಕ ಸಮ್ಮೇಳನವೊಂದು ನಮ್ಮ ಕಾಲಘಟ್ಟದಲ್ಲಿ ನಡೆಯುತ್ತಿರುವುದು ಹೆಮ್ಮೆಯ ವಿಷಯ.

**(ಬಿದರೆ ಪ್ರಕಾಶ್)**
ಸಂಪಾದಕರು

ದೀವಟಿಗೆ

## ಸ್ವಾತಂತ್ರ್ಯ ಹೋರಾಟದ ಮುಂಚೂಣಿಯ ನಾಯಕ

# ಲಾಲಾ ಲಜಪತ್ ರಾಯ್

ಡಾ. ಹರೀಶ್ ಆತ್ರೇಯ
ಕಾರ್ಯಕರ್ತರು



**ಪಂ**ಜಾಬ್‌ನ ಸಿಂಹ ಎಂದೇ ಪ್ರಖ್ಯಾತರಾಗಿರುವ ಲಾಲಾ ಲಜಪತ್ ರಾಯ್, ಅವರದು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮುಂಚೂಣಿಯಲ್ಲಿರುವ ಹೆಸರು. ಜನವರಿ 28, 1865 ರಂದು ಪಂಜಾಬ್‌ನಲ್ಲಿ ಜನಿಸಿದ ಅವರು ಅಚಲ ಧೈರ್ಯ ಮತ್ತು ಉತ್ಕಟ ದೇಶಭಕ್ತಿಯ ನೇತಾರರಾಗಿ ಲಕ್ಷಾಂತರ ಜನರನ್ನು ಪ್ರೇರೇಪಿಸಿದವರು.

ನಿಷ್ಠಾವಂತ ರಾಷ್ಟ್ರೀಯತಾವಾದಿ, ಸಮೃದ್ಧ ಬರಹಗಾರ ಮತ್ತು ಸಮಾಜ ಸುಧಾರಕರಾದ ಲಾಲಾ ಲಜಪತ್ ರಾಯ್ ಅವರು ಸ್ವಾವಲಂಬನೆ, ಶಿಕ್ಷಣ ಮತ್ತು ಏಕತೆಯ ಮೇಲೆ ಅಭಿವೃದ್ಧಿಶೀಲ ಭಾರತವನ್ನು ಕಲ್ಪಿಸಿಕೊಂಡವರು – ಇದು ಇಂದಿಗೂ ಪ್ರಸ್ತುತವಾಗಿದೆ.

ಭಾರತದವರೇ ಇಲ್ಲದ ಸಮಿತಿ, ಯಾವ ಭಾರತೀಯರ ಮಾತನ್ನೂ ಗಣನೆಗೆ ತೆಗೆದುಕೊಳ್ಳದ ಸಮಿತಿ ಭಾರತದ ಆಡಳಿತವನ್ನು ರಾಜಕೀಯವನ್ನು ಕಾನೂನಿನ ಪರಿಧಿಯಲ್ಲಿ ತರುವುದಕ್ಕೆ ಮಾಡಲಾಗಿತ್ತು. 1928 ರಲ್ಲಿ ಸೈಮನ್ ಆಯೋಗದ ವಿರುದ್ಧದ ಪ್ರತಿಭಟನೆಯ ಸಮಯದಲ್ಲಿ ರಾಯ್ ಅವರ ಸಂಕಲ್ಪವು ಹೆಚ್ಚು ಸ್ಪಷ್ಟವಾಗಿತ್ತು, , ಇಂದು ನನ್ನ ಮೇಲೆ ಹೊಡೆದ ಹೊಡೆತಗಳು ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಶವಪೆಟ್ಟಿಗೆಯ ಕೊನೆಯ ಮೊಳೆಗಳು. ಕ್ರೂರವಾಗಿ ಲಾಠಿ ಚಾರ್ಜ್ ಮಾಡಿದ ನಂತರ ಹೇಳಿದ ಈ ಮಾತುಗಳು ಅವರ ಅದಮ್ಯ ಹೋರಾಟದ ಮನೋಭಾವ ಮತ್ತು ದೇಶದೊಳಿತಿಗಾಗಿ ತ್ಯಾಗ ಮಾಡುವ ಇಚ್ಛೆಯನ್ನು ತೋರಿಸುತ್ತವೆ.

ಅವರು ಬ್ರಿಟೀಷರ ಹೊಡೆತದ ಗಾಯಗಳಿಗೆ ಬಲಿಯಾದರು ಆದರೆ ಭಾರತದ ಸ್ವಾತಂತ್ರ್ಯಕ್ಕಾಗಿ ಹುತಾತ್ಮರಾದರು. ಈ ಸೈಮನ್ ಸಮಿತಿಯು ಬ್ರಿಟಿಷರ ದುರಾಡಳಿತದ ಮತ್ತು ವಸಾಹತುಶಾಹಿಯ ಪ್ರತಿಬಿಂಬವಾಗಿತ್ತು.ಲಾಲಾ ಲಜಪತ್ ರಾಯ್ ಅವರ ಮಹತ್ವದ ಕೊಡುಗೆಗಳಲ್ಲಿ ಒಂದು ಸ್ವಾವಲಂಬನೆ ಮತ್ತು ಶಿಕ್ಷಣಕ್ಕೆ ಅವರ ಒತ್ತು. ಆರ್ಥಿಕ ಸಬಲೀಕರಣ ಮತ್ತು ವ್ಯಾಪಕ ಶಿಕ್ಷಣವು ಬಲಿಷ್ಠ ರಾಷ್ಟ್ರದ ಅಡಿಪಾಯ ಎಂದು ಅವರು ದೃಢವಾಗಿ ನಂಬಿದ್ದರು.

ಅವರ ಆಲೋಚನೆಗಳು ಇಂದೂ ಸಹ ಪ್ರಸ್ತುತವಾಗಿವೆ, ವಿಶೇಷವಾಗಿ ಭಾರತವು ಆತ್ಮನಿರ್ಭರ್ ಭಾರತ್ ನಂತಹ ಉಪಕ್ರಮಗಳ ಮೂಲಕ ಆರ್ಥಿಕ ಸ್ವಾವಲಂಬನೆಗಾಗಿ ಶ್ರಮಿಸುತ್ತಿದೆ. ರಾಯ್ ಅವರ ನೋಟ ಮತ್ತು ಏಕತೆಯ ಕರೆ ವೈವಿಧ್ಯಮಯ ಮತ್ತು ಬಹುತ್ವ ಸಮಾಜದಲ್ಲಿ ಸಮಾನವಾಗಿ ಪ್ರಸ್ತುತವಾಗಿದೆ. ಸಮೃದ್ಧ ರಾಷ್ಟ್ರವನ್ನು ನಿರ್ಮಿಸಲು ಒಡಕುಗಳನ್ನು ನಿವಾರಿಸುವ ಮತ್ತು ಸಾಮರಸ್ಯವನ್ನು ಬೆಳೆಸುವ ಮಹತ್ವವನ್ನು ಅವರ ದೃಷ್ಟಿಕೋನವು ನಮಗೆ ಮಾದರಿಯಾಗಿದೆ.

ಇದಲ್ಲದೆ, ಮಹಿಳೆಯರು ಮತ್ತು ಅಂಚಿನಲ್ಲಿರುವ ಸಮುದಾಯಗಳ ಉನ್ನತಿ ಸೇರಿದಂತೆ ಸಾಮಾಜಿಕ ಸುಧಾರಣೆಗಳಿಗೆ ರಾಯ್ ಅವರ ಸಮರ್ಪಣೆಯು ಲಿಂಗ ಸಮಾನತೆ ಮತ್ತು ಸಾಮಾಜಿಕ ನ್ಯಾಯ ಚಳುವಳಿಗಳ ಪ್ರಸ್ತುತ ಯುಗದಲ್ಲಿ ಮಾರ್ಗದರ್ಶಿ ಬೆಳಕಾಗಿ ಕಾರ್ಯನಿರ್ವಹಿಸುತ್ತದೆ.ಲಾಲಾ ಲಜಪತ್ ರಾಯ್ ಅವರ ಜೀವನವು ಧೈರ್ಯ, ಯುವಜನೋತ್ತೇಜನ ಮತ್ತು ರಾಷ್ಟ್ರೀಯ ಪ್ರಗತಿಗೆ ಅಚಲವಾದ ಬದ್ಧತೆಗೆ ಸಾಕ್ಷಿಯಾಗಿದೆ. ನಾವು ಸಮಕಾಲೀನ ಸವಾಲುಗಳನ್ನು ಗಮನಿಸಿ ನೋಡುವಾಗ, ಅವರ ಆಲೋಚನೆಗಳು ಮತ್ತು ಕಾರ್ಯಗಳು ಭರವಸೆಯ ದಾರಿದೀಪ ಮತ್ತು ನ್ಯಾಯಯುತ, ಸಶಕ್ತ ಮತ್ತು ಅಖಂಡ ಭಾರತವನ್ನು ನಿರ್ಮಿಸುವ ಮಾರ್ಗಸೂಚಿಯಾಗಿ ಉಳಿದಿವೆ.

# ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಬಿಜೆಪಿ



**ದೇಶಕ್ಕೆ ಡಾ. ಬಿ ಆರ್. ಅಂಬೇಡ್ಕರ್ ಕೊಟ್ಟ ಕೊಡುಗೆಗಳು ಮತ್ತು ಅವರ ಸಾಧನೆಗಳನ್ನು ಗೌರವಿಸುವ ದೃಷ್ಟಿಯಿಂದ ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ನೇತೃತ್ವದ ಕೇಂದ್ರದ ಬಿಜೆಪಿ ಸರಕಾರ ಅವರಿಗೆ ಸಂಬಂಧಿಸಿದ ಐತಿಹಾಸಿಕ ಸ್ಥಳಗಳು ಮತ್ತು ಅವರು ಸಾಮಾಜಿಕ ನ್ಯಾಯಕ್ಕಾಗಿ ಪ್ರತಿಪಾದಿಸಿದ ವಿಚಾರಗಳನ್ನು ಪ್ರಚಾರ ಮಾಡುವ ನಿಟ್ಟಿನಲ್ಲಿ ಅನೇಕ ಕ್ರಮಗಳನ್ನು ಕೈಗೊಂಡಿದೆ.**

**ಪಂಚತೀರ್ಥ**

# ಡಾ.ಅಂಬೇಡ್ಕರ್‌ಗೆ ಸಂಬಂಧಿಸಿದ ಐದು ಪವಿತ್ರ ಕ್ಷೇತ್ರಗಳನ್ನು ಅಭಿವೃದ್ಧಿಗೊಳಿಸುವ ಕಾರ್ಯ, ಬಾಬಾಸಾಹೇಬರಿಗೆ ಗೌರವ ಸಮರ್ಪಣೆ. .



**ಅಂಬೇಡ್ಕರ್ ಜನನ ಸ್ಥಳ :** ಡಾ. ಅಂಬೇಡ್ಕರ್‌ರವರ ಜನ್ಮಸ್ಥಳವಾದ ಮಧ್ಯಪ್ರದೇಶದ ಅಂಬೇಡ್ಕರನಗರ (ಮಹು) ಅಭಿವೃದ್ಧಿಗೆ 1991ರ ಏಪ್ರಿಲ್ 14ರಂದು ಮಧ್ಯಪ್ರದೇಶದ ಮುಖ್ಯಮಂತ್ರಿ ಶ್ರೀ ಸುಂದರಲಾಲ್‌ಪಟ್ವಾ ಮತ್ತು ರಾಜ್ಯಮಂತ್ರಿ ಶ್ರೀ ಥ್ಯಾವರ್‌ಚಂದ್ ಪ್ರಯತ್ನದಿಂದ ಶಿಲಾನ್ಯಾಸ. 2008ರ ಏಪ್ರಿಲ್ 14ರಂದು ಅಂದಿನ ಉಪಪ್ರಧಾನಿ ಮಂತ್ರಿ ಶ್ರೀ ಲಾಲ್‌ಕೃಷ್ಣ ಆಡ್ವಾನಿಯವರವರಿಂದ ಲೋಕಾರ್ಪಣೆ. ಪ್ರತೀ ವರ್ಷ ಏಪ್ರಿಲ್ 14 ರಿಂದ 17ರವರೆಗೆ ವಿಶೇಷ ಮೇಳದ ಆಯೋಜನೆ. ಭಾಗವಹಿಸುವ ಎಲ್ಲರಿಗೂ ಉಚಿತವಾದ ಊಟ, ವಸತಿ ಮತ್ತು ಆರೋಗ್ಯ ಸೇವೆಯ ವ್ಯವಸ್ಥೆ.


**ಯು.ಕೆ.ಯಲ್ಲಿ ವಿದ್ಯಾಭ್ಯಾಸದ ಸಂದರ್ಭದಲ್ಲಿ ವಾಸವಾಗಿದ್ದ ಮನೆ :** ಪ್ರಧಾನಿ ಶ್ರೀ ನರೇಂದ್ರಮೋದಿ, ಮಹಾರಾಷ್ಟ್ರದ ಮುಖ್ಯಮಂತ್ರಿ ಶ್ರೀ ದೇವೇಂದ್ರ ಫಡ್ನವೀಸ್ ಮತ್ತು ಮಹಾರಾಷ್ಟ್ರದ ಶಿಕ್ಷಣ ಮಂತ್ರಿ ಶ್ರೀ ವಿನೋದ್ ಥ್ಯಾವಡೆಯವರ ತೀವ್ರ ಪ್ರಯತ್ನದಿಂದ ಬ್ರಿಟನ್ ರಾಜಧಾನಿ ಲಂಡನ್‌ನ 10 ಕಿಂಗ್ ಹೆನ್ರಿಜ್ ರಸ್ತೆಯಲ್ಲಿರುವ ಡಾ. ಅಂಬೇಡ್ಕರ್‌ರವರು ವ್ಯಾಸಂಗ ಮಾಡುತ್ತಿದ್ದ ಕಟ್ಟಡವನ್ನು 35 ಕೋ.ರೂ. ಗಳಿಗೆ ಖರೀದಿಸಿ ಡಾ.ಅಂಬೇಡ್ಕರ್‌ರವರ ಭವ್ಯ ಸ್ಮಾರಕ ನಿರ್ಮಾಣ ಕಾರ್ಯ ಪ್ರಾರಂಭ. ಲಂಡನ್‌ಗೆ ವಿದ್ಯಾಭ್ಯಾಸಕ್ಕಾಗಿ ಬರುವ ದಲಿತ ವಿದ್ಯಾರ್ಥಿಗಳಿಗೆ ಮೂಲಭೂತ ಸೌಕರ್ಯಗಳನ್ನು ಉಚಿತವಾಗಿ ಭರಿಸುವ ವ್ಯವಸ್ಥೆ.





**ದೀಕ್ಷಾ ಭೂಮಿ, ನಾಗಪುರ :** 1956ರ ಅಕ್ಟೋಬರ್ 14 ರಂದು ಮಹಾರಾಷ್ಟ್ರದ ನಾಗಪುರದ ಲಕ್ಷ್ಮಿನಗರದಲ್ಲಿ ಲಕ್ಷಾಂತರ ಅನುಯಾಯಿಗಳೊಡನೆ ಡಾ. ಅಂಬೇಡ್ಕರ್‌ರವರು ಭೌದ್ಧ ಧರ್ಮ ದೀಕ್ಷೆಯನ್ನು ತೆಗೆದುಕೊಂಡ ಸ್ಥಳವಾದ ದೀಕ್ಷಾಭೂಮಿಯ ಅಭಿವೃದ್ಧಿಗಾಗಿ ಪ್ರಧಾನಿ ಶ್ರೀ ಮೋದಿ ರವರ ಮಾರ್ಗದರ್ಶನದಲ್ಲಿ ಶ್ರೀ ನಿತಿನ್ ಗಡ್ಕರಿಯವರ ನೇತೃತ್ವದಲ್ಲಿ ಭವ್ಯ ಸ್ಮಾರಕ ನಿರ್ಮಾಣ. ಪ್ರತೀ ವರ್ಷ ದಸರೆಯ ವೇಳೆಯಲ್ಲಿ ಭವ್ಯ ಮೇಳದ ಆಯೋಜನೆ.

**'ಮಹಾಪರಿನಿರ್ವಾಣ ಸ್ಥಳ', ದೆಹಲಿ :** ಡಾ.ಅಂಬೇಡ್ಕರ್‌ರವರ ಪರಿನಿರ್ವಾಣ ಹೊಂದಿದ ದೆಹಲಿಯ ನಂ 26, ಅಲಿಪುರ ರಸ್ತೆಯ ಉದ್ಯಮಿ ಜಿಂದಾಲ್ ಒಡೆತನದಲ್ಲಿದ್ದ ಮನೆಯನ್ನು ಪ್ರಧಾನಿ ಅಟಲ್‌ಜೀ ಮತ್ತು ಸಮಾಜ ಕಲ್ಯಾಣ ಮಂತ್ರಿ ಸತ್ಯನಾರಾಯಣ ಜತಿಯಾರವರ ಅಧಿಕಾರದಲ್ಲಿ 16 ಕೋಟಿ ರೂಗಳಿಗೆ ಖರೀದಿ. ಈ ಪವಿತ್ರ ಸ್ಥಾನದಲ್ಲಿ ಸ್ಮಾರಕ ನಿರ್ಮಾಣಕ್ಕಾಗಿ 2003ರ ಡಿಸೆಂಬರ್ ಶಿಲಾನ್ಯಾಸ. ಒಂದು ವರ್ಷದಲ್ಲಿಯೇ ಪೂರ್ಣಗೊಳಿಸಿ ಲೋಕಾರ್ಪಣೆ.





**ಚೈತ್ಯ ಭೂಮಿ ಮುಂಬಯಿ :** ಮುಂಬಯಿನ ದಾದರ್‌ನಲ್ಲಿನ ಡಾ.ಅಂಬೇಡ್ಕರ್ ಅಂತ್ಯಕ್ರಿಯೆಯಾದ ಹಿಂದು ಮಿಲನಕ್ಕೆ ಸೇರಿದ ಜಾಗವನ್ನು ಪ್ರಧಾನಿ ನರೇಂದ್ರಮೋದಿ ಮತ್ತು ಮಹಾರಾಷ್ಟ್ರದ ಮುಖ್ಯಮಂತಿ ಶ್ರೀ ದೇವೇಂದ್ರ ಫಡ್ನಸ್‌ವಿಸರ ಸಾರಥ್ಯದಲ್ಲಿ ಸರಕಾರಕ್ಕೆ ಪಡೆದು ಅಲ್ಲಿ ಡಾ. ಅಂಬೇಡ್ಕರ್‌ರವರ ಭವ್ಯ ಸ್ಮಾರಕ ನಿರ್ಮಾಣದ ಕಾರ್ಯಾರಂಭ. .

# ಬಿಜೆಪಿ ಸರಕಾರದಿಂದ ಡಾ.ಅಂಬೇಡ್ಕರ್ ಪ್ರೇರಿತ ಕಾರ್ಯಕ್ರಮಗಳು

- 26 ನವೆಂಬರ್ 2015ರಂದು ಪ್ರಧಾನಿ ಶ್ರೀ ನರೇಂದ್ರ ಮೋದಿ ರವರಿಂದ ಕಾನ್ಸ್ಟಿಟ್ಯೂಟ್ ಅಸೆಂಬ್ಲಿಯಲ್ಲಿ ಸಂವಿಧಾನವನ್ನು ಸ್ವೀಕರಿಸಿದ ದಿನದ ನೆನಪಿಗಾಗಿ ಸಂವಿಧಾನ ದಿನವನ್ನು ಆಚರಿಸುವ ನಿರ್ಧಾರ. 2010 ರಲ್ಲಿ ಪ್ರಧಾನಿ ಮೋದಿಯವರು ಗುಜರಾತಿನ ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಸಂವಿಧಾನ ಸ್ವೀಕಾರವಾದ 60ನೇ ವರ್ಷಾಚರಣೆಯ ಸಂದರ್ಭದಲ್ಲಿ ಸಂವಿಧಾನ ಸಮ್ಮಾನ ಯಾತ್ರೆಯ ಆಯೋಜನೆ, ಸಂವಿಧಾನದ ಪ್ರತಿಯೊಂದನ್ನು ಆನೆಯ ಅಂಬಾರಿಯಲ್ಲಿ ಇಟ್ಟು ನಗರದ ಉದ್ದಕ್ಕೂ ಅದರ ಮಹತ್ವ ಮತ್ತು ಪಾವಿತ್ರತೆಯನ್ನು ಸಾರಲು ಮೆರವಣಿಗೆ ಮಾಡಿಸಿದ ಹೆಗ್ಗಳಿಕೆ.
- 2016ರ ಜನವರಿ 26ರಂದು ದೆಹಲಿಯ ಗಣರಾಜ್ಯೋತ್ಸವದ ಪರೇಡಿನಲ್ಲಿ ಅಂಬೇಡ್ಕರ್ ಅವರ ಜೀವನದ ಸಂದೇಶ ಸಾರುವ ಸ್ತಬ್ಧಚಿತ್ರ ಪ್ರದರ್ಶನ ಮಾಡಲಾಯಿತು.
- ದೇಶದ ಸರ್ವೋಚ್ಚ ನ್ಯಾಯಾಲಯ ಹಾಗೂ ಕಾನೂನು ಸಚಿವಾಲಯದ ಆವರಣದಲ್ಲಿ ಅಂಬೇಡ್ಕರ್ ಪ್ರತಿಮೆಯನ್ನು ಮತ್ತು ಸಂಸತ್ ಭವನದಲ್ಲಿ ಝುಬಾ ಅಮರೋಹಾವಿ ಅವರು ರಚಿಸಿದ ಅಂಬೇಡ್ಕರ್ ಅವರ ವರ್ಣಚಿತ್ರದ ಅನಾವರಣ.
- ದೇಶ ಸಂವಿಧಾನವನ್ನು ಸ್ವೀಕರಿಸಿ 75 ವರ್ಷ ಪೂರೈಸುತ್ತಿರುವ ಈ ಸಂದರ್ಭದಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ನೇತೃತ್ವದಲ್ಲಿ ದೇಶದಾದ್ಯಂತ ಮುಂದಿನ ಒಂದು ವರ್ಷ ನಮ್ಮ ಸಂವಿಧಾನ ನಮ್ಮ ಸ್ವಾಭಿಮಾನ ಎನ್ನುವ ಧ್ಯೇಯವಾಕ್ಯದೊಂದಿಗೆ ಇದರ ಸಂಭ್ರಮಾಚರಣೆಯನ್ನು ಇಡಿ ದೇಶದಲ್ಲಿ ಆಚರಿಸಲಾಗುತ್ತಿದೆ.
- ಹಣ ವರ್ಗಾವಣೆ ಆ್ಯಪ್‌ಗೆ ಭೀಮ್ ಎಂದು ನಾಮಕರಣ.
- ದೇಶದಲ್ಲಿ ಉನ್ನತ ವ್ಯಾಸಂಗ ಮಾಡಲು ಇಚ್ಛಿಸುವ ಎಸ್‌ಸಿ/ ಎಸ್‌ಟಿ ವಿದ್ಯಾರ್ಥಿಗಳಿಗೆ ನೀಡಲಾಗುವ ವಿದ್ಯಾರ್ಥಿ ವೇತನವನ್ನು 60% ರಿಂದ 100%ಕ್ಕೆ ಏರಿಕೆ.
- ಎಸ್‌ಸಿ/ಎಸ್‌ಟಿ ಫಲಾನುಭವಿಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ ವೈದ್ಯಕೀಯ ನೆರವು ಪಡೆಯಲು ಇರುವ ಆದಾಯ ಮಿತಿಯನ್ನು ರೂ.1 ಲಕ್ಷದಿಂದ ರೂ.3 ಲಕ್ಷಕ್ಕೆ ಏರಿಕೆ.
- ಡಾ.ಅಂಬೇಡ್ಕರ್ ಸ್ಮರಣಾರ್ಥ ಅಂಚೆ ಚೀಟಿ ಬಿಡುಗಡೆ. ಡೆಹ್ರಾಡೂನ್ ಎನ್.ಐ.ಹೆಚ್ ಸಹಯೋಗದೊಡನೆ ಅಂಬೇಡ್ಕರ್‌ರವರ ಸಂಗ್ರಹ ಕೃತಿಗಳ ಆಡಿಯೋ ಸಿ.ಡಿ. ಮತ್ತು ಬ್ರೈಲ್ ಆವೃತ್ತಿಯ ಬಿಡುಗಡೆ.
- 100 ವಿದ್ಯಾರ್ಥಿಗಳಿಗೆ ಕೊಲಂಬಿಯಾ ವಿಶ್ವವಿದ್ಯಾನಿಲಯ ಹಾಗೂ ಡಾ.ಅಂಬೇಡ್ಕರ್ ಅವರು ಶಿಕ್ಷಣ ಪಡೆದ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ಗೆ ಶೈಕ್ಷಣಿಕ ಪ್ರವಾಸ. ಪ್ರಧಾನಿ ಮೋದಿಯವರಿಂದ ಅಂಬೇಡ್ಕರ್ ಸ್ಮರಣಾರ್ಥ ರೂ.20 ಮತ್ತು ರೂ.10ರ ನಾಣ್ಯ ಬಿಡುಗಡೆ.

### 2014 ರ ನಂತರ ಸಾಮಾಜಿಕ ನ್ಯಾಯದ ವ್ಯಾಪಕತೆಯ ಹೆಚ್ಚಳ

- ವೈದ್ಯಕೀಯ ಶಿಕ್ಷಣದ ಕೋಟಾದಡಿಯ ಅಖಿಲಭಾರತೀಯ ನೀಟ್ (NEET) ನಲ್ಲಿ ಒಬಿಸಿ ಗೆ ಮೀಸಲಾತಿ ಕಲ್ಪಿಸಿದೆ.
- ರಾಷ್ಟ್ರೀಯ ಹಿಂದುಳಿದ ವರ್ಗದ ಆಯೋಗಕ್ಕೆ ಸಂವಿಧಾನಿಕ ಸ್ಥಾನಮಾನ ಕಲ್ಪಿಸುವ ಮೂಲಕ ಆಯೋಗಕ್ಕೆ ಇನ್ನೂ ಹೆಚ್ಚಿನ ಕ್ಷಮತೆಯಿಂದ ಕೆಲಸ ಮಾಡುವ ಶಕ್ತಿ ಸಿಕ್ಕಿತು
- ನವೋದಯ ವಿದ್ಯಾಲಯಗಳಲ್ಲಿ ಓಬಿಸಿ ಸಮುದಾಯಕ್ಕೆ ಮೀಸಲಾತಿ ಕಲ್ಪಿಸಲಾಗಿದೆ
- ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ಸರಕಾರಿ ಉದ್ಯೋಗದಲ್ಲಿ 10% ಮೀಸಲಾತಿ.
- ಕೇಂದ್ರ ಮಂತ್ರಿಮಂಡಲದಲ್ಲಿ 27 ಒಬಿಸಿ ಸಮುದಾಯದ ಸಂಸದರಿಗೆ ಸಚಿವ ಸ್ಥಾನ ಕಲ್ಪಿಸಿರುವುದು ಪ್ರಧಾನಿ ಶ್ರೀ ಮೋದಿ ನೇತೃತ್ವದ ಸರಕಾರಕ್ಕೆ ಈ ಸಮುದಾಯದ ಬಗ್ಗೆ ಇರುವ ಬದ್ಧತೆಯನ್ನು ತೋರಿಸುತ್ತದೆ
- ದೇಶದ ಇತಿಹಾಸದಲ್ಲೇ ಮೊದಲ ಸಲ ಸರ್ವೋಚ್ಚ ನ್ಯಾಯಾಲಯಕ್ಕೆ ಮೂವರು ದಲಿತ ನ್ಯಾಯಾಧೀಶರ ನೇಮಕ.
- ಒಬಿಸಿ ಸಮುದಾಯಕ್ಕೆ ಕೇಂದ್ರ ಸಂಶೋಧನಾ ಫೆಲೋಶಿಪ್ (RNGF). ಇದು ಒ ಬಿ ಸಿ ಸಮುದಾಯದ ಯುವಕರ ಉನ್ನತ

ವ್ಯಾಸಂಗಕ್ಕೆ ಸಹಕಾರಿ ಆಗಲಿದೆ.

- ದಲಿತ ಕಲಾವಿದರಾದ ಶ್ರೀ ಇಳಯರಾಜ ಅವರನ್ನು ರಾಜ್ಯ ಸಭೆಗೆ ನಾಮನಿರ್ದೇಶನ ಮಾಡಲಾಗಿದೆ. ಇದು ದೇಶದ ಇತಿಹಾದಲ್ಲೇ ಮೊದಲಬಾರಿಗೆ ಹೀಗೆ ಒಬ್ಬ ದಲಿತರನ್ನು ರಾಜ್ಯ ಸಭೆಗೆ ನಾಮನಿರ್ದೇಶನ ಮಾಡುತ್ತಿರುವುದು.
- ಆರ್ಟಿಕಲ್ 370 ಮೂಲೋಚ್ಚಾಟನೆ.
- 2019ರಲ್ಲಿ ಆರ್ಟಿಕಲ್ 370 ಮೂಲೋಚ್ಚಾಟನೆ ಮಾಡುವ ಮೂಲಕ ದೇಶದ ಎಲ್ಲಾ ಭಾಗಕ್ಕೆ ಭಾರತದ ಸಂವಿಧಾನವನ್ನು ಜಾರಿಗೆ ತರುವ ಕೆಲಸವಾಯಿತು. ಇದಕ್ಕೂ ಮುನ್ನ ಭಾರತದ ಸಂವಿಧಾನ ಕಾಶ್ಮೀರಕ್ಕೆ ಅನ್ವಯ ಆಗುತ್ತಿರಲಿಲ್ಲ. ಈ ಕಾರಣ ಅಲ್ಲಿ ಅನೇಕ ತಾರಮ್ಯಗಳಿದ್ದವು.
- ಆರ್ಟಿಕಲ್ 370ರ ಕಾರಣ ದೇಶ ವಿಭಜನೆಯ ಸಮಯದಲ್ಲಿ ವಲಸೆ ಬಂದ ಸಾವಿರಾರು ಹಿಂದು ಮತ್ತು ಸಿಖ್ ಸಮುದಾಯದ ಜನರಿಗೆ ಸಂವಿಧಾನಿಕ ಹಕ್ಕುಗಳನ್ನು ನಿರಾಕರಿಸಲಾಯಿತು. ಅವರಿಗೆ ಮತದಾನದ ಅವಕಾಶವನ್ನು ವಾಸ್ತವ್ಯದ ಹಕ್ಕನ್ನೂ ನಿರಾಕರಿಸಲಾಯಿತು. ರಾಜ್ಯದಲ್ಲಿ ಅಲ್ಪಸಂಖ್ಯಾತರ ಹಕ್ಕುಗಳನ್ನು ಮೊಟಕುಗೊಳಿಸಲಾಯಿತು. ಅವರನ್ನು ಸಾಮಾಜಿಕ ನ್ಯಾಯದಿಂದ ವಂಚಿಸಲಾಯಿತು. ಮೀಸಲಾತಿ ಸೌಲಭ್ಯದಿಂದ ದೂರ ಇಡಲಾಯಿತು. ದಲಿತರನ್ನು ಅತಿ ಹೆಚ್ಚು ಶೋಷಿಸಲಾಯಿತು. ಅವರಿಗೆ ಯಾವುದೇ ಶೈಕ್ಷಣಿಕ ಅರ್ಹತೆ ಇದ್ದರೂ ಕೇವಲ ಕಸ ಗುಡಿಸುವ ಕೆಲಸವನ್ನಷ್ಟೇ ಸರಕಾರದಲ್ಲಿ ನೀಡಲಾಗುತ್ತಿತ್ತು. ಅವರಿಗೆ ಶಾಶ್ವತ ವಸತಿಯನ್ನು ನಿರಾಕರಿಸಲಾಯಿತು.
- 2019 ರ ನಂತರ ಆದ ಬದಲಾವಣೆಯಿಂದ ಜಮ್ಮು ಮತ್ತು ಕಾಶ್ಮೀರದ ಮಹಿಳೆಯರಿಗೆ ಸಂಪತ್ತಿನ ಮೇಲೆ ಸಮಾನ ಅಧಿಕಾರ ಸಿಕ್ಕವು. ಅಲ್ಲಿ ಹಿಂದುಳಿದ ಜಾತಿ ಮತ್ತು ಜನಾಂಗಗಳಿಗೆ ಸರಕಾರದ ಎಲ್ಲಾ ಸೌಲಭ್ಯಗಳು ಸಮಾನವಾಗಿ ಸಿಕ್ಕವು. ಈ ಮೂಲಕ ದಶಕಗಳಿಂದ ನಿರಾಕರಿಸಲ್ಪಟ್ಟ ಸಂವಿಧಾನದತ್ತ ಅಧಿಕಾರಗಳು ಸಮಾಜದ ಎಲ್ಲಾ ವರ್ಗಗಳಿಗೆ ಸಿಕ್ಕವು.


## ಕೇಂದ್ರೀಯ ಶಿಕ್ಷಣ ಸಂಸ್ಥೆಗಳ ಶಿಕ್ಷರ ನೇಮಕಾತಿಯಲ್ಲಿ ಮೀಸಲಾತಿ ಮಸೂದೆ 2019

- ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಶಿಕ್ಷಕರ ನೇಮಕಾತಿಯಲ್ಲಿ ಮೀಸಲಾತಿ ಕಲ್ಪಿಸಿರುವುದು ದೇಶದ ಶೈಕ್ಷಣಿಕ ಕ್ಷೇತ್ರದಲ್ಲಿ ಅತ್ಯಂತ ಕ್ರಾಂತಿಕಾರಿ ನಿರ್ಧಾರವಾಗಿದೆ. ಈ ಮಸೂದೆಯ ಮೂಲಕ ದೇಶದ ವಿಶ್ವವಿದ್ಯಾನಿಲಯದಲ್ಲಿ ದಶಕಗಳಿಂದ ಆಗುತ್ತಿದ್ದ ಅಸಮಾನತೆಯನ್ನು ನಿವಾರಿಸಿದೆ.
- ಅನೇಕ ವರ್ಷಗಳಿಂದ ಎಡಪಂಥೀಯರ ಕಪಿಮುಷ್ಠಿಯಲ್ಲಿ ಸಿಲುಕಿದ್ದ ಶೈಕ್ಷಣಿಕ ವ್ಯವಸ್ಥೆಯನ್ನು ಸುಧಾರಿಸುವಲ್ಲಿ ನಿರಂತರವಾಗಿ ಅಧಿಕಾರದಲ್ಲಿ ಇದ್ದ ಕಾಂಗ್ರೆಸ್ ಸರಕಾರ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ. 1997 ರಲ್ಲಿ ಮೀಸಲಾತಿಯ ಮೂಲಕ ಭರ್ತಿಯಾಗದೇ ಇದ್ದ ಅನೇಕ ಉಪನ್ಯಾಸಕರ ಹುದ್ದೆಯನ್ನು ಭರ್ತಿ ಮಾಡಲು ವಾಮ ಮಾರ್ಗವನ್ನು ಹಿಡಿದ ಸರಕಾರ 1995ರ ಸಬರ್ವಾಲ್ ತೀರ್ಪಿನ ಆಶಯಗಳನ್ನು ಗಾಳಿಗೆ ತೂರಿ ಮೀಸಲು ಹುದ್ದೆಗಳನ್ನು ರಾತ್ರೋರಾತ್ರಿ ಸಾಮಾನ್ಯ ಹುದ್ದೆಗಳನ್ನಾಗಿ ಪರಿವರ್ತಿಸಿತು. ತೀರ್ಪಿನಲ್ಲಿ, ಖಾಲಿ ಹುದ್ದೆ ಆಧಾರಿತ ಮೀಸಲಾತಿಯ ಬದಲು ಹುದ್ದೆ ಆಧಾರಿತ ಮೀಸಲಾತಿ ತರುವಂತೆ ಹೇಳಿತ್ತು. ಜೊತೆಗೆ ಮೀಸಲಾತಿ ಹುದ್ದೆಗಳು ತುಂಬುವ ತನಕ ಹಳೆಯ ಮೀಸಲಾತಿ ವ್ಯವಸ್ಥೆ ಮುಂದುವರಿಯಬೇಕು ಎಂದು ಹೇಳಿದ್ದರೂ ಸರಕಾರ ಅದನ್ನು ಮೀರಿ ನೇಮಕಾತಿ ಮಾಡಿತು. ಈ ಮೂಲಕ ನೈಜ ಫಲಾನುಭವಿಗಳ ಹಕ್ಕನ್ನು ಕಿತ್ತುಕೊಳ್ಳಲಾಯಿತು. ಮೋದಿ ಸರಕಾರ ಈ ಅನ್ಯಾಯವನ್ನು ಕಿತ್ತೊಗೆದು ಹೊಸ ಮೀಸಲಾತಿ ನಿಯಮಗಳು ತರುವ ಮೂಲಕ ಸಾವಿರಾರು ಪರಿಶಿಷ್ಟ ಜಾತಿ, ಜನಾಂಗ , ಒಬಿಸಿ ಹಾಗೂ ಆರ್ಥಿಕವಾಗಿ ಹಿಂದುಳಿದ ಮಂದಿಗೆ ವಿಶ್ವವಿದ್ಯಾನಿಲಯಗಳಲ್ಲಿ ಉದ್ಯೋಗ ದೊರೆಯಿತು.

## ಭಾರತೀಯ ನ್ಯಾಯಸಂಹಿತೆ

- ವಸಾಹತುಶಾಹಿ ಕಾನೂನು ವ್ಯವಸ್ಥೆಯನ್ನು ತೊಲಗಿಸಿ ಭಾರತೀಯ ನ್ಯಾಯ ವ್ಯವಸ್ಥೆಯನ್ನು ಜಾರಿಗೆ ತರುವಲ್ಲಿ ಕೇಂದ್ರದ ಮೋದಿ ಸರಕಾರ ಐತಿಹಾಸಿಕ ತೀರ್ಮಾನಗಳನ್ನು ತೆಗೆದುಕೊಂಡಿದೆ. ಬ್ರಿಟೀಷರ ಕಾಲದ ಭಾರತೀಯ ದಂಡ ಸಂಹಿತೆಯನ್ನು (IPC) ಭಾರತೀಯ ನ್ಯಾಯ ಸಂಹಿತೆ (BNS) ಮತ್ತು ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ (BNSS) ಎಂದು ಬದಲಾವಣೆ ಮಾಡಲಾಯಿತು. ಈ ಮೂಲಕ ವಸಾಹತುಶಾಹಿಯ ದಾಸ್ಯದ ಸಂಕೇತವಾಗಿದ್ದ ಕಾನೂನುಗಳಿಂದ ದೇಶಕ್ಕೆ ಮುಕ್ತಿ ಸಿಕ್ಕಿತು.
- ಹಿಂದಿನ ವಸಾಹತುಶಾಹಿ ಕಾನೂನುಗಳು ಎಷ್ಟು ಕಠೋರವಾಗಿದ್ದವು ಎಂಬುದಕ್ಕೆ 1817ರ ಕ್ರಿಮಿನಲ್ ಟ್ರೈಬ್ ಆ್ಯಕ್ಟ್ ಒಂದರ ಉದಾಹರಣೆ ಸಾಕು, ಈ ಕಾನೂನು, ದಲಿತರ, ಬುಡಕಟ್ಟು ಜನಾಂಗ ಹಾಗೂ ಇತರೆ ಹಿಂದುಳಿದ ವರ್ಗಗಳ ಮೇಲೆ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಮೇಲೂ ದೌರ್ಜನ್ಯಗಳನ್ನು ಎಸಗುತ್ತಿದ್ದವು. ಈಗ ತಂದಿರುವ ಹೊಸ ಕಾನೂನು ಇಂತಹ ಅನೇಕ ಐತಿಹಾಸಿಕ ಅಸಮಾನತೆಯನ್ನು ತೊಡೆದು ಹಾಕಿದೆ.
- ಭಾರತೀಯ ನ್ಯಾಯ ಸಂಹಿತೆಯ ಮತ್ತೊಂದು ವಿಶೇಷತೆ ಎಂದರೆ ಇದರಲ್ಲಿ ಶಿಕ್ಷೆ ಕೊಡುವುದಕ್ಕಿಂತಲೂ ನ್ಯಾಯ ಒದಗಿಸವುದಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡಲಾಗಿದೆ. ಮಹಿಳೆಯರ ಮತ್ತು ಮಕ್ಕಳ ಸುರಕ್ಷತೆಗೆ ಹೆಚ್ಚಿನ ಒತ್ತನ್ನು ಈ ಕಾನೂನಿನಲ್ಲಿ ಕೊಡಲಾಗಿದೆ. ಭಾರತೀಯ ನ್ಯಾಯ ಸಂಹಿತೆ ಹಾಗೂ ಇದಕ್ಕೆ ಸಂಬಂಧಿಸಿದ ಇತರ ಕಾನೂನಗಳು ಭಾರತೀಯ ಅಪರಾಧಿ ನ್ಯಾಯಕ ವ್ಯವಸ್ಥೆಯನ್ನು ಹೆಚ್ಚು ಸದೃಢ ಹಾಗೂ ದೂರಗಾಮಿ ಪರಿಣಾಮಗಳನ್ನು ಬೀರುವ ವ್ಯಸವಸ್ಥೆಯನ್ನಾಗಿ ಮಾಡಿದೆ. ಭಾರತೀಯ ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿದು ಮುಂದಾಲೋಚನೆ ಹೊಂದಿರುವ

# ಡಾ. ಬಾಬಾ ಸಾಹೇಬ್ ಡಾ.ಅಂಬೇಡ್ಕರ್ ಅವರಿಗೆ ಕಾಂಗ್ರೆಸ್ ಮಾಡಿದ ಅವಮಾನಗಳು




ಸಂವಿಧಾನ ಶಿಲ್ಪಿ ಸಾಮಾಜಿಕ ನ್ಯಾಯದ ಹರಿಕಾರರಾದ ಡಾ. ಬಿ ಆರ್. ಅಂಬೇಡ್ಕರ್‌ರವರನ್ನು ಅವಮಾನಿಸುವ ಕೆಲಸವನ್ನು ಕಾಂಗ್ರೆಸ್ ಅತ್ಯಂತ ವ್ಯವಸ್ಥಿತವಾಗಿ ನಿರಂತರವಾಗಿ ಮಾಡುತ್ತಲೇ ಬಂದಿತು.

ಅವರು ಬದುಕಿದ್ದಾಗ ಅವರ ರಾಜಕೀಯ ಬೆಳವಣಿಗೆಯನ್ನು ಸಹಿಸದೆ ಅವರನ್ನು ವಿರೋಧಿಸಿದ ಕಾಂಗ್ರೆಸ್, ಅವರ ನಿಧನದ ನಂತರವೂ ಇದನ್ನು ಮುಂದುವರೆಸಿತು. ಆದರೆ ಕಾಲಾನುಕ್ರಮದಲ್ಲಿ ವೋಟ್ ಬ್ಯಾಂಕ್‌ಗಾಗಿ ಡಾ. ಅಂಬೇಡ್ಕರ್‌ರವರ ಹೆಸರನ್ನು ಅತಿ ಹೆಚ್ಚು ಉಪಯೋಗಿಸಿಕೊಂಡಿದ್ದು ಈ ಕಾಂಗ್ರೆಸ್ ಎಂಬುದು ವಿಪರ್ಯಾಸದ ಸಂಗತಿ. ಇದರಿಂದಾಗಿ ಅಂಬೇಡ್ಕರ್ ಸದಾ ಕಾಂಗ್ರೆಸ್ ಪಕ್ಷದ ಈ ಕುತಂತ್ರ ರಾಜಕಾರಣವನ್ನು ವಿರೋಧಿಸಿದ್ದರು. ಕಾಂಗ್ರೆಸ್ ತಮ್ಮನ್ನು ವಿರೋಧಿಸಿದ್ದು ಮಾತ್ರವಲ್ಲ, ದಲಿತರನ್ನು ತಮ್ಮ ರಾಜಕೀಯ ದಾಳವಾಗಿ ಬಳಸಿಕೊಂಡಿರುವುದರ ಬಗ್ಗೆ 1945ರಲ್ಲಿ ಅಂಬೇಡ್ಕರವರು ಪ್ರಕಟಿಸಿದ ತಮ್ಮ ಕೃತಿ What Congress and Gandhi have Done to the Untouchables ಯಲ್ಲಿ ವಿವರಿಸಿದ್ದಾರೆ.

### ಡಾ.ಅಂಬೇಡ್ಕರ್ ಅವರನ್ನು ಸೋಲಿಸಲು ಕಾಂಗ್ರೆಸ್ ಕುತಂತ್ರ

ಕಾಂಸ್ಟಿಟ್ಯುಟ್ ಅಸ್ಸೆಂಬ್ಲಿಯಲ್ಲಿ ದಲಿತರ 31 ಮೀಸಲು ಸ್ಥಾನ ಸೇರಿದಂತೆ ಒಟ್ಟು 296 ಸ್ಥಾನಗಳಿದ್ದವು. ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಮುಂಬೈ ಅಧ್ಯಕ್ಷರಾಗಿದ್ದ ಬಿ.ಜಿ. ಖರೆ ಅವರು ಡಾ.ಅಂಬೇಡ್ಕರ್ ಅವರನ್ನು ದ್ವೇಷ ಹಾಗೂ ಮಾತ್ಸರ್ಯದ ಕಾರಣಕ್ಕೆ ಅಂಬೇಡ್ಕರ್‌ರವರನ್ನು ಸೋಲಿಸುತ್ತಾರೆ. ನಂತರ ನಾಮಶೂದ್ರ ನಾಯಕ ಜೋಗೇಂದ್ರನಾಥ ಮಂಡಲ್ ಅವರ ಸಹಾಯದಿಂದ ಅಂಬೇಡ್ಕರ್ ಅವರು ಬಂಗಾಳದಿಂದ ಗೆಲುವು ಸಾಧಿಸುತ್ತಾರೆ.

1952ರ ಲೋಕಸಭಾ ಚುನಾವಣೆಯಲ್ಲಿ ಅಂಬೇಡ್ಕರ್‌ರವರನ್ನು ಸೋಲಿಸಲು ಪ್ರಧಾನಿ ನೆಹರೂ ಕಮ್ಯುನಿಸ್ಟ್ ಪಕ್ಷಗಳೊಂದಿಗೆ ಕೈಜೋಡಿಸುತ್ತಾರೆ. ಕಾಂಗ್ರೆಸ್ ನಾಯಕ ಎಸ್ ಕೆ ಪಾಟೀಲ್ ಹಾಗೂ ಕಮ್ಯುನಿಸ್ಟ್ ಪಕ್ಷದ ಶ್ರೀಪಾದ್ ಎಡಾಂಗೆ ಸೇರಿ ಅಂಬೇಡ್ಕರ್ ಅವರನ್ನು ಸೋಲಿಸುವ ಯೋಜನೆ ರೂಪಿಸುತ್ತಾರೆ. ರಾಜಕೀಯ ವಲಯದಲ್ಲಿ ಹೆಚ್ಚಾಗಿ ಪರಿಚಯವೇ ಇಲ್ಲದ ನಾರಾಯಣರಾವ್ ಕಜ್ರೋಲ್ಕರ್ ಅವರನ್ನು ನಿಲ್ಲಿಸಿ ಅಂಬೇಡ್ಕರ್ ಅವರನ್ನು ಸೋಲಿಸುತ್ತಾರೆ. ಚುನಾವಣೆಯಲ್ಲಿ ಅಕ್ರಮ ನಡೆದಿದೆ, ಇದರ ಫಲಿತಾಂಶವನ್ನು ಅನೂರ್ಜಿತಗೊಳಿಸಬೇಕು ಎಂದು ಅಂಬೇಡ್ಕರ್ ಮುಖ್ಯ ಚುನಾವಣಾ ಆಯೋಗದ ಮೊರೆ ಹೋಗುತ್ತಾರೆ. ಕಾರಣ ಇದರ ಎಣಿಕೆಯಲ್ಲಿ 74,333 ಬ್ಯಾಲಟ್ ಪೇಪರ್‌ಗಳನ್ನು ತಿರಸ್ಕರಿಸಲಾಗಿತ್ತು.

### ಏಕರೂಪ ನಾಗರಿಕ ಸಂಹಿತೆ (UCC) ಗೆ ವಿರೋಧ

ಸಂವಿಧಾನದ ನಿರ್ದೇಶಕ ತತ್ವದ (Directive Principles of State Policy) ಅಡಿಯಲ್ಲಿ ಇದಕ್ಕೆ ಅವಕಾಶ ಇದ್ದರೂ ಕಾಂಗ್ರೆಸ್ ಇದನ್ನು ನಿರಂತರವಾಗಿ ವಿರೋಧಿಸುತ್ತಾ, ಇದನ್ನು ಒಂದು ಚುನಾವಣಾ ಅಸ್ತ್ರವನ್ನಾಗಿ, ಓಲೈಕೆಯ ರಾಜಕಾರಣದ ಭಾಗವಾಗಿ ಮಾಡಿಕೊಂಡು ರಾಷ್ಟ್ರ ಹಿತವನ್ನು ಬಲಿಕೊಟ್ಟು ಕಾಂಗ್ರೆಸ್ ರಾಜಕಾರಣ ಮಾಡುತ್ತಿದೆ. ಡಾ ಬಿ ಆರ್ ಅಂಬೇಡ್ಕರ್ ಅವರು ಏಕರೂಪ ನಾಗರೀಕ ಸಂಹಿತೆಯನ್ನು ಪ್ರಬಲವಾಗಿ ಬೆಂಬಲಿಸುತ್ತಾ. ಸಂವಿಧಾನ ರಚನಾ ಸಭೆಯಲ್ಲಿ ಆಡಿದ ಈ ಮಾತುಗಳು ಸದಾ ಸ್ಮರಣೀಯ. ಅಷ್ಟಕ್ಕೂ ನಾವು ಈ ಧರ್ಮಗಳಿಗೆ ನ್ಯಾಯಾಂಗದ ವ್ಯಾಪ್ತಿಯನ್ನೂ ಮೀರದ ಅಪರಿಮಿತವಾದ ಮತ್ತು ಅತ್ಯಂತ ದುಬಾರಿಯಾದ ಸೌಲಭ್ಯಗಳನ್ನು ಯಾಕೆ ಕೊಡಬೇಕು? ನ್ಯಾಯಾಂಗದ ಜಾಗವನ್ನು ಆಕ್ರಮಿಸಲು ನಾವು ಏಕೆ ಬಿಟ್ಟುಕೊಳ್ಳಬೇಕು ಎಂಬುದು ನನಗೆ ಅರ್ಥವಾಗುತ್ತಿಲ್ಲ. ಅಷ್ಟಕ್ಕೂ ನಮಗೆ ಸಿಕ್ಕಿರುವ ಈ ಸ್ವಾತಂತ್ರ್ಯ ಅತ್ಯಂತ ತಾರತಮ್ಯಗಳಿಂದ ಕೂಡಿರುವ, ನಮ್ಮ ಮೂಲಭೂತ ಹಕ್ಕುಗಳ ಜೊತೆ ವೈರುಧ್ಯ ಹೊಂದಿರುವ ವಿಚಾರಗಳ ನಿವಾರಣೆಗೆ, ಮತ್ತು ನಮ್ಮ ಸಾಮಾಜಿಕ ಸಮಾನತೆಯನ್ನು ಸುಧಾರಿಸಲು ತಾನೆ?

1954 ರ ಬಾಂದ್ರ ಕ್ಷೇತ್ರಕ್ಕೆ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತೆ ತನ್ನ ಹಳೆಯ ಚಾಳಿಯನ್ನು ಮುಂದುವರಿಸಿತು. ಕಾಜ್ರೋಲ್ಕರ್ ಅವರನ್ನು ಮತ್ತೆ ಕಣಕ್ಕಿಳಿಸುವ ಮೂಲಕ ಡಾ. ಅಂಬೇಡ್ಕರ್ ಅವರನ್ನು ಸಂಸತ್ತಿನಿಂದ ಹೊರಗಿಡುವ ಪ್ರಯತ್ನ ಕಾಂಗ್ರೆಸ್ ಮಾಡಿತು. ಪ್ರಧಾನಿ ನೆಹರೂ ಕೂಡ ವೈಯಕ್ತಿಕವಾಗಿ ಡಾ. ಅಂಬೇಡ್ಕರ್ ವಿರುದ್ಧ ಪ್ರಚಾರ ಮಾಡಿದರು. ಅಂಬೇಡ್ಕರ್ ಅವರ ಸೋಲು ಕೇವಲ ಚುನಾವಣಾ ಸೋಲಲ್ಲ, ಇದು ನೆಹರೂ ಅವರ ಆಡಳಿತದಲ್ಲಿ ಭಿನ್ನಾಭಿಪ್ರಾಯ ಅಥವಾ ಅವರ ನೀತಿ ನಿಲುವುಗಳನ್ನು ತೀಕ್ಷ್ಣವಾಗಿ ವಿಮರ್ಶೆ ಮಾಡುವವರಿಗೆ ಕಾಂಗ್ರೆಸ್‌ನಲ್ಲಿ ಸ್ಥಾನವಿಲ್ಲ ಎಂಬುದಕ್ಕೆ ಈ ಸಂಗತಿ ಸ್ಪಷ್ಟವಾಗಿ ಸಾರಿ ಹೇಳುತ್ತದೆ.

ಎಡ್ವಿನಾ ಮೌಂಟ್ ಬ್ಯಾಟನ್‌ಗೆ ಬರೆದ ಪತ್ರದಲ್ಲಿ, ನೆಹರು ಅವರು 1952 ರ ಚುನಾವಣೆಯಲ್ಲಿ ಡಾ ಅಂಬೇಡ್ಕರ್‌ರವರನ್ನು ಸೋಲಿಸುವ ಅಗತ್ಯವನ್ನು ಪ್ರಸ್ತಾಪಿಸಿರುವ ಬಗ್ಗೆ ವರದಿಯಾಗಿದೆ, ಇದು ಅಂಬೇಡ್ಕರ್ ಅವರ ಬಗ್ಗೆ ಕಾಂಗ್ರೆಸ್ ಸಾಧಿಸುತ್ತಿದ್ದ ದ್ವೇಷದ ರಾಜಕಾರಣಕ್ಕೆ ಸ್ಪಷ್ಟ ಉದಾಹರಣೆ ಎನ್ನಬಹುದು.

### ಕಾಂಗ್ರೆಸ್ ಸರಕಾರದಲ್ಲೂ ಉಪೇಕ್ಷೆಗೆ ಒಳಗಾದರು

ನೆಹರೂ ಅವರ ಸಂಪುಟದಲ್ಲಿ ಸಚಿವರಾಗಿದ್ದಾಗ, ಡಾ ಅಂಬೇಡ್ಕರ್‌ರವರನ್ನು ಉದ್ದೇಶಪೂರ್ವಕವಾಗಿ ಉಪೇಕ್ಷೆಗೆ ಗುರಿ ಮಾಡಲಾಯಿತು. ಅವರು ಅರ್ಥಶಾಸ್ತ್ರ ಮತ್ತು ಕಾನೂನಿನಲ್ಲಿ ಪರಿಣಿತಿ

ಹೊಂದಿದ್ದರೂ ಪ್ರಮುಖ ಸಂಸದೀಯ ಸಮಿತಿಗಳಾದ ವಿದೇಶಾಂಗ ವ್ಯವಹಾರ ಮತ್ತು ರಕ್ಷಣಾ ವ್ಯವಹಾರಗಳ ಸಮಿತಿಯಿಂದ, ಆಡಳಿತದ ಸರ್ವೇ ಸಾಮಾನ್ಯ ಭಾಗವಾದ ದೈನಂದಿನ ವ್ಯವಹಾರಗಳಿಂದಲೂ ಅವರನ್ನು ಹೊರಗಿಡಲಾಯಿತು.

## ನೆಹರೂ ಕ್ಯಾಬಿನೆಟ್‌ನಿಂದ ರಾಜಿನಾಮೆ

- 1951 ರಲ್ಲಿ ನೆಹರೂ ಅವರ ಕ್ಯಾಬಿನೆಟ್‌ಗೆ ಡಾ ಅಂಬೇಡ್ಕರ್ ರಾಜಿನಾಮೆ ನೀಡಿದ ಸಂದರ್ಭದಲ್ಲಿ ಉಲ್ಲೇಖಿಸಿದ ಕೆಲವು ಅಂಶಗಳು ಅಂಬೇಡ್ಕರ್ ಅವರಿಗೆ ಕಾಂಗ್ರೆಸ್ ಯಾವ ಮಟ್ಟಿನ ಭ್ರಮನಿರಸನ ಮಾಡಿತ್ತು ಎಂಬುದನ್ನು ಎತ್ತಿ ತೋರಿಸುತ್ತದೆ
- ಅಂಬೇಡ್ಕರ್ ರವರು ಅರ್ಥಶಾಸ್ತ್ರದಲ್ಲಿ ಪಿಎಚ್‌ಡಿ ಗಳಿಸಿದ ಮೊದಲ ಭಾರತೀಯರಾದರೂ, ಅವರನ್ನು ಆರ್ಥಿಕ ನೀತಿಗಳು ಮತ್ತು ಸಂಸ್ಥೆಗಳಿಂದ ಉದ್ದೇಶ ಪೂರ್ವಕವಾಗಿ ದೂರವಿಟ್ಟಿದ್ದರು
- ಕಾಂಗ್ರೆಸ್ ಸರ್ಕಾರ ದಲಿತರ ಸಮಸ್ಯೆಗಳನ್ನು ಉಪೇಕ್ಷಿಸಿ ಕೇವಲ ಮುಸ್ಲಿಮರ ಓಲೈಕೆಯಲ್ಲಿ ತೊಡಗಿರುವುದು ಮತ್ತು ಕಾಶ್ಮೀರ ಸಮಸ್ಯೆಯನ್ನು ನೆಹರೂ ನಿಭಾಯಿಸಿದ ರೀತಿಗೆ ಅಂಬೇಡ್ಕರ್ ತೀವ್ರವಾಗಿ ಅಸಮಧಾನಗೊಂಡಿದ್ದರು.
- ಭಾರತದ ಅಸ್ತಿತ್ವದ ಮೇಲೆ ಕೆಟ್ಟ ಪರಿಣಾಮ ಬೀರುವ ನೆಹರೂ ವಿದಾಶಾಂಗ ನೀತಿಗೆ ಡಾ.ಅಂಬೇಡ್ಕರ್ ವಿರೋಧ ವ್ಯಕ್ತಪಡಿಸಿದ್ದರು.
- ಡಾ ಅಂಬೇಡ್ಕರ್ ಪ್ರಬಲವಾಗಿ ಒತ್ತು ಕೊಟ್ಟಿದ್ದ ಹಿಂದೂ ಕೋಡ್ ಬಿಲ್‌ನ್ನು ನೆಹರೂ ಸರಕಾರ ಜಾರಿಗೆ ತರುವಲ್ಲಿ ವಿಫಲರಾಗಿದ್ದರು.
- ಸಂವಿಧಾನ ಶಿಲ್ಪಿ ಹಾಗೂ ಸಾಮಾಜಿಕ ನ್ಯಾಯಗಳ ಹರಿಕಾರ ಡಾ.ಬಿ ಆರ್ ಅಂಬೇಡ್ಕರ್ ಅವರು ಈ ದೇಶಕ್ಕೆ ನೀಡಿದ ಅಭೂತಪೂರ್ವ ಕೊಡುಗೆಗಳ ಹೊರತಾಗಿಯೂ ಕಾಂಗ್ರೆಸ್ ಸರಕಾರ ಅವರಿಗೆ ಭಾರತ ರತ್ನ ಪ್ರಶಸ್ತಿಯನ್ನು ನಿರಾಕರಿಸಿತು. ನೆಹರೂ, ಇಂದಿರಾಗಾಂಧಿ ಮತ್ತು ರಾಜೀವ್ ಗಾಂಧಿಯವರ ಅವಧಿಯಲ್ಲಿ ಡಾ.ಅಂಬೇಡ್ಕರ್ ಅವರಿಗೆ ಭಾರತ ರತ್ನ ಪ್ರಶಸ್ತಿ ನೀಡಲಿಲ್ಲ, 1970 ರಲ್ಲಿ, ಕಾಂಗ್ರೆಸ್ ಪದ್ಮಭೂಷಣ ಪ್ರಶಸ್ತಿಯನ್ನು 1952 ರ ಚುನಾವಣೆಯಲ್ಲಿ ಅಂಬೇಡ್ಕರ್ ಅವರನ್ನು ಸೋಲಿಸಿದ ಅಭ್ಯರ್ಥಿ ಎನ್.ಎಸ್. ಕಾಜ್ರೋಲ್ಕರ್ ಅವರಿಗೆ ಕೊಟ್ಟಿತ್ತು.
- 1990 ರಲ್ಲಿ, ಬಿಜೆಪಿ ಬೆಂಬಲದ ಶ್ರೀ ವಿ.ಪಿ ಸಿಂಗ್ ಅವರ ಕಾಂಗ್ರೆಸ್ಸೇತರ ಸರ್ಕಾರದ ಅಧಿಕಾರವಧಿಯಲ್ಲಿ, ಡಾ ಅಂಬೇಡ್ಕರ್ ಅವರಿಗೆ ಮರಣೋತ್ತರವಾಗಿ ಭಾರತ ರತ್ನ ನೀಡಲಾಯಿತು. ಈ ಅವಧಿಯಲ್ಲಿಯೇ ಶ್ರೀ ಅಟಲ್ ಬಿಹಾರಿ ವಾಜಪೇಯಿಯವರ ಪ್ರಯತ್ನದಿಂದ ಸಂಸತ್ತಿನಲ್ಲಿ ಡಾ ಅಂಬೇಡ್ಕರ್ ಅವರ ಭಾವಚಿತ್ರವನ್ನು ಇಡಲಾಯಿತು.

## ಸ್ಮಾರಕಗಳ ನಿರ್ಲಕ್ಷ್ಯ

- ಗಾಂಧಿ ನೆಹರು ಪರಿವಾರದವರಿಗೆ ತಲಾ 50 ಎಕರೆಯಲ್ಲಿ ಸ್ಮಾರಕಗಳನ್ನು ನಿರ್ಮಿಸಿದ ಕಾಂಗ್ರೆಸ್ ಸರಕಾರಕ್ಕೆ ಅದೇ ದೆಹಲಿಯಲ್ಲಿ ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರಿಗೂ ಒಂದು ಸ್ಮಾರಕ ನಿರ್ಮಿಸಬೇಕು ಎಂದು ಯಾವತ್ತೂ ಅನಿಸಿಯೇ ಇರಲಿಲ್ಲ.

## ಡಾ ಅಂಬೇಡ್ಕರ್ ಮತ್ತು 370 ನೇ ವಿಧಿ

ಡಾ. ಅಂಬೇಡ್ಕರ್ ಅವರು ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನವನ್ನು ನೀಡುವ ಸಂವಿಧಾನದ 370 ನೇ ವಿಧಿಯನ್ನು ಬಲವಾಗಿ ವಿರೋಧಿಸಿದ್ದರು. ಆದರೆ, ಕಾಂಗ್ರೆಸ್ ಅವರ ಎಚ್ಚರಿಕೆಯನ್ನು ಉಪೇಕ್ಷಿಸಿ ಅದನ್ನು ಜಾರಿಗೆ ತಂದಿತು. ಆರ್ಟಿಕಲ್ 370 ರದ್ದತಿ ಹಾಗೂ ಜಮ್ಮು ಮತ್ತು ಕಾಶ್ಮೀರವು ಪೂರ್ಣ ಪ್ರಮಾಣದಲ್ಲಿ ಭಾರತಕ್ಕೆ ಸೇರುವುದು ಎಷ್ಟು ಆವಶ್ಯಕ ಮತ್ತು ಅದರಿಂದಾಗುವ ದೂರಗಾಮಿ ಪರಿಣಾಮಗಳ ಬಗ್ಗೆ ಅಂಬೇಡ್ಕರ್ ಅವರಿಗಿದ್ದ ದೂರದರ್ಶಿತ್ವನ್ನು ಮೋದಿಯವರು ಈ ವಿಧಿಯನ್ನು ತೆಗೆದುಹಾಕುವ ಮೂಲಕ ದೇಶಕ್ಕೆ ಮನವರಿಕೆ ಮಾಡಿದ್ದಾರೆ.

- ಅವರು 1956 ರಲ್ಲಿ ನಿಧನರಾದ ನಂತರ, ದೆಹಲಿಯ 26 ಅಲಿಪುರ್ ರಸ್ತೆಯಲ್ಲಿರುವ ಡಾ ಅಂಬೇಡ್ಕರ್ ಅವರ ನಿವಾಸವನ್ನು ರಾಷ್ಟ್ರೀಯ ಸ್ಮಾರಕವಾಗಿ ಘೋಷಣೆ ಮಾಡುವ ಪ್ರಸ್ತಾಪವನ್ನು ತಿರಸ್ಕರಿಸಿದರು. 2016 ರಲ್ಲಿ ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಈ ಕೆಲಸವನ್ನು ಮುಂದುವರಿಸಿ ಅದನ್ನು 2018 ರಲ್ಲಿ ಉದ್ಘಾಟಿಸಲಾಯಿತು.
- 2012 ರಲ್ಲಿ, ಕಾಂಗ್ರೆಸ್ ನೇತೃತ್ವದ ಯುಪಿಎ-2 ಸರ್ಕಾರದ ಅವಧಿಯಲ್ಲಿ, 11ನೇ ತರಗತಿಯ ಎನ್‌ಸಿಇಆರ್‌ಟಿ ಪಠ್ಯಪುಸ್ತಕದಲ್ಲಿ ಡಾ ಅಂಬೇಡ್ಕರ್ ಅವರನ್ನು ನೆಹರು ಚಾವಟಿಯಿಂದ ಹೊಡೆಯುವ ವ್ಯಂಗ್ಯಚಿತ್ರವನ್ನು ಹಾಕಿ ಅವರಿಗೆ ಅವಮಾನಿಸಲಾಯಿತು

## ವಿಭಜನೆಯ ನಂತರ ದಲಿತ ನಿರಾಶ್ರಿತರ ನಿರ್ಲಕ್ಷ್ಯ

ದೇಶ ವಿಭಜನೆಯ ನಂತರ, ಪಾಕಿಸ್ತಾನದಿಂದ ಬಂದ ದಲಿತ ನಿರಾಶ್ರಿತರು ಅಪಾರ ಕಷ್ಟಗಳನ್ನು ಎದುರಿಸಿದರು. ನಿರಂತರವಾಗಿ ಅಧಿಕಾರದಲ್ಲಿ ಇದ್ದ ಕಾಂಗ್ರೆಸ್ ಸರ್ಕಾರಗಳು ಡಾ. ಅಂಬೇಡ್ಕರ್‌ರವರ ಮನವಿಯ ಹೊರತಾಗಿಯೂ ಅವರಿಗೆ ದೇಶದ ಪೌರತ್ವವನ್ನು ನೀಡಲು ಅಥವಾ ಅವರ ಪುನರ್ವಸತಿಯನ್ನು ಕಲ್ಪಿಸಲು ಸಂಪೂರ್ಣವಾಗಿ ವಿಫಲವಾದವು, ವಿಶೇಷವಾಗಿ ಪೂರ್ವ ಪಾಕಿಸ್ತಾನದ ನಾಮಶೂದ್ರರು ಮತ್ತು ಮತುವಾ ಪಂಥದಂತಹ ದಲಿತ ಸಮುದಾಯಗಳು ಇದರಿಂದ ಅತಿ ಹೆಚ್ಚು ತೊಂದರೆಗೆ ಒಳಗಾದವು.

## ಡಾ ಅಂಬೇಡ್ಕರ್ ಮತ್ತು ಒಬಿಸಿಗಳ ಕಲ್ಯಾಣ

ಸಂವಿಧಾನವು ಹಿಂದುಳಿದ ವರ್ಗಗಳಿಗೆ ಯಾವುದೇ ರಕ್ಷಣೆಯನ್ನು ಒದಗಿಸಲಿಲ್ಲ. ಇದನ್ನು ಅಂದಿನ ಕಾರ್ಯಕಾರಿ ಸರಕಾರದ ಅಧ್ಯಕ್ಷರು ರಚಿಸುವ ಆಯೋಗ ಕೊಡುವ ಶಿಫಾರಸುಗಳ ನಂತರ ಜಾರಿಗೆ ತರುವ ನಿರ್ಧಾರವಾಯಿತು. ಈ ನಿಟ್ಟನಲ್ಲಿ ಅಂದಿನ ಕಾರ್ಯಕಾರಿ ಸರಕಾರ ಕ್ರಮ ತೆಗೆದುಕೊಂಡು ಒಬಿಸಿ ವರ್ಗದರಿಗೆ ಸೂಕ್ತವಾದ ಸವಲತ್ತುಗಳನ್ನು ಕೊಡಿಸಬೇಕು ಎಂಬುದು ಅಂಬೇಡ್ಕರ್ ಅವರ ಆಶಯವೂ ಆಗಿತ್ತು. ಆದರೆ ಕಾಂಗ್ರೆಸ್ ಅದನ್ನು ಮಾಡಲೇ ಇಲ್ಲ.

### ಕಾಂಗ್ರೆಸ್‌ನ ಮೀಸಲಾತಿ ವಿರೋಧಿ ನಿಲುವುಗಳಿಗೆ ಒಂದಿಷ್ಟು ನಿದರ್ಶನಗಳು ಕಾಕಾ ಕಾಲೇಲ್ಕರ್ ವರದಿಯ ತಿರಸ್ಕಾರ (1956)

ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸುವುದನ್ನು ಪ್ರಸ್ತಾಪಿಸಿದ್ದ ಕಾ ಕಾ ಕಾಲೇಲ್ಕರ್ ಆಯೋಗದ ಶಿಫಾರಸುಗಳನ್ನು ನೆಹರೂ ಸರ್ಕಾರ ತಿರಸ್ಕರಿಸಿತು. 1961ರಲ್ಲಿ ಮೀಸಲಾತಿಯನ್ನು ವಿರೋಧಿಸಿ ರಾಜ್ಯದ ಮುಖ್ಯಮಂತ್ರಿಗಳಿಗೆ ಪತ್ರವನ್ನು ಬರೆದಿದ್ದರು. ಇದರಲ್ಲಿ ಅವರು ಮೀಸಲಾತಿಯಿಂದ ಅಸಮರ್ಥರು ಮತ್ತು ಗುಣಹೀನರ ಕೈಗೆ ಕೆಲಸಗಳು ಸಿಗಬಹುದು ಎಂದಿದ್ದರು. ಇಂತಹ ಹೇಳಿಕೆ ಅತ್ಯಂತ ಹೀನವಾದದ್ದು ಮತ್ತು ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾಗಿರುವುದರ ಜೊತೆಗೆ ಸಮಾಜದ ವಂಚಿತ ವರ್ಗದ ಬಗ್ಗೆ ಇವರಿಗಿದ್ದ ತಿರಸ್ಕಾರದ ಭಾವ ಎತ್ತಿ ತೋರಿಸುತ್ತದೆ

### ಒಬಿಸಿ ಮೀಸಲಾತಿಯನ್ನು ತಡೆಹಿಡಿದ ಇಂದಿರಾ ಗಾಂಧಿ

ಮಂಡಲ್ ಆಯೋಗದ ಪ್ರಸ್ತಾವನೆ ಮಾಡಿದ್ದ ಒಬಿಸಿಗಳ ಮೀಸಲಾತಿಯನ್ನು ಇಂದಿರಾ ಗಾಂಧಿ ತಡೆ ಹಿಡಿದಿದ್ದರು. ಮಾಜಿ ಪ್ರಧಾನಿ ರಾಜೀವ್ ಗಾಂಧಿಯವರು ಮಾರ್ಚ್ 3, 1985 ರಂದು ಎಸ್ ಸಿ ಮೀಸಲಾತಿಯನ್ನು ತಿರಸ್ಕರಿಸಿದರು,ಈ ಸಂದರ್ಭದಲ್ಲಿ ಮಾತನಾಡಿದ ಅವರು ಮೀಸಲಾತಿಯ ಮೂಲಕ ಮೂರ್ಖರನ್ನು ಪ್ರೋತ್ಸಾಹಿಸಬಾರದು ಅಂದಿದ್ದರು. ಈ ಹೇಳಿಕೆ ದಲಿತರು, ಆದಿವಾಸಿಗಳು ಮತ್ತು ಹಿಂದುಳಿದ ವರ್ಗಗಳ ಹೋರಾಟಗಳು ಮತ್ತು ಅವರ ಸಾಂವಿಧಾನಿಕ ಹಕ್ಕುಗಳ ಬಗ್ಗೆ ಕಾಂಗ್ರೆಸ್ ಪಕ್ಷಕ್ಕೆ ಇದ್ದ ಮಾನಸಿಕತೆಯನ್ನು ಬಹಿರಂಗಪಡಿಸುತ್ತದೆ.

### ಪರಿಶಿಷ್ಟ ಜಾತಿಗಳಿಗೆ ಮೀಸಲಾತಿ ದುರ್ಬಲಗೊಳಿಸುವ ಹುನ್ನಾರ

- ಪರಿಶಿಷ್ಟ ಜಾತಿಯ ಮೀಸಲಾತಿಯ ಪಟ್ಟಿಯಲ್ಲಿ ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರನ್ನು ಸೇರಿಸಲು ಕಾಂಗ್ರೆಸ್ ಸದಾ ಪ್ರಯತ್ನಿಸಿದೆ. ಇದು ಡಾ|ಅಂಬೇಡ್ಕರ್‌ರ ಸಂವಿಧಾನಕ್ಕೆ ವಿರುದ್ಧವಾಗಿದೆ. ಇದು ಅಂದಿನ ಕಾನೂನು ಸಚಿವರಾಗಿದ್ದ ಡಾ. ಬಿ.ಆರ್. ಅಂಬೇಡ್ಕರ್‌ರವರು, 1950 ರಲ್ಲಿ ಹೊರಡಿಸಿದ್ದ ಆದೇಶದ ಉಲ್ಲಂಘನೆಯಾಗಿದ್ದರೂ ಕಾಂಗ್ರೆಸ್ ನಿರಂತರವಾಗಿ ಈ ಪ್ರಯತ್ನವನ್ನು ಮಾಡಿಕೊಂಡೇ ಬಂದಿದೆ.
- ಸರ್ಕಾರದ ನೆರವು ಪಡೆಯುವ ಜಾಮಿಯಾ ಮಿಲಿಯಾ (2011) ಮತ್ತು AMU (1981) ನಂತಹ ಶಿಕ್ಷಣ ಸಂಸ್ಥೆಗಳನ್ನು ಕಾಂಗ್ರೆಸ್ ಸರ್ಕಾರವು ಅಲ್ಪಸಂಖ್ಯಾತ ಸಂಸ್ಥೆಗಳೆಂದು ವರ್ಗೀಕರಿಸಿತು, ಆ ಮೂಲಕ ಈ ಸಂಸ್ಥೆಗಳಲ್ಲಿ SC ಗಳು, ST ಗಳು ಮತ್ತು OBC ಗಳಿಗೆ ಮೀಸಲಾತಿಯನ್ನು ನಿರಾಕರಿಸಿತು. AMU ಅಥವಾ ಜಾಮಿಯಾ ಮಿಲಿಯಾ ಇಸ್ಲಾಮಿಯಾದಲ್ಲಿ ವಂಚಿತ ವರ್ಗಗಳಿಗೆ ಮೀಸಲಾತಿ ನೀಡುವ ಯಾವುದೇ ಪ್ರಯತ್ನವನ್ನು ಕಾಂಗ್ರೆಸ್ ವಿರೋಧಿಸುತ್ತಲೇ ಇದೆ. ಇನಾಮದಾರ್ ಪ್ರಕರಣದಲ್ಲಿ (2005) ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪನ್ನು ರದ್ದುಗೊಳಿಸಲು ಕಾಂಗ್ರೆಸ್ 93 ನೇ ಸಾಂವಿಧಾನಿಕ ತಿದ್ದುಪಡಿಯನ್ನು (2005) ತಂದಿತು. ಆದರೆ ಅಲ್ಲಿ ಎಸ್ಸಿ, ಎಸ್ ಟಿ ಮತ್ತು ಒ ಬಿ ಸಿ ಗಳಿಗೆ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ಮೀಸಲಾತಿ ನೀಡುವ ಬಗ್ಗೆ ವಿನಾಯಿತಿ ನೀಡಿತು.

### ಡಾ. ಅಂಬೇಡ್ಕರ್ ಮತ್ತು ಮಹಿಳಾ ಹಕ್ಕುಗಳು

ಮಹಿಳೆಯರ ಪ್ರಗತಿಯಿಂದ ಸಮಾಜದ ಪ್ರಗತಿಯನ್ನು ಅಳೆಯಬಹುದು, ಉತ್ತಮ ಸಮಾಜ ಹಾಗೂ ಸುಭದ್ರ ರಾಷ್ಟ್ರ ನಿರ್ಮಾಣಕ್ಕೆ ಮಹಿಳೆಯರ ಪಾತ್ರ ಬಹಳ ಮುಖ್ಯವಾದದ್ದು ಎಂದು ಡಾ.ಅಂಬೇಡ್ಕರ್ ಅವರು ಬಲವಾಗಿ ನಂಬಿದ್ದರು. ಹಾಗಿದ್ದೂ ನೆಹರು ನೇತೃತ್ವದ ಕಾಂಗ್ರೆಸ್ ಸರ್ಕಾರ ಮಹಿಳೆಯರಿಗೆ ಸಮಾನ ಅಧಿಕಾರ ನೀಡುವ ಹಿಂದೂ ಕೋಡ್ ಬಿಲ್‌ನ್ನು ಅಂಗೀಕರಿಸುವಲ್ಲಿ ವಿಫಲವಾಯಿತು. ನಂತರ ಬಂದ ಕಾಂಗ್ರೆಸ್ ಸರ್ಕಾರಗಳು ಸಂಸತ್ತು ಮತ್ತು ಶಾಸಕಾಂಗ ಸಭೆಗಳಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯತೆ ನೀಡುವ ಕಾನೂನು ಜಾರಿಗೊಳಿಸುವಲ್ಲಿ ವಿಫಲವಾಯಿತು. 2023 ರಲ್ಲಿ ಪ್ರಧಾನಿ ಶ್ರೀ ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ನಾರಿ ಶಕ್ತಿ ವಂದನೆ ಅಧಿನಿಯಮವನ್ನು ಅಂಗೀಕರಿಸಿ ಐತಿಹಾಸಿಕ ಕಾನೂನನ್ನು ಜಾರಿಗೆ ತಂದು ಅಂಬೇಡ್ಕರ್ ರವರ ಆಶಯಗಳನ್ನು ನೆರವೇರಿಸಿದರು.

### ಧರ್ಮದ ಆಧಾರದ ಮೇಲೆ ಮೀಸಲಾತಿಗಾಗಿ ಒತ್ತಡ

- ಕಾಂಗ್ರೆಸ್ ಪಕ್ಷವು ತಾನು ಆಡಳಿತದಲ್ಲಿರುವ ರಾಜ್ಯಗಳಲ್ಲಿ ಮುಸ್ಲಿಮರಿಗೆ ಧರ್ಮಾಧಾರಿತ ಮೀಸಲಾತಿಯನ್ನು ಕೊಡಲು ಸತತವಾಗಿ ಪ್ರಯತ್ನಿಸುತ್ತಿದೆ, ಡಾ. ಅಂಬೇಡ್ಕರ್‌ರ ಸಂವಿಧಾನದಲ್ಲಿ ಅದಕ್ಕೆ ಯಾವುದೇ ಅವಕಾಶಗಳು ಇಲ್ಲದೇ ಹೋದರೂ ಮತ್ತು ಅದು ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿದ್ದರೂ, ಕಾಂಗ್ರೆಸ್ ಇದನ್ನ ಮಾಡುತ್ತಲೇ ಬಂದಿದೆ.
- ಬಹುಪಾಲು ಮುಸಲ್ಮಾನರು ಈಗಾಗಲೇ ಇತರ ಹಿಂದುಳಿದ ವರ್ಗಗಳ (OBC) ಅಡಿಯಲ್ಲಿ ಮೀಸಲಾತಿಯ ಪ್ರಯೋಜನ ಪಡೆಯುತ್ತಿದ್ದಾರೆ. ಮಿಕ್ಕುಳಿದವರು ಆರ್ಥಿಕವಾಗಿ ದುರ್ಬಲವಾದ ವರ್ಗಗಳ (EWS) ಅಡಿಯಲ್ಲಿ ಮೀಸಲಾತಿಯ ಪ್ರಯೋಜನ ಪಡೆಯತ್ತಿದ್ದಾರೆ. ಆದ್ದರಿಂದ, ನಿರ್ದಿಷ್ಟವಾಗಿ ಮುಸ್ಲಿಮರಿಗೆ ಧರ್ಮ ಆಧಾರಿತ ಮೀಸಲಾತಿಗಾಗಿ ಒತ್ತುಕೊಡುವುದು ಅನಗತ್ಯ ಮತ್ತು ಅದಕ್ಕೆ ಸಾಂವಿಧಾನಿಕ ಮಾನ್ಯತೆ ಇರುವುದಿಲ್ಲ

### ಸಂವಿಧಾನದ 356 ನೇ ವಿಧಿಯ ದುರ್ಬಳಕೆ

ಸಂವಿಧಾನದ 356ನೇ ವಿಧಿಯನ್ನು ದುರುಪಯೋಗ ಪಡಿಸಿಕೊಂಡು ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ರಾಜ್ಯ ಸರ್ಕಾರಗಳನ್ನು 90 ಬಾರಿ ವಜಾಗೊಳಿಸಿದ ಕಾಂಗ್ರೆಸ್ ಪಕ್ಷದ ವರ್ತನೆಗಳು ಕಾಂಗ್ರೆಸ್ ಪ್ರಜಾಪ್ರಭುತ್ವ ವ್ಯಸಸ್ಥೆಯನ್ನು ಹೇಗೆ ದಮನ ಮಾಡುತ್ತದೆ ಎಂಬುದಕ್ಕೆ ಸ್ಪಷ್ಟವಾದ ಉದಾಹರಣೆ. ಈ ರೀತಿ ರಾಜಕೀಯ ದ್ವೇಷ ಮತ್ತು ವೈಯುಕ್ತಿಕ ಹಿತಾಸಕ್ತಿಯ ಸಾಧನೆಗೋಸ್ಕರ ಸಾಂವಿಧಾನಿಕ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುವುದು ಕಾಂಗ್ರೆಸ್ ಪಕ್ಷದ ದಮನಕಾರಿ ಮಾನಸಿಕತೆಗೆ ಒಂದು ಸ್ಪಷ್ಟ ಉದಾಹರಣೆಯಾಗಿದೆ.



# ವಿದೇಶಾಂಗ ನೀತಿಯಲ್ಲಿ ಚಾಣಕ್ಯ ಮೋದಿ ಸರ್ಕಾರ

## 43 ವರ್ಷದ ನಂತರ ಕುವೈತ್‌ಗೆ ಭಾರತೀಯ ಪ್ರಧಾನಿ ಭೇಟಿ

ಮೋದಿ ಸರ್ಕಾರ ಬಂದಾಗಿನಿಂದ ಭಾರತೀಯ ವಿದೇಶಾಂಗ ನೀತಿ ಚಾಣಕ್ಯ ನಡೆಯನ್ನು ಅನುಸರಿಸಿದೆ. ವಿವಿಧ ದೇಶಗಳ ಜೊತೆಗೆ ಬೆಳೆಸಿಕೊಳ್ಳಬಹುದಾದ ರಾಜತಾಂತ್ರಿಕ ರೀತಿ ಮತ್ತು ನೀತಿ, ಕುದುರಿಸಿಕೊಳ್ಳಬಹುದಾದ ವ್ಯವಹಾರಿಕ ಸಂಬಂಧಗಳ ಬಗ್ಗೆ ಸಮಗ್ರ ಅಧ್ಯಯನ ಮಾಡುವ ಮೂಲಕ ವಿದೇಶಾಂಗ ನೀತಿಯನ್ನು ಅಳವಡಿಸಿಕೊಳ್ಳುತ್ತಿದೆ. ಇದಕ್ಕೆ ಪೂರಕವಾಗಿ ಪ್ರಧಾನಿ ಮೋದಿ ಅವರು ಎರಡು ದಿನಗಳ ಕುವೈತ್ ದೇಶದ ಪ್ರವಾಸವನ್ನು ಯಶಸ್ವಿಯಾಗಿ ಮುಗಿಸಿದ್ದಾರೆ. 43 ವರ್ಷಗಳ ನಂತರ ಭಾರತದ ಪ್ರಧಾನಿಯೊಬ್ಬರು ಕುವೈತ್‌ಗೆ ಭೇಟಿ ನೀಡಿರುವುದು ಭಾರತದ ವಿದೇಶಾಂಗ ನೀತಿಯ ಇತಿಹಾಸದಲ್ಲಿ ಅತ್ಯಂತ ಮಹತ್ವದ ಸ್ಥಾನವನ್ನು ಪಡೆದಿದೆ.

### ಸಾಂಪ್ರದಾಯಿಕ ಸ್ವಾಗತ



ಎರಡು ದಿನಗಳ ಕುವೈತ್ ಪ್ರವಾಸಕ್ಕೆ ಹೋಗಿದ್ದ ಪ್ರಧಾನಿ ನರೇಂದ್ರ ಮೋದಿಯವರಿಗೆ ಭವ್ಯ ಸ್ವಾಗತ ನೀಡಲಾಯಿತು. ಕುವೈತ್‌ನ ಪ್ರಥಮ ಉಪ ಪ್ರಧಾನಿಯೂ ಆಗಿರುವ ರಕ್ಷಣಾ ಹಾಗೂ ಗೃಹ ಸಚಿವ ಶೇಖ್ ಫಹದ್ ಯೂಸುಫ್ ಸೌದ್ ಅಲ್ ಸಬಾಹ್ ಅವರು ಪ್ರಧಾನಿ ಮೋದಿಯವರನ್ನು ಆತ್ಮೀಯವಾಗಿ ಬರಮಾಡಿಕೊಂಡರು.



ಮಹೇಶ್ ಹೆಗಡೆ
ಬಿಜೆಪಿ ಕಾರ್ಯಕರ್ತರು



# ಭಾರತ ಜಾಗತಿಕ ಕೌಶಲದ ರಾಜಧಾನಿ



ಕುವೈತ್‌ನಲ್ಲಿ ನೆಲೆಸಿರುವ ಭಾರತೀಯ ಸಮುದಾಯದವರ ಸಭೆಯಲ್ಲಿ ಮೋದಿ ಭಾಗಿಯಾಗಿ ಸಂಭ್ರಮಿಸಿದರು. ಸಭೆಯಲ್ಲಿ ಮಾತನಾಡಿದ ಅವರು, ನವ ಕುವೈತ್‌ನ ಬೆಳವಣಿಗೆಗೆ ಅಗತ್ಯವಾದ ಮಾನವ ಸಂಪನ್ಮೂಲ ಮತ್ತು ಕೌಶಲ್ಯ ಭಾರತದಲ್ಲಿದೆ. 'ನಿಮ್ಮ ಸಾಧನೆಗಳನ್ನು ಸಂಭ್ರಮಿಸಲು ನಾನು ಇಲ್ಲಿಗೆ ಬಂದಿದ್ದೇನೆ' ಎಂದು ಹೇಳಿದರು. ಭಾರತೀಯ ಕೌಶಲ್ಯ, ಪ್ರತಿಭೆ, ತಂತ್ರಜ್ಞಾನ ಮತ್ತು ಪರಂಪರೆಯ ಸಮ್ಮಿಶ್ರದ ಸಂಗತಿಗಳೊಂದಿಗೆ ನೀವು ಕುವೈತ್‌ನಲ್ಲಿದ್ದೀರಿ. ಭಾರತವು ಕುಶಲತೆಯ ರಾಜಧಾನಿಯಾಗಿದೆ ಎಂದು ಭಾರತೀಯರ ಕೊಡುಗೆಯನ್ನು ಮೋದಿ ಕೊಂಡಾಡಿದರು. ಕಳೆದ 43 ವರ್ಷಗಳಲ್ಲಿ ಕುವೈತ್‌ಗೆ ಭಾರತೀಯ ಪ್ರಧಾನಿಯೊಬ್ಬರ ಮೊದಲ ಭೇಟಿ ಇದಾಗಿದೆ ಎಂದು ಹಂಚಿಕೊಂಡರು. ಭಾರತೀಯ ಮೂಲದವರು ಸಹ ಮೋದಿಯವರ ಭೇಟಿಯನ್ನು ಸಂಭ್ರಮಿಸಿ, ಭಾರತದ ಬೆಳವಣಿಗೆಯ ವೇಗದ ಬಗ್ಗೆ ಹೆಮ್ಮೆ ವ್ಯಕ್ತಪಡಿಸಿದರು.

# ಕುವೈತ್ ಪ್ರವಾಸದ ಗಮನ ಸೆಳೆದ ಅಂಶ

ಪ್ರಧಾನಿ ಮೋದಿಗೆ ಭಾರತೀಯ ಸಾಂಪ್ರದಾಯಿಕ ಉಡುಗೆಗಳನ್ನು ತೊಟ್ಟು ಸ್ವಾಗತ ನೀಡಿದ್ದು, ಮಾಜಿ ಅಧಿಕಾರಿಯ ಆಸೆ ಪೂರೈಕೆ : ಪ್ರಸ್ತುತ ಕುವೈತ್‌ನಲ್ಲಿ ನೆಲೆಸಿರುವ, ಭಾರತೀಯ ದೇಶಾಂಗ ಸೇವೆಯ 101 ವರ್ಷದ ಮಾಜಿ ಅಧಿಕಾರಿ ಮಂಗಲ್ ಸೈನ್ ಹಂಡಾ ಅವರನ್ನೂ ಪ್ರಧಾನಿ ಭೇಟಿಯಾಗಿ ಹಂಡಾರ ಶೇಖ್ ಕೋರಿಕೆಯನ್ನು ಈಡೇರಿಸಿದರು. ರಾಮಾಯಣ, ಮಹಾಭಾರತ ಕೃತಿ ಅನುವಾದಕರ ಭೇಟಿ. ರಾಮಾಯಣ ಮತ್ತು ಮಹಾಭಾರತವನ್ನು ಅರೇಬಿಕ್ ಭಾಷೆಗೆ ತರ್ಜುಮೆ ಮಾಡಿರುವ ಅಬ್ದುಲ್ಲಾ ಅಲ್ ಬರೌನ್ ಹಾಗೂ ಅವುಗಳನ್ನು ಪ್ರಕಟಿಸಿರುವ ಅಬ್ದುಲ್ ಲತೀಫ್ ಅಲ್ ನೆಸೆಫ್‌ರನ್ನು ಮೋದಿ ರವರು ಭೇಟಿ ಮಾಡಿ ಕುಶಲ ವಿಚಾರಿಸಿದರು. ಇನ್ನೂ ನಮ್ಮ ಭಾರತದ ಶ್ರೇಷ್ಠ ಗ್ರಂಥವಾದ ರಾಮಾಯಣ ಮತ್ತು ಮಹಾಭಾರತವನ್ನು ಅರೇಬಿಕ್ ಭಾಷೆಗೆ ತರ್ಜುಮೆ ಮಾಡಿ, ಅಲ್ಲಿಯ ಜನರಿಗೂ ರಾಮಾಯಣ,ಮಹಾಭಾರತದ ಆದರ್ಶಗಳನ್ನು ಪಸರಿಸುತ್ತಿರುವುದು ನಮಗೆ ಹೆಮ್ಮೆಯ ವಿಷಯವಾಗಿದೆ.





# ಮೋದಿಗೆ ಕುವೈತ್‌ನ ಉನ್ನತ ಗೌರವ

ಪ್ರವಾಸದ ಎರಡನೇ ದಿನ ನಮ್ಮ ಪ್ರಧಾನಿ ಮೋದಿಯವರಿಗೆ ಕುವೈತ್ ತನ್ನ ಅತ್ಯುನ್ನತ ನಾಗರಿಕ ಗೌರವ ಪ್ರಶಸ್ತಿಯಾದ ದಿ ಆರ್ಡರ್ ಆಫ್ ಮುಬಾರಕ್ ಅಲ್-ಕಬೀರ್ ಪುರಸ್ಕಾರ ನೀಡಿ ಗೌರವಿಸಲಾಯಿತು. ಉಭಯ ದೇಶಗಳ ನಡುವಿನ ಸಂಬಂಧವನ್ನು ಬಲಪಡಿಸುವಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಕೊಡುಗೆ ಪರಿಗಣಿಸಿ ಈ ಪ್ರಶಸ್ತಿ ನೀಡಲಾಗಿದೆ ಎಂದು ಕುವೈತ್ ತಿಳಿಸಿದೆ.

ಬಯಾನ್ ಅರಮನೆಗೆ ಆಗಮಿಸಿದ್ದ ಮೋದಿ ಅವರನ್ನು ಕುವೈತ್ ಪ್ರಧಾನಿ ಅಹ್ಮದ್ ಅಬ್ದುಲ್ಲಾ ಅಲ್-ಅಹ್ಮದ್ ಅಲ್-ಸಬಾಹ್ ಅವರು ಬರಮಾಡಿಕೊಂಡರು. ನಂತರ ಅವರಿಗೆ ಗೌರವ ರಕ್ಷಣೆ ನೀಡಿ, ಸಾಂಪ್ರದಾಯಿಕವಾಗಿ ಸ್ವಾಗತ ನೀಡಿದರು. ಗೌರವ ಸ್ವೀಕರಿಸಿ ಮೋದಿ, ಕುವೈತ್‌ನ ಅತ್ಯುನ್ನತ ಗೌರವ ಸ್ವೀಕರಿಸಿರುವುದು ನನಗೆ ಸಂತಸ ತಂದಿದೆ. ಈ ಗೌರವವನ್ನು ಭಾರತದ ಜನರಿಗೆ ಮತ್ತು ಉಭಯ ದೇಶಗಳ ನಡುವಿನ ಬಲವಾದ ಸ್ನೇಹಕ್ಕಾಗಿ ಅರ್ಪಿಸುತ್ತೇನೆ ಎಂದು ಹೇಳಿದ್ದಾರೆ.

ಇನ್ನೂ ಈ ಬಗ್ಗೆ ವಿದೇಶಾಂಗ ಸಚಿವರಾದ ಎಸ್. ಜೈಶಂಕರ್ ಇದು ಎಲ್ಲಾ ಭಾರತೀಯರಿಗೆ ಹೆಮ್ಮೆಯ ಕ್ಷಣವಾಗಿದೆ ಎಂದು ಹೇಳಿದ್ದಾರೆ. ಈ ಗೌರವವು ಗಲ್ಫ್ ರಾಷ್ಟ್ರಗಳ ಜತೆ ಸಂಪರ್ಕವನ್ನು ಬಲಪಡಿಸುವಲ್ಲಿ ಪ್ರಧಾನಿಯವರ ದೃಢವಾದ ಬದ್ಧತೆ ಮತ್ತು ನಾಯಕತ್ವಕ್ಕೆ ಸಾಕ್ಷಿಯಾಗಿದೆ. ಭಾರತ ಮತ್ತು ಕುವೈತ್ ನಡುವಿನ ದೀರ್ಘಕಾಲದ ಸ್ನೇಹಕ್ಕಾಗಿ, ಕುವೈತ್‌ನಲ್ಲಿರುವ ಭಾರತೀಯ ಸಮುದಾಯಕ್ಕೆ ಇದರ ಕೀರ್ತಿ ಸಲ್ಲುತ್ತದೆ ಎಂದು ತಿಳಿಸಿದ್ದಾರೆ.

ಮೋದಿಗೆ ನೀಡಲಾದ ಪ್ರಶಸ್ತಿಯನ್ನು 1974ರಲ್ಲಿ ಸ್ಥಾಪಿಸಲಾಗಿದ್ದು, ಆಯ್ದ ಜಾಗತಿಕ ನಾಯಕರಿಗೆ ಈ ಗೌರವ ಪ್ರಧಾನ ಮಾಡಲಾಗುತ್ತದೆ. ಈ ಹಿಂದೆ ಬಿಲ್ ಕ್ಲಿಂಟನ್, ಪ್ರಿನ್ ಚಾರ್ಲ್ಸ್, ಜಾರ್ಜ್ ಬುಷ್ ಇನ್ನಿತರ ವಿದೇಶಿ ನಾಯಕರಿಗೆ ಈ ಪ್ರಶಸ್ತಿ ನೀಡಲಾಗಿದೆ.

### ಭಾರತೀಯ ಕೊಡುಗೆ ಶ್ಲಾಘಿಸಿದ ಕುವೈತ್

ಕುವೈತ್‌ನಲ್ಲಿ 10 ಲಕ್ಷಕ್ಕಿಂತಲೂ ಹೆಚ್ಚು ಭಾರತೀಯರು ವಾಸವಾಗಿದ್ದಾರೆ. ಅವರ ಯೋಗಕ್ಷೇಮವನ್ನು ವಿಚಾರಿಸಿದ್ದಕ್ಕೆ ಅಮಿರ್‌ಗೆ ಮೋದಿ ಧನ್ಯವಾದ ಸಲ್ಲಿಸಿದರು. ಕುವೈತ್ ಅಭಿವೃದ್ಧಿ ಪಯಣದಲ್ಲಿ ಭಾರತೀಯ ಸಮುದಾಯದ ನೀಡಿದ ಕೊಡುಗೆಗೆ ಅಮೀರ್ ಮೆಚ್ಚುಗೆ ವ್ಯಕ್ತಪಡಿಸಿದರು. ಅಮಿರ್ ಅವರೊಂದಿಗಿನ ಭೇಟಿ ಅತ್ಯುತ್ತಮವಾಗಿ ಮತ್ತು ಫಲಪ್ರದವಾಗಿತ್ತು ಎಂದು ಪ್ರಧಾನಿ ಹರ್ಷ ವ್ಯಕ್ತಪಡಿಸಿದ್ದಾರೆ. ನಮ್ಮ ರಾಷ್ಟ್ರಗಳ ನಿಕಟ ಬಾಂಧವ್ಯಕ್ಕೆ ಅನುಗುಣವಾಗಿ ಪಾಲುದಾರಿಕೆ, ಕಾರ್ಯತಂತ್ರ ಹೆಚ್ಚಿಸಲು ಚರ್ಚೆ ನಡೆದಿದೆ. ಮುಂಬರುವ ದಿನಗಳಲ್ಲಿ ನಮ್ಮ ಸ್ನೇಹವು ಇನ್ನಷ್ಟು ಪ್ರವರ್ಧಮಾನಕ್ಕೆ ಬರಲಿದೆ ಎಂದು ತಿಳಿಸಿದ್ದಾರೆ.

### ಪ್ರಮುಖ ನಾಯಕರ ಜತೆ ದ್ವಿಪಕ್ಷೀಯ ಮಾತುಕತೆ

ಭಾರತ ಮತ್ತು ಕುವೈತ್ ಸಂಬಂಧವನ್ನು ಮತ್ತಷ್ಟು ಉತ್ತಮಪಡಿಸುವ ನಿಟ್ಟಿನಲ್ಲಿ ಅಲ್ಲಿನ ನಾಯಕರ ಜತೆ ಪ್ರಧಾನಿ ಮೋದಿ ದ್ವಿಪಕ್ಷೀಯ ಮಾತುಕತೆ ನಡೆಸಿದರು. ರಕ್ಷಣಾ ಸಂಬಂಧ, ಸಹಕಾರ ಸಹಿತ ಹಲವು ಮಹತ್ವದ ಅಂಶಗಳ ಕುರಿತು ಚರ್ಚೆ ನಡೆಸಿದರು. ನಿಯೋಗ ಮಟ್ಟದ ಮಾತುಕತೆಯಲ್ಲಿ ವ್ಯಾಪಾರ, ಹೂಡಿಕೆ, ಇಂಧನ, ರಕ್ಷಣೆ, ಭದ್ರತೆ, ಆರೋಗ್ಯ, ಶಿಕ್ಷಣ, ತಂತ್ರಜ್ಞಾನ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಕಾರ್ಯತಂತ್ರದ ಪಾಲುದಾರಿಕೆ ಬಲಪಡಿಸುವ ಬಗ್ಗೆ ಚರ್ಚಿಸಲಾಯಿತು.

ರಕ್ಷಣಾ ಉದ್ಯಮ, ರಕ್ಷಣಾ ಸಾಧನಗಳ ಪೂರೈಕೆ, ಜಂಟಿ ಸಮರಾಭ್ಯಾಸ, ತರಬೇತಿ, ಸಿಬ್ಬಂದಿ ಮತ್ತು ತಜ್ಞರ ವಿನಿಮಯ, ಸಂಶೋಧನೆ, ಅಭಿವೃದ್ಧಿ ಸಹಯೋಗಕ್ಕಾಗಿ ಕೆಲ ಒಪ್ಪಂದಗಳಿಗೆ ಎರಡೂ ದೇಶಗಳು ಸಹಿ ಹಾಕಿವೆ. ಅಷ್ಟೆ ಅಲ್ಲದೆ ಕ್ರೀಡೆ, ಸಂಸ್ಕೃತಿ ಮತ್ತು ಸೌರಶಕ್ತಿ ಕ್ಷೇತ್ರಗಳಲ್ಲಿ ಸಹಕಾರವನ್ನು ಸುಗಮಗೊಳಿಸುವ ಇತರ ಒಪ್ಪಂದಗಳಿಗೂ ಸಹಿ ಹಾಕಲಾಗಿದೆ. ಕುವೈತ್ ಅಧ್ಯಕ್ಷತೆಯ ಗಲ್ಫ್ ಸಹಕಾರ ಮಂಡಳಿ (ಜಿಸಿಸಿ)ಯೊಂದಿಗೆ ವ್ಯವಹಾರವನ್ನು ಹೆಚ್ಚಿಸಿಕೊಳ್ಳಲು ಭಾರತ ಈ ವೇಳೆ ಆಸಕ್ತಿ ತೋರಿದೆ. ಇದಲ್ಲದೇ ಮಾಹಿತಿ ತಂತ್ರಜ್ಞಾನ, ಫಾರ್ಮಾಸ್ಯುಟಿಕಲ್ಸ್, ಫಿನ್ ಟೆಕ್, ಮೂಲಸೌಕರ್ಯ ಮತ್ತು ಭದ್ರತೆ ಕ್ಷೇತ್ರಗಳಲ್ಲಿನ ಬಾಂಧವ್ಯವನ್ನು ಹೆಚ್ಚಿಸುವ ಕುರಿತೂ ಚರ್ಚೆ ನಡೆಸಲಾಗಿದೆ.

ಒಟ್ಟಾರೆ ಮೋದಿ ಸರ್ಕಾರದ ವಿದೇಶಾಂಗ ನೀತಿ ಎಲ್ಲರೂ ಮೆಚ್ಚಬೇಕಾಗಿದ್ದು,ಮುಂದಿನ ದಿನಗಳಲ್ಲಿ ಕುವೈತ್ ಮತ್ತು ಭಾರತದ ಸಂಬಂಧ ಪ್ರವರ್ಧಮಾನಕ್ಕೆ ಬಂದು ಭಾರತದ ಅಭಿವೃದ್ಧಿಯ ಬೆಳವಣಿಗೆಯಲ್ಲಿ ಸಹಕಾರಿಯಾಗುವುದರ ಜೊತೆಗೆ, ಜಾಗತಿಕ ಮಟ್ಟದಲ್ಲಿ ಕುವೈತ್ ಭಾರತದ ಪರ ವಹಿಸುವುದರಲ್ಲಿ ಅನುಮಾನವಿಲ್ಲಾ.



## ಪ್ರಧಾನಿ ಮೋದಿ ಮುಕುಟಕ್ಕೆ 20 ಅಂತರಾಷ್ಟ್ರೀಯ ಗೌರವ

**ಮೋದಿಯವರ ಸಮರ್ಥ ಆಡಳಿತ, ನಾಯಕತ್ವ ಮತ್ತು ವಿದೇಶಾಂಗ ನೀತಿಯ ನಡೆ, ನಿರ್ಧಾರಗಳ ಸ್ಪಷ್ಟತೆಗೆ ಈವರೆಗೆ ಅಮೆರಿಕಾವು ಸೇರಿದಂತೆ 20 ದೇಶಗಳ ಅಂತರಾಷ್ಟ್ರೀಯ ಗೌರವಗಳು ಸಂದಿವೆ. ಇದು ಭಾರತೀಯರಾದ ನಮಗೆಲ್ಲರಿಗೂ ಹೆಮ್ಮೆಯ ವಿಷಯವೇ ಸರಿ.**

### ಮೋದಿಗೆ ಲಭಿಸಿದ ಅತ್ಯುನ್ನತ ನಾಗರಿಕ ಗೌರವಗಳು

ಆರ್ಡ್ ಆಫ್ ಕಿಂಗ್ ಅಬ್ದುಲಜೀಜ್ – ಸೌದಿ ಅರೇಬಿಯಾ, ಆರ್ಡರ್ ಆಫ್ ಅಮಾನುಲ್ಲಾ ಖಾನ್ – ಅಫ್ಘಾನಿಸ್ತಾನ, ಆರ್ಡರ್ ಆಫ್ ಸ್ಟೇಟ್ ಪ್ಯಾಲೆಸ್ತೀನ್ – ಪ್ಯಾಲೆಸ್ತೀನ್, ಆರ್ಡರ್ ಆಫ್ ಇಝುದ್ದೀನ್ – ಮಾಲ್ಡೀವ್ಸ್, ಆರ್ಡರ್ ಆಫ್ ಜಾಯೆದ್– ಯುನೈಟೆಡ್ ಅರಬ್ ಎಮರೇಟ್ಸ್, ಆರ್ಡರ್ ಆಫ್ ದಿ ರಿನೈಸಾನ್ –ಬಹ್ರೇನ್, ಲೀಜನ್ ಆಫ್ ಮೆರಿಟ್ –ಅಮೆರಿಕ, ಆರ್ಡರ್ ಆಫ್ ಫಿಜಿ –ಫಿಜಿ, ಆರ್ಡರ್ ಆಫ್ ಲೋಗೋಹು – ಪಪುವಾ ನ್ಯೂಗಿನಿಯಾ, ಆರ್ಡರ್ ಆಫ್ ದಿ ನೈಲ್ –ಈಜಿಪ್ಟ್, ಲೀಜನ್ ಆಫ್ ಆನರ್–ಫ್ರಾನ್ಸ್‌ವ, ಆರ್ಡರ್ ಆಫ್ ಆನರ್–ಗ್ರೀಸ್, ಆರ್ಡರ್ ಆಫ್ ದಿ ಡ್ರ್ಯಾಗನ್ ಕಿಂಗ್–ಭೂತಾನ್, ಆರ್ಡರ್ ಆಫ್ ದಿ ನೈಜರ್–ನೈಜೀರಿಯಾ, ಆರ್ಡರ್ ಆಫ್ ಸೇಂಟ್ ಆಂಡ್ರ್ಯೂ– ರಷ್ಯಾ, ಡೊಮೆನಿಕಾ ಅವಾರ್ಡ್ ಆಫ್ ಆನರ್ –ಡೊಮೆನಿಕಾ, ಆರ್ಡರ್ ಆಫ್ ಎಕ್ಸಲೆನ್ಸ್ ಆಫ್ ಗಯಾನಾ – ಗಯಾನಾ, ಆರ್ಡರ್ ಆಫ್ ಫ್ರೀಡಮ್ ಆಫ್ ಬಾರ್ಬಡೋಸ್– ಬಾರ್ಬಡೋಸ್, ಆರ್ಡರ್ ಆಫ್ ಮುಬಾರಕ್ ಅಲ್ ಕಬೀರ್ – ಕುವೈತ್

## ಹಸುಗಳ ಕೆಚ್ಚಲು ಕೊಯ್ದ ಪಾಪಿಗಳು! ವಿಕೃತಿ ಮೆರೆದ ಕಿರಾತಕರು



**ಚಾ**ಮರಾಜಪೇಟೆಯಲ್ಲಿ ಗೋವುಗಳ ಹಬ್ಬ ಎನಿಸಿರುವ ಸಂಕ್ರಾಂತಿ ಹಬ್ಬದ ಸಂದರ್ಭದಲ್ಲಿಯೇ ಕಿಡಿಗೇಡಿಗಳು ಮೂರು ಹಸುಗಳ ಕೆಚ್ಚಲು ಕೊಯ್ದು, ಮಚ್ಚಿನಿಂದ ಹಲ್ಲೆ ಮಾಡಿ ವಿಕೃತಿ ಮೆರೆದಿರುವ ಘಟನೆ ನಡೆದಿದೆ. ಕರ್ಣ ಎಂಬುವವರಿಗೆ ಸೇರಿದ 8 ಹಸುಗಳು ಓಲ್ಡ್ ಪೆನ್ಷನ್ ಮೊಹಲ್ಲಾದಲ್ಲಿನ ರಸ್ತೆಬದಿ ಶೆಡ್‌ನಲ್ಲಿ ಮಲಗಿದ್ದವು. 8 ಹಸುಗಳಲ್ಲಿ ಮೂರು ಹಸುಗಳ ಕೆಚ್ಚಲುಗಳನ್ನು ಕೊಯ್ದ ಕಿರಾತಕರು ರಕ್ತದ ಕೋಡಿಯನ್ನೇ ಹರಿಸಿದ್ದಾರೆ. ಮೂಖರೋಧನೆ ಅನುಭವಿಸುತ್ತಿದ್ದ ಹಸುಗಳಿಗೆ ಚಾಮರಾಜ ಪೇಟೆಯ ಪಶು ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಕಾಟನ್‌ಪೇಟೆ ಠಾಣೆ ಪೊಲೀಸ್ ಸಿಬ್ಬಂದಿ, ಚಿಕ್ಕಪೇಟೆ ಉಪವಿಭಾಗದ ಎಸಿಪಿ ನೇತೃತ್ವದಲ್ಲಿ ಮುನ್ನೆಚ್ಚರಿಕೆ ಕ್ರಮವನ್ನು ವಹಿಸಲಾಗಿದೆ. ಘಟನೆಯನ್ನು ಖಂಡಿಸಿರುವ ಬಿಜೆಪಿ ನಾಯಕರು, ರಾಜ್ಯ ಸರಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಸರ್ಕಾರ, ಪೊಲೀಸ್ ಇಲಾಖೆ ಸತ್ತುಹೋಗಿದೆ. ಪುಂಡ–ಪೋಕರಿಗಳಿಗೆಲ್ಲ ಕಾಂಗ್ರೆಸ್ ಸರ್ಕಾರ ಬೆಂಬಲ ನೀಡುತ್ತಿದೆ. ಯಾರು ಈ ಕೆಲಸ ಮಾಡಿದ್ದಾರೋ ಅವರಿಗೆ ತಕ್ಕ ಶಿಕ್ಷೆಯಾಗಬೇಕು ಎಂದು ಆಗ್ರಹಿಸಿದ್ದಾರೆ.

ಕ್ರೂರ ಕೃತ್ಯದಿಂದ ನೊಂದ ಕುಟುಂಬಸ್ಥರ ನಿವಾಸಕ್ಕೆ ಬಿಜೆಪಿ ನಾಯಕರು ತೆರಳಿ ಗೋ ಪೂಜೆ ನೆರವೇರಿಸಿ ಸಂತ್ರಸ್ಥ ಕುಟುಂಬಕ್ಕೆ ಗೋವನ್ನು ನೀಡಿ ಧೈರ್ಯ ತುಂಬಿದ್ದಾರೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದಲೂ ಗೋ ಸುರಕ್ಷತೆಯ ಬಗ್ಗೆ ತಾತ್ಸಾರ ಧೋರಣೆ ಅನುಸರಿಸುತ್ತಿದ್ದು, ಈ ಕೃತ್ಯಗಳ ಹಿಂದಿರುವ ಶಕ್ತಿಯನ್ನು ಬಗ್ಗು ಬಡಿದು ಇದಕ್ಕೆ ಕುಮ್ಮಕ್ಕು ನೀಡುತ್ತಿರುವ ಶಕ್ತಿಗಳ ವಿರುದ್ಧವೂ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಲಾಯಿತು. ಈ ಸಂದರ್ಭದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ, ವಿರೋಧ ಪಕ್ಷದ ನಾಯಕರಾದ ಶ್ರೀ ಆರ್. ಅಶೋಕ, ಸಂಸದರಾದ ಶ್ರೀ ಪಿ.ಸಿ. ಮೋಹನ್ , ವಿಧಾನ ಪರಿಷತ್ ಸದಸ್ಯರಾದ ಶ್ರೀ ಎನ್. ರವಿಕುಮಾರ್, ಬೆಂಗಳೂರು ಕೇಂದ್ರ ಜಿಲ್ಲಾಧ್ಯಕ್ಷರಾದ ಶ್ರೀ ಸಪ್ತಗಿರಿ ಗೌಡ, ಮಾಜಿ ಐಪಿಎಸ್ ಅಧಿಕಾರಿಗಳಾದ ಶ್ರೀ ಭಾಸ್ಕರ್ ರಾವ್ ಅವರು ಸೇರಿದಂತೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

# ಜಾರ್ಜ್ ಸೋರಸ್ ಮತ್ತು ಕಾಂಗ್ರೆಸ್ ಪಕ್ಷಕ್ಕೂ ಇರುವ ಸಂಬಂಧವಾದರೂ ಏನು ?



ಸಂಸತ್ತಿನ ಚಳಿಗಾಲ ಅಧಿವೇಶನದ ಚರ್ಚೆಯ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಅಡ್ಡಿ ಅಡಚಣೆಗಳ ನಡುವೆಯೂ ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷರೂ ಹಾಗೂ ರಾಜ್ಯ ಸಭೆಯಲ್ಲಿ ಆಡಳಿತರೂಢ ಪಕ್ಷದ ನಾಯಕ ಶ್ರೀ ಜಗತ್ ಪ್ರಕಾಶ್ ನಡ್ಡಾ ಅವರು ಭಾರತ ವಿರೋಧಿ ಜಾರ್ಜ್ ಸೋರಸ್ ಹಾಗೂ ಕಾಂಗ್ರೆಸ್ ಪಕ್ಷದ ಸೋನಿಯಾ ಗಾಂಧಿಯ ನಡುವೆ ಇರುವ ನಿಕಟವಾದ ಸಂಬಂಧವನ್ನು ಪ್ರಸ್ತಾಪಿಸಿದರು. ಜಾರ್ಜ್ ಸೋರಸ್ OCCRP (he Organized Crime and Corruption Reporting Project) ಸಂಘಟನೆಯ ಮೂಲಕ ತನ್ನ ಹಣ ಬಲದೊಂದಿಗೆ ಭಾರತದ ಅರ್ಥ ವ್ಯವಸ್ಥೆಯನ್ನು ಹಾಳುಗೆಡಲು ಯತ್ನಿಸುತ್ತಿರುವ ಬಗ್ಗೆ ಹಾಗೂ ಜಾರ್ಜ್ ಸೋರಸ್ ಮತ್ತು ಕಾಂಗ್ರೆಸ್ ಪಕ್ಷಕ್ಕೂ ಇರುವ ಸಂಬಂಧಗಳ ಕುರಿತು ಪ್ರಸ್ತಾಪಿಸಿದರು. ಜೊತೆಗೆ ಪ್ರತ್ಯೇಕ ಕಾಶ್ಮೀರವನ್ನು ಬೆಂಬಲಿಸುತ್ತಿರುವ ದೇಶ ವಿರೋಧಿ ಸಂಘಟನೆಗಳಿಗೆ ಆರ್ಥಿಕ ನೆರವು ನೀಡುತ್ತಿರುವ FDL&AP (Forum of Democratic Leaders in the Asia & Pacific) ಸಂಸ್ಥೆ ಮತ್ತು ಕಾಂಗ್ರೆಸ್ ಪಕ್ಷದ ನಡುವೆ ಇರುವ ಸಂಬಂಧವನ್ನು ಉಲ್ಲೇಖಿಸಿ ಆತಂಕ ವ್ಯಕ್ತಪಡಿಸಿದರು.

ರಾಜ್ಯಸಭಾ ಚಳಿಗಾಲದ ಅಧಿವೇಶನದಲ್ಲಿ ಮಾತನಾಡಿದ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಶ್ರೀ ಜೆ.ಪಿ. ನಡ್ಡಾರವರು, ಸರ್ಕಾರವನ್ನು ಅಸ್ಥಿರಗೊಳಿಸಲು ಪ್ರಯತ್ನಿಸುತ್ತಿರುವ ಸಂಘಟನೆಗಳಲ್ಲಿ OCCRP ಕೂಡ ಒಂದಾಗಿದೆ. ಪ್ರತಿಪಕ್ಷದ ನಾಯಕರುಗಳು ಈ ಸಂಘಟನೆ ಬಿಡುಗಡೆ ಮಾಡಿದ ವರದಿಗಳಲ್ಲಿನ ವಿಷಯಗಳನ್ನು ಉಲ್ಲೇಖಿಸಿ ದೇಶದಲ್ಲಿ ಅಸ್ಥಿರತೆಯನ್ನು ತರಲು ಪ್ರಯತ್ನಿಸುತ್ತಿದ್ದಾರೆ. ಆದ್ದರಿಂದ ದೇಶ ವಿರೋಧಿ ಜಾರ್ಜ್ ಸೋರಸ್ ಸಂಸ್ಥೆಯ ವರದಿಗಳನ್ನೇ ಪ್ರಸ್ತಾಪಿಸುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ಸೋರಸ್ ಜೊತೆ ಇರುವ ಸಂಬಂಧದ ಬಗ್ಗೆ ಅನುಮಾನಗಳು ಮೂಡುತ್ತವೆ ಎಂದರು.

### ದೇಶದ ಭದ್ರತೆಯೊಂದಿಗೆ ಕಾಂಗ್ರೆಸ್ ಚೆಲ್ಲಾಟ

ಭಾರತವನ್ನು ಅಸ್ಥಿರಗೊಳಿಸಲು ಪ್ರಯತ್ನಿಸುತ್ತಿರುವ ಸೋರಸ್ ಜೊತೆಗಿನ ಕಾಂಗ್ರೆಸ್ ಸಂಬಂಧಗಳನ್ನು ಉಲ್ಲೇಖಿಸಿದ ಶ್ರೀ ನಡ್ಡಾ, ಕಾಂಗ್ರೆಸ್ ಪಕ್ಷವು ದೇಶ ವಿರೋಧಿ ವಿದೇಶಿ ಶಕ್ತಿಗಳ ಸಾಧನವಾಗಿ ಕಾರ್ಯನಿರ್ವಹಿಸುತ್ತಿದೆ, ಶ್ರೀಮತಿ ಸೋನಿಯಾ ಗಾಂಧಿ ಅವರು ಏಷ್ಯಾ ಪೆಸಿಫಿಕ್ ಫೌಂಡೇಶನ್‌ನಲ್ಲಿ ಡೆಮಾಕ್ರಟಿಕ್ ಲೀಡರ್ಸ್ ಫೋರಮ್‌ನ ಸಹ-ಅಧ್ಯಕ್ಷರಾಗಿದ್ದಾರೆ. ಇದು ಸೋರಸ್ ಫೌಂಡೇಶನ್‌ನಿಂದ ಆರ್ಥಿಕ ನೆರವು ಪಡೆಯುತ್ತಿದೆ. ಈ ರೀತಿಯ ಸಂಬಂಧ ಅತ್ಯಂತ ಕಳವಳಕಾರಿ ವಿಷಯವಾಗಿದೆ, ಇದು ವಿಶ್ವಮಟ್ಟದಲ್ಲಿ ಭಾರತದ ಗೌರವಕ್ಕೆ ಕಳಂಕ ತರುವ ವಿಷಯ ಮತ್ತು ರಾಷ್ಟ್ರೀಯ ಭದ್ರತೆಗೂ ಮಾರಕ, ಕಾಂಗ್ರೆಸ್ ಈ ರೀತಿ ಮಾಡುವ ಮೂಲಕ ದೇಶದ ಭದ್ರತೆಯ ಜೊತೆಗೆ ಚೆಲ್ಲಾಟವಾಡುತ್ತಿದೆ ಎಂದು ಹೇಳಿದರು.

OCCRP (the Organized Crime and Corruption Reporting Project) ಭಾರತದ ಅಂತರಾಷ್ಟ್ರೀಯ ಸಂಬಂಧಗಳನ್ನು ಕೆಡಿಸುವ ಕಾರ್ಯವನ್ನು ಸದಾ ಮಾಡುತ್ತಿದೆ. ಭಾರತದ ಅಂತರಾಷ್ಟ್ರೀಯ ಸಂಬಂಧಗಳನ್ನು ಅಸ್ಥಿರಗೊಳಿಸುವ ನಿಟ್ಟಿನಲ್ಲೇ ಈ ಸಂಸ್ಥೆ ಕೆಲಸ ಮಾಡುತ್ತಿದೆ. ಈ OCCRP ಏನೇ ವರದಿ ಮಾಡಿದರೂ ಲೋಕಸಭೆಯ ವಿರೋಧ ಪಕ್ಷದ ನಾಯಕರು ಅದನ್ನು ಸಂಸತ್ತಿನಲ್ಲಿ ಪ್ರಸ್ತಾಪಿಸಿ, ಬಾಹ್ಯ ಶಕ್ತಿಗಳ ಕೈಗೊಂಬೆಯಂತೆ ದೇಶವನ್ನು ಅಸ್ಥಿರಗೊಳಿಸಲು ಪ್ರಯತ್ನಿಸುತ್ತಿದ್ದಾರೆ ಎಂಬುದನ್ನು ಶ್ರೀ ನಡ್ಡಾ ತಮ್ಮ ಮಾತುಗಳಲ್ಲಿ ಸ್ಪಷ್ಟಪಡಿಸಿದರು.

ಇತ್ತ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಎನ್‌ಡಿಎ ಸರ್ಕಾರವು ಭಾರತದ ಹಿತಾಸಕ್ತಿಗಳನ್ನು ರಕ್ಷಿಸಲು ಕಟಿಬದ್ಧವಾಗಿ ನಿಂತಿದ್ದರೆ, ಅತ್ತ ಕಾಂಗ್ರೆಸ್ ವಿದೇಶಿ ಶಕ್ತಿಗಳ ಮೂಲಕ ಭಾರತದಲ್ಲಿ ಅಸ್ಥಿರತೆಯನ್ನು ಸೃಷ್ಟಿಸುವ ಹುನ್ನಾರಗಳನ್ನು ಮಾಡುತ್ತಿದೆ, ಆದರೆ ಕಾಂಗ್ರೆಸ್‌ನ ಈ ಪ್ರಯತ್ನ ಎಂದಿಗೂ ಯಶ ಕಾಣುವುದಿಲ್ಲ ಎಂದು ಹೇಳಿದರು.



## ಧೈರ್ಯವಿದ್ದರೆ ಕಾಂಗ್ರೆಸ್ ಈ ಪ್ರಶ್ನೆಗಳಿಗೆ ಉತ್ತರಿಸಲಿ

- ಪ್ರತೀ ಬಾರಿಯೂ ಸಂಸತ್ತಿನ ಅಧಿವೇಶನ ಸಂದರ್ಭದಲ್ಲೇ ವಿದೇಶಿ ಶಕ್ತಿಗಳಿಂದ ಒಂದು ಭಾರತ ವಿರೋಧಿ ಕಪೋಲ ಕಲ್ಪಿತ ಕತೆ (ನರೇಟಿವ್)ಸಿದ್ಧವಾಗುತ್ತದೆ ಎಂಬುದು ನಿಜವಲ್ಲವೇ?. ಕಾಂಗ್ರೆಸ್ ಇದೇ ಕಪೋಲ ಕಲ್ಪಿತ ಕತೆ (ನರೇಟಿವ್)ಯನ್ನು ಮುಂದಿಟ್ಟುಕೊಂಡು ಅಧಿವೇಶನಕ್ಕೆ ಅಡ್ಡಿಯನ್ನುಂಟು ಮಾಡುತ್ತಿರುವುದು ನಿಜವಲ್ಲವೇ? ಇದು ಕಾಕತಾಳೀಯವೋ? ಅಥವಾ ಪೂರ್ವ ಯೋಜಿತವೋ?
- ಸೋನಿಯಾ ಗಾಂಧಿ ಅವರು ಭಾರತ ವಿರೋಧಿ ಮತ್ತು ಪಾಕಿಸ್ತಾನದ ಪರ ಹೇಳಿಕೆಗಳ ವೇದಿಕೆಯಾಗಿರುವ ಫೋರಂ ಆಫ್ ಡೆಮಾಕ್ರಟಿಕ್ ಲೀಡರ್ಸ್ ಇನ್ ಏಷ್ಯಾ ಪೆಸಿಫಿಕ್ (ಎಫ್‌ಡಿಎಲ್-ಎಪಿ) ಸಹ ಅಧ್ಯಕ್ಷೆಯಾಗಿದ್ದಾರೆ, ಈ ಸಂಸ್ಥೆ ಭಾರತ-ವಿರೋಧಿ ಕಾರ್ಯಕ್ರಮಗಳ ಸೃಷ್ಟಿಕರ್ತ ಜಾರ್ಜ್ ಸೊರೊಸ್‌ನ ಸಂಘಟನೆಯಿಂದ ಹಣ ಪಡೆಯುತ್ತಿದೆ ಎಂಬುದು ಜಗಜ್ಜಾಹೀರಾಗಿದೆ. ಈ ಸಂಸ್ಥೆಯ ಎಲ್ಲವೂ ಗೊತ್ತಿದ್ದೂ ಸೋನಿಯಾ ಗಾಂಧಿ ಈ ಹುದ್ದೆಯನ್ನು ಒಪ್ಪಿಕೊಂಡಿರುವುದು ಹೇಗೆ ಮತ್ತು ಸರಿಯೇ?
- ಜಮ್ಮು ಮತ್ತು ಕಾಶ್ಮೀರಕ್ಕೆ ಸಂಬಂಧಿಸಿದಂತೆ ಎಫ್‌ಡಿಎಲ್‌ಎಪಿ ವೇದಿಕೆಯಲ್ಲಿ ಭಾರತ ವಿರೋಧಿ ಮತ್ತು ಪಾಕಿಸ್ತಾನದ ಪರ ಚರ್ಚೆಗಳಾಗುತ್ತದೆ. ಆ ಸಂಸ್ಥೆಯ ಸಹ ಅಧ್ಯಕ್ಷೆಯಾಗಿ ಸೋನಿಯಾ ಗಾಂಧಿ ಈ ಚರ್ಚೆಯ ಅಭಿಪ್ರಾಯಗಳನ್ನು ಒಪ್ಪುತ್ತಾರೆಯೇ ?
- ಜಾರ್ಜ್ ಸೊರೊಸ್ ಮತ್ತು ಆತನೊಂದಿಗೆ ಸಂಪರ್ಕ ಹೊಂದಿರುವ ಸಂಘಟನೆಗಳು ಭಾರತದಲ್ಲಿ ಅಸ್ಥಿರತೆಯನ್ನು ಸೃಷ್ಟಿಸಲು ಸದಾ ಪ್ರಯತ್ನಿಸುತ್ತಿವೆ ಮತ್ತು ಈ ಪಿತೂರಿ ದೇಶದ್ರೋಹಕ್ಕೆ ಸಮಾನವಾಗಿದೆ. ಅಂತಹ ವ್ಯಕ್ತಿಗಳು ಮತ್ತು ಸಂಘಟನೆಗಳೊಂದಿಗೆ ಕಾಂಗ್ರೆಸ್ ಹೊಂದಿರುವ ಸಂಬಂಧದ ಬಗ್ಗೆ ಕಾಂಗ್ರೆಸ್ ಅಭಿಪ್ರಾಯವೇನು?, ಇಂತಹ ದೇಶದ್ರೋಹಿ ಸಂಘಟನೆಗಳೊಂದಿಗೆ ಕಾಂಗ್ರೆಸ್ ಗುರುತಿಸಿಕೊಂಡಿರುವುದು ದೇಶ ವಿರೋಧಿ ಎನಿಸುವುದಿಲ್ಲವೇ?, ಇಂತಹ ದೇಶವಿರೋಧಿ ಸಂಘಟನೆಯೊಂದಿಗೆ ಗುರುತಿಸಿ ಕೊಂಡಿರುವುದಕ್ಕೆ ಕಾಂಗ್ರೆಸ್ ನಾಯಕರುಗಳು ನೀಡುವ ಸಮಜಾಯಿಷಿಯಾದರೂ ಏನು?

## ಕಾಂಗ್ರೆಸ್ ಬಗೆಗಿನ ಸಂದೇಹಗಳು

- ಕಾಂಗ್ರೆಸ್ ನಾಯಕರುಗಳು ದೇಶದ್ರೋಹಿ ಸಂಘಟನೆಗಳಲ್ಲಿ ಪದಾಧಿಕಾರಿಗಳಾಗಿ ಕುಳಿತಿದ್ದಾರೆ. ಭಾರತದಲ್ಲಿ ಅಸ್ಥಿರತೆ ಸೃಷ್ಟಿಸಿ ಮೋದಿ ಸರಕಾರವನ್ನು ಕಿತ್ತೊಗೆಯುವ ಆಶಯವನ್ನು ಬಹಿರಂಗವಾಗಿ ವ್ಯಕ್ತಪಡಿಸಿರುವ ಜಾರ್ಜ್ ಸೋರಸ್ ಅವರಂತಹ ವ್ಯಕ್ತಿಗಳೊಂದಿಗೆ ಕಾಂಗ್ರೆಸ್‌ನ ಸಂಬಂಧ ಹೊಂದಿದೆ.
- ವಿದೇಶಿ ಶಕ್ತಿಗಳು ಬೆಂಬಲಿಸುತ್ತಿರುವ ಭಾರತ ವಿರೋಧಿ ತತ್ವಗಳು ಮತ್ತು ವ್ಯಕ್ತಿಗಳಿಗೆ ಕಾಂಗ್ರೆಸ್ ಬೆಂಬಲ ನೀಡುತ್ತಿರುವುದು ಖೇದದ ಸಂಗತಿ. ಅವರನ್ನು ಬೆಂಬಲಿಸುವುದು ದೇಶ ವಿರೋಧಿ ಶಕ್ತಿಗಳೊಂದಿಗೆ ಕೈಜೋಡಿಸಿದೆ.
- ವಿದೇಶಿ ಶಕ್ತಿಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡಿರುವ ಇತಿಹಾಸ ಕಾಂಗ್ರೆಸ್‌ಗೆ ಇದೆ. 2005 ರ ವೋಲ್ಕರ್ ವರದಿಯಲ್ಲಿ ಬಹಿರಂಗಪಡಿಸಿದಂತೆ ಇದೇ ಕಾಂಗ್ರೆಸ್ ತೈಲ ಕೂಪನ್‌ಗಳನ್ನು ಸ್ವೀಕರಿಸಿ ಸದ್ದಾಂ ಹುಸೇನ್‌ನಿಂದ ಹಣವನ್ನು ಪಡೆದಿತ್ತು. ಈಗಿನ ಕಾಂಗ್ರೆಸ್‌ನ ವರ್ತನೆ ಇತಿಹಾಸದ ಮುಂದುವರೆದ ಹಳೇ ಚಾಳಿ.
- ಕಾಂಗ್ರೆಸ್ ಪಕ್ಷದ ಮೇಲಿನ ಈ ಆರೋಪ ಕೇವಲ ಬಿಜೆಪಿಯದಲ್ಲ, ಸ್ವತಃ ಕಾಂಗ್ರೆಸ್ ಪಕ್ಷದ ಮಾಜಿ ವಿದೇಶಾಂಗ ಸಚಿವರೇ ಸೋನಿಯಾ ಗಾಂಧಿಯವರಿಗೆ ಬರೆದ ಪತ್ರದಲ್ಲಿ ದೇಶ ವಿರೋಧಿ ವಿದೇಶಿ ಶಕ್ತಿಗಳ ಜೊತೆಗಿನ ಕಾಂಗ್ರೆಸ್ ನಾಯಕರ ಸಂಬಂಧವನ್ನು ಒಪ್ಪಿಕೊಂಡಿರುವುದನ್ನು ತಮ್ಮ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ.
- ರಾಜೀವ್ ಗಾಂಧಿ ಫೌಂಡೇಷನ್ ಕೂಡ ಜಾರ್ಜ್ ಸೋರಸ್ ಅವರ ಸಂಸ್ಥೆಯಿಂದ ಧನ ಸಹಾಯವನ್ನು ಪಡೆದಿದೆ ಮತ್ತು ಇದು ಈಗಾಗಲೇ ಮಾಧ್ಯಮಗಳಲ್ಲಿ ವರದಿಯಾಗಿದೆ.

## ಕಾಕತಾಳೀಯವೋ ಅಥವಾ ವ್ಯವಸ್ಥಿತ ಭಾರತ ವಿರೋಧಿ ಪ್ರಯೋಗವೋ

- ಜನವರಿ 29, 2021 ರ ಸಂಸತ್ತಿನ ಅಧಿವೇಶನದದ ಸಮಯದಲ್ಲೆ (03-02-2021) ರೈತರ ಕುರಿತಾದ ವರದಿಯನ್ನು ಬಿಡುಗಡೆ.
- 2021ರ ಸಂಸತ್ತಿನ ಮುಂಗಾರು ಅಧಿವೇಶನಕ್ಕೆ ಸರಿಯಾಗಿ 18.07.2021 ರಂದು ಪೆಗಾಸಸ್ ವರದಿ ಬಿಡುಗಡೆ.
- ಜನವರಿ 30, 2023 ರಂದು ಬಜೆಟ್ ಅಧಿವೇಶನ ಪ್ರಾರಂಭವಾಗುವುದಕ್ಕೆ ಸರಿಯಾಗಿ ಜನವರಿ 24, 2023 ರಂದು ಹಿಂಡೆನ್‌ಬರ್ಗ್ ವರದಿ ಪ್ರಕಟ.
- ಜನವರಿ 30, 2023 ರಂದು ಪ್ರಾರಂಭವಾದ ಸಂಸತ್ತಿನ ಅಧಿವೇಶನಕ್ಕೆ ಮುಂಚಿತವಾಗಿ, ಅಂದರೆ 07.01. 2023 ರಂದು, BBC ಸಾಕ್ಷ್ಯಚಿತ್ರವನ್ನು ಬಿಡುಗಡೆ ಮಾಡಿತು.
- 20.07.2023 ರಂದು ಸಂಸತ್ ಅಧಿವೇಶನ ಪ್ರಾರಂಭದಲ್ಲಿ 19.07.2023 ರಂದು ಮಣಿಪುರದ ವೀಡಿಯೊ ಬಿಡುಗಡೆ.
- ಭಾರತದ ಲೋಕಸಭಾ ಚುನಾವಣೆಯ ಸಮಯದಲ್ಲಿ 01.05.2024 ರಂದು, ಕೋವಿಡ್ ಲಸಿಕೆ ವರದಿ ಬಿಡುಗಡೆ.
- SEBI ಅಧ್ಯಕ್ಷರ ಕುರಿತ ವರದಿ ಆಗಸ್ಟ್ 2024 ರಲ್ಲಿ' ಸಂಸತ್ತಿನ ಅಧಿವೇಶನದ ಸಮಯದಲ್ಲಿ ಬಿಡುಗಡೆ.
- ನವೆಂಬರ್ 20, 2024 ರಂದು, ನವೆಂಬರ್ 25, 2024 ರ ಸಂಸತ್ ಅಧಿವೇಶನ ಪ್ರಾರಂಭದ ಮೊದಲು ಅಮೇರಿಕಾದಲ್ಲಿ ಒಂದು ವರದಿಯನ್ನು ಪ್ರಕಟ.

## ಜಾರ್ಜ್ ಸೋರಸ್ ಮತ್ತು ರಾಹುಲ್ ಸಂಬಂಧಕ್ಕೆ ಸಾಕ್ಷಿ



- ಫ್ರೆಂಚ್ ಪತ್ರಿಕೆ 'ಮೀಡಿಯಾಪಾರ್ಟ್' ನಲ್ಲಿ ಪ್ರಕಟವಾದ ಲೇಖನದಲ್ಲಿ ಜಾರ್ಜ್ ಸೋರಸ್, ನ್ಯೂಸ್ ಪೋರ್ಟಲ್ OCCRP ಮತ್ತು ಕಾಂಗ್ರೆಸ್ ಸಂಸದ ಮತ್ತು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿಯೊಂದಿಗೆ ಸೇರಿ ಭಾರತದ ವಿರುದ್ಧ ತ್ರಿಕೋನೀಯ ಷಡ್ಯಂತ್ರವನ್ನು ಹಣೆದಿರುವ ಸಂಗತಿಯ ಬಗ್ಗೆ ವರದಿ ಪ್ರಕಟವಾಗಿದೆ.
- ಜುಲೈ 1, 2021 ರಂದು, OCCRPಯು ಭಾರತೀಯ ಲಸಿಕೆ ಕೋವಾಕ್ಸಿನ್ ಅನ್ನು ಹೀಗಳೆಯಲು ಲೇಖನವನ್ನು ಪ್ರಕಟಿಸಿತು. ಜುಲೈ 2 ರಂದು ಕಾಂಗ್ರೆಸ್, ಸರ್ಕಾರ ಮತ್ತು ಕೋವಾಕ್ಸಿನ್ ಅನ್ನು ಗುರಿಯಾಗಿಟ್ಟುಕೊಂಡು ಪತ್ರಿಕಾ ಗೋಷ್ಠಿಯನ್ನು ನಡೆಸಿತು.
- OCCRPಯು ತನ್ನ ಆಧಾರ ರಹಿತ ಮತ್ತು ಪೂರ್ವಾಗ್ರಹ ಪೀಡಿತ ಭಾರತ ವಿರೋಧಿ ವರದಿಗಳ ಮೂಲಕ ಭಾರತದ ದೊಡ್ಡ ಕೈಗಾರಿಕೋದ್ಯಮಿಗಳ ವಿಶ್ವಾಸಾರ್ಹತೆಯನ್ನು ಕುಂದಿಸುವ ವರದಿಗಳನ್ನು ಪ್ರಕಟಿಸುವ ಮೂಲಕ ಆರ್ಥಿಕ ಬೆಳವಣಿಗೆಗೆ ಅಡ್ಡಿಪಡಿಸುವುದು, ಷೇರು ಮಾರುಕಟ್ಟೆಗಳನ್ನು ಕುಸಿಯುವ ಮತ್ತು ಹೂಡಿಕೆದಾರರ ವಿಶ್ವಾಸವನ್ನು ದುರ್ಬಲಗೊಳಿಸುವ ಪ್ರಯತ್ನವನ್ನು ಮಾಡುತ್ತಿದೆ. ಈ ಮೂಲಕ ಸಾರ್ವಜನಿಕರಲ್ಲಿ ಅಸಮಾಧಾನವನ್ನು ಹುಟ್ಟುಹಾಕಿ ಆಂತರಿಕವಾದ ಆರ್ಥಿಕ ಗೊಂದಲಗಳನ್ನು ಸೃಷ್ಟಿಸಿ ಚುನಾಯಿತ ಸರ್ಕಾರವನ್ನು ಅಸ್ಥಿರಗೊಳಿಸುವುದು ಇದರ ಮುಖ್ಯ ಉದ್ದೇಶ. ಇದೇ ವರದಿಯನ್ನು ಆಧಾರವಾಗಿಟ್ಟುಕೊಂಡು ರಾಹುಲ್ ಗಾಂಧಿ ಸರ್ಕಾರವನ್ನು ಟಾರ್ಗೆಟ್ ಮಾಡುತ್ತಿದ್ದರು. ಜುಲೈ 18, 2021 ರಂದು OCCRP ಯ ಪೆಗಾಸಸ್ ವರದಿಯ ನಂತರ, ಅವರು ಜುಲೈ 19 ರಂದು ಪತ್ರಿಕಾಗೋಷ್ಠಿಯನ್ನು ನಡೆಸಿ, ಸಂಸತ್ತಿನ ಕಲಾಪಕ್ಕೆ ಅಡ್ಡಿಪಡಿಸಿದ್ದನ್ನು ಇಲ್ಲಿ ಉಲ್ಲೇಖಿಸಬಹುದು.

- ಸುಮಾರು 5000 ಕೋಟಿ ರೂಪಾಯಿಗಳ ಅವ್ಯವಹಾರ ನಡೆದಿರುವ ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಇ.ಡಿ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿಯನ್ನು ಪ್ರಶ್ನಿಸಿದಾಗ, OCCRPಯು ಈ ಕ್ರಮ ರಾಜಕೀಯ ಪ್ರೇರಿತ ಎಂದು ಆರೋಪಿಸಿ ಲೇಖನವನ್ನು ಪ್ರಕಟಿಸಿತು. ಅಮೇರಿಕಾ ಮೂಲದ OCCRPಯು ಗಾಂಧಿ ಪರಿವಾರವನ್ನು ಈ ಪ್ರಕರಣದಲ್ಲಿ ದೋಷಮುಕ್ತಗೊಳಿಸಿತು.
- OCCRPಗೆ ಸಮಸ್ಯೆಯಾದಾಗ ರಾಹುಲ್ ಗಾಂಧಿ ಅದರ ಸಹಾಯಕ್ಕೆ ಧಾವಿಸುತ್ತಾರೆ. ರಾಹುಲ್ ಗಾಂಧಿಗೆ ಸಮಸ್ಯೆಗಳಾದಾಗ OCCRPಯು ಅವರ ಬೆನ್ನಿಗೆ ನಿಲ್ಲುತ್ತದೆ.
- ಜಾರ್ಜ್ ಸೋರಸ್ ಮತ್ತು ರಾಹುಲ್ ಗಾಂಧಿ ಸೈದ್ಧಾಂತಿಕವಾಗಿ ಒಂದು ನಾಣ್ಯದ ಎರಡು ಮುಖ, ಎರಡು ದೇಹ ಮತ್ತು ಒಂದು ಆತ್ಮ ಹಾಗೂ ಇವರ ಕಾರ್ಯ ಯೋಜನೆಯೂ ಒಂದೇ ಆಗಿದೆ.
- ತಮ್ಮ ಅಮೇರಿಕಾ ಭೇಟಿಯ ಸಮಯದಲ್ಲಿ, ಭಾರತದ ಪರಮ ವಿರೋಧಿಯಾಗಿದ್ದ, ಭಾರತದ ಬಗ್ಗೆ ಅಪಪ್ರಚಾರದಲ್ಲಿ ತೊಡಗಿರುವ, OCCRP ಕೃಪಾಪೋಷಿತ ಬಾಂಗ್ಲಾದೇಶದ ಪತ್ರಕರ್ತ ಮುಶ್‌ಫಿಕುಲ್ ಫಜಲ್ ಅನ್ಸಾರೆ ಅವರನ್ನು ರಾಹುಲ್ ಗಾಂಧಿ ರವರು ಭೇಟಿಯಾದರು. ಭಾರತಕ್ಕೆ ಹಾನಿಯಾಗುವ ಪರಿಸ್ಥಿತಿ ಇರುತ್ತದೆಯೋ ಅಲ್ಲಿ ರಾಹುಲ್ ಗಾಂಧಿ ಇರುತ್ತಾರೆ.
- 2020ರ ದೆಹಲಿ ಗಲಭೆಯ ಸಮಯದಲ್ಲಿ, OCCRPಯ ಪತ್ರಕರ್ತ ಮತ್ತು ರಾಹುಲ್ ಗಾಂಧಿಯವರ ನಿಕಟವರ್ತಿ ಆನಂದ್ ಮಗನಾಲೆ ಅವರು ಚೀನಾದಿಂದ ಹಣವನ್ನು ತಂದು ಗಲಭೆಯ ಪ್ರಮುಖ ವ್ಯಕ್ತಿಯಾದ ಶಾರ್ಜೀಲ್ ಇಮಾಮ್‌ಗೆ ಹಸ್ತಾಂತರಿಸಿದ ಆರೋಪವಿದೆ.

# ಮಾಸದ ಮಾಧುರ್ಯ 93ನೇ ಕಾರ್ಯಕ್ರಮದಲ್ಲಿ Sakhi ಗೀತ



'**ಸ**ಖಿಗೀತ' ಎಂಬ ಶಿರೋನಾಮೆಯಡಿಯಲ್ಲಿ ದಿ. 05-01-2025ರ ಭಾನುವಾರ ಸಂಜೆ 05.30 ರಿಂದ 07.15 ಗಂಟೆಯ ವರೆಗೆ ಶ್ರೀಮತಿ ಭವಾನಿ ಹೆಗಡೆಯವರು ಹಾಗೂ ಅವರ ಸಹ ಗಾಯಿಕಿಯರೊಂದಿಗೆ ನೆಡೆಸಿಕೊಟ್ಟ ಸುಗಮ ಸಂಗೀತ ಕಾರ್ಯಕ್ರಮವು ಆಗಮಿಸಿದ್ದ ಕಲಾಸಕ್ತರನ್ನು ಕಾರ್ಯಕ್ರಮದ ಕೊನೆಯವರೆಗೂ ಮನರಂಜಿಸುವಲ್ಲಿ ಯಶಸ್ವಿಯಾಗಿದ್ದು ಪ್ರತ್ಯಕ್ಷ ನಿದರ್ಶನವಾಯಿತು.

ದಾಸರ ಪದ, ಬಸವಣ್ಣ ರವರ ವಚನ, ಭಾವಗೀತೆ, ದೇಶಭಕ್ತಿ ಗೀತೆ, ಸಖಿಗೀತೆ ಹಾಗೂ ಕನ್ನಡದ ಪ್ರಸಿದ್ಧ ಹಾಡುಗಳನ್ನು ಸಂಸ್ಕೃತದಲ್ಲಿ ಇಂಪಾಗಿ ಹಾಡಿದ್ದು ಬಹಳ ವಿಭಿನ್ನ ಹಾಗೂ ಪ್ರಶಂಸನೀಯವಾಗಿತ್ತು ಎಂಬುದು ಬಂದಂತಹ ಶ್ರೋತ್ರಗಳ ಅಭಿಪ್ರಾಯವಾಗಿತ್ತು.

'ಮಿಶ್ರ ಮಾಧುರ್ಯ' ಎಂಬ ಸಂಸ್ಥೆಯನ್ನು ಹುಟ್ಟು ಹಾಕಿ, ಹಲವಾರು ಉತ್ತಮ ಸಮಾಜಮುಖಿ ಮತ್ತು ಸಂಸ್ಕೃತದ ಮಹತ್ವವನ್ನು ಎಲ್ಲರಿಗೂ ತಿಳಿಯುವಂತೆ, ಪ್ರೀತಿಸುವಂತೆ ಮಾಡುತ್ತಿರುವುದು ಒಂದು ಸಾಧನೆಯ ಹಾದಿಯಲ್ಲಿ ಹೆಜ್ಜೆ ಹಾಕುವಿಕೆಯನ್ನು ಸ್ವಾಗತಿಸಲು ಸಂತೋಷವೆನಿಸುತ್ತದೆ.ಶ್ರೀಮತಿ ಭವಾನಿ ಹೆಗಡೆಯವರು ಹಾಗೂ ಅವರ ಪತಿ ಶ್ರೀ ಗಣಪತಿ ಹೆಗಡೆಯವರು ಮಿಶ್ರ ಮಾಧುರ್ಯ ಸಂಸ್ಥೆಯ ಆಧಾರ ಸ್ತಂಭವಾಗಿದ್ದಾರೆ. ಶ್ರೀಮತಿ ಭವಾನಿ ಹೆಗಡೆಯವರ ಜೊತೆಗೆ ಸಹ ಗಾಯಕಿಯರಾಗಿ ಶ್ರೀಮತಿ ಸುಷ್ಮಾನಾತು ಮತ್ತು ಶ್ರೀಮತಿ ಧನ್ಯಶ್ರೀ ಭಟ್ ಅವರು ಉತ್ತಮವಾಗಿ ಹಾಡನ್ನು ಪ್ರಸ್ತುತಪಡಿಸಿದರು. ಹಿಮ್ಮೇಳದಲ್ಲಿ ಕೀಬೋರ್ಡ್‌ನಲ್ಲಿ ಶ್ರೀ ಶ್ರೀನಿವಾಸ್, ತಬಲಾ ಶ್ರೀ ಲೋಕೇಶ್, ರಿದಂಪ್ಯಾಡ್ ಶ್ರೀ ವೇಣು ರವರು ಉತ್ತಮವಾಗಿ ಸಾಥ್ ನೀಡಿದರು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ವಿಧಾನಪರಿಷತ್ ಸದಸ್ಯರಾದ ಶ್ರೀ ಪ್ರದೀಪ್ ಶೆಟ್ಟರ್ ಅವರು ಅನಿವಾರ್ಯ ಕಾರಣದಿಂದ ಕಾರ್ಯಕ್ರಮಕ್ಕೆ ಬರದಿದ್ದರೂ ತಮ್ಮ ಸಹಕಾರ ಇದ್ದೇ ಇದೆ, ಕಾರ್ಯಕ್ರಮ ಯಶಸ್ವಿಯಾಗಲಿ ಎಂದು ಶುಭ ಹಾರೈಸಿದ್ದರು. ಕಾರ್ಯಕ್ರಮದ ಕೊನೆಯಲ್ಲಿ ಎಲ್ಲ ಕಲಾಭಿಮಾನಿಗಳಿಗೂ ರಾಜ್ಯ ಕಾರ್ಯಾಲಯದ ಲೆಕ್ಕಪತ್ರ ವಿಭಾಗದ ಮುಖ್ಯಸ್ಥರಾದ ಶ್ರೀ ವಿ. ಮೂಡಲಗಿರಿ ರವರು ಹಾಗೂ ಮಾಸದ ಮಾಧುರ್ಯ ಕಾರ್ಯಕ್ರಮದ ನಿರ್ದೇಶಕರಾದ ಶ್ರೀ ದತ್ತಗುರು ಹೆಗಡೆಯವರು ಅಭಿನಂದನಾ ಪತ್ರವನ್ನು ನೀಡಿ ಸನ್ಮಾನಿಸಿದರು.



# ಕಾಟಾಚಾರಕ್ಕೆ ಅಧಿವೇಶನ ಮುಗಿಸಿದ ಕಾಂಗ್ರೆಸ್ ಸರ್ಕಾರ!!!!

**ಉತ್ತರ ಕರ್ನಾಟಕದ ಸಮಸ್ಯೆಗೆ ಉತ್ತರವಾಗದೆ, ಪ್ರತಿಪಕ್ಷಗಳ ಧ್ವನಿ ಹತ್ತಿಕ್ಕಿದ್ದೇ ಬೆಳಗಾವಿ ಅಧಿವೇಶನದ ಸಾಧನೆ**

**ಮಹೇಶ್ ಹೆಗಡೆ**
ಬಿಜೆಪಿ ಕಾರ್ಯಕರ್ತರು

**ಕಾಂ**ಗ್ರೆಸ್ ಸರಕಾರ ರಾಜ್ಯದಲ್ಲಿ ಆಡಳಿತಕ್ಕೆ ಬಂದಾಗಿನಿಂದ ಜನ ಹಿತವನ್ನು ಗಾಳಿಗೆ ತೂರಿ ಬಿಡಲಾಗಿದೆ. ಅಭಿವೃದ್ಧಿ ಕಾರ್ಯಕ್ಕೆ ಎಳ್ಳು ನೀರು ಬಿಟ್ಟಾಗಿದೆ. ಕಾನೂನು ಸುವ್ಯವಸ್ಥೆ ಹಳಿ ತಪ್ಪಿದೆ, ಭ್ರಷ್ಟಾಚಾರ ತಾಂಡವವಾಡುತ್ತಿದೆ. ಹುಟ್ಟಿದ ಕಂದನಿಂದ, ಬಾಣಂತಿಯವರೆಗೆ, ಅಧಿಕಾರಿಯಿಂದ, ರೈತನವರೆಗೆ ಯಾರ ಜೀವಕ್ಕೂ ಗ್ಯಾರಂಟಿ ಇಲ್ಲವಾಗಿದೆ. ಅಧಿವೇಶನದಲ್ಲಿಯೂ ಜನರ ಸಮಸ್ಯೆಗಳಿಗೆ ಉತ್ತರ ಸಿಗಲಿಲ್ಲ, ಉತ್ತರ ಕರ್ನಾಟಕದ ಸಮಸ್ಯೆಗೆ ಉತ್ತರ ಕಂಡು ಹಿಡಿಯಲು ಬೆಳಗಾವಿಯ ಸುವರ್ಣಸೌಧದಲ್ಲಿ ನಡೆದ ಚಳಿಗಾಲದ ಅಧಿವೇಶನವನ್ನು ಕಾಂಗ್ರೆಸ್ ಸರ್ಕಾರ ಕಾಟಾಚಾರದ ಕ್ರಮಕ್ಕೆ ಸಾಕ್ಷಿಯಂತಿತ್ತು.

**ಸದನ ಅಂಶಗಳು :** ವಿಧಾನಮಂಡಲ ಚಳಿಗಾಲದ ಅಧಿವೇಶನದಲ್ಲಿ ಸಮಗ್ರ ಕರ್ನಾಟಕದ ಅಭಿವೃದ್ಧಿ ಕುರಿತಾಗಿ ಚರ್ಚಿಸುವುದರ ಜೊತೆಗೆ, ಉತ್ತರ ಕರ್ನಾಟಕದ ಚರ್ಚೆಗೆ ಹೆಚ್ಚು ಆದ್ಯತೆ ನೀಡಲಾಗುವುದು ಎಂದು ಅಧಿವೇಶನಕ್ಕೂ ಮೊದಲು ವಿಧಾನಸಭೆ ಅಧ್ಯಕ್ಷರಾದ ಶ್ರೀ ಯು.ಟಿ.ಖಾದರ್ ಹೇಳಿದ್ದರು. ಆದರೆ ಕಾರ್ಯರೂಪಕ್ಕೆ ತರುವುದರ ವಿಚಾರವಾಗಿ ಸರ್ಕಾರಕ್ಕೂ ಆಸಕ್ತಿ ಇರಲಿಲ್ಲ, ವಿಧಾನಸಭೆ ಅಧ್ಯಕ್ಷರಿಗೆ ಸಮಯ ಇಲ್ಲದಿರುವುದು ವಿಷಾಧನೀಯ. ವಿಧಾನಸಭೆ ಕಲಾಪದಲ್ಲಿ 3,004 ಕ್ಕೂ ಹೆಚ್ಚು ಪ್ರಶ್ನೆ, 205 ಕ್ಕೂ ಗಮನ ಸೆಳೆಯುವ ಸೂಚನೆ ಸ್ವೀಕರಿಸಲಾಗಿತ್ತು. ನಿಯಮ 96 ರ ಅಡಿ 351 ಸೂಚನೆಗಳು ಮತ್ತು 3 ಖಾಸಗಿ ವಿಧೇಯಕ ಸ್ವೀಕರಿಸಲಾಗಿತ್ತು.

ರಾಜ್ಯದಲ್ಲಿ ಹವಾಮಾನ ಬದಲಾವಣೆಗೆ ಸಂಬಂಧಿಸಿದ ಖಾಸಗಿ ವಿಧೇಯಕವನ್ನು ಶಾಸಕ ದರ್ಶನ್ ಪುಟ್ಟಣ್ಣಯ್ಯ, ಗಾಣಗಾಪುರ ದತ್ತಾತ್ರೇಯ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಎಂ.ವೈ.ಪಾಟೀಲ್ ಹಾಗೂ ಬೇಲೂರು- ಹಳೆಬೀಡು ವಿಶ್ವಪರಂಪರೆ ಪ್ರದೇಶ ನಿರ್ವಹಣೆ ಪ್ರಾಧಿಕಾರದ ವಿಧೇಯಕವನ್ನು ಎಚ್.ಕೆ. ಸುರೇಶ್ ಮಂಡಿಸಲು ತಯಾರಿ ನಡೆಸಿದ್ದರಾದರೂ, ಸಮಯದ ಅಭಾವದಿಂದ ಮಂಡಿಸಲಾಗಲಿಲ್ಲ.



**ಅನಾವರಣ :** 45 ಲಕ್ಷ ರೂ. ವ್ಯಯಿಸಿ ಬೆಂಗಳೂರಿನ ವಿಧಾನಸೌಧದ ಮಾದರಿಯಲ್ಲೇ, ಬೆಳಗಾವಿಯ ಸುವರ್ಣಸೌಧದಲ್ಲಿ ಸಭಾಧ್ಯಕ್ಷರ ಪೀಠ ಸಿದ್ಧಪಡಿಸಲಾಗಿದೆ. ಸುವರ್ಣ ಸೌಧದಲ್ಲಿ ಅನುಭವ ಮಂಟಪದ ಬೃಹತ್ ತೈಲವರ್ಣ ಚಿತ್ರ ನಿರ್ಮಿಸಿ, ಅನಾವರಣಗೊಳಿಸಲಾಯಿತು. ಕ್ಯಾನ್ವಾಸ್ ಮೇಲೆ ತೈಲ ಮಾಧ್ಯಮದ ಮೂಲಕ ರಚಿಸಲ್ಪಟ್ಟ 20 ಅಡಿ ಉದ್ದ ಮತ್ತು 10 ಅಡಿ ಅಗಲದ ಈ ವಿಶೇಷ ಚಿತ್ರ ಇದಾಗಿದೆ. ಶ್ರೀ ಬಿ.ಎಲ್. ಶಂಕರ್ ನೇತೃತ್ವದಲ್ಲಿ ಪ್ರಖ್ಯಾತ ಕಲಾವಿದರಾದ ಬೆಂಗಳೂರು ಚಿತ್ರಕಲಾ ಪರಿಷತ್‌ನ ಶ್ರೀ ಸತೀಶ್‌ರಾವ್, ಶಿವಮೊಗ್ಗದ, ಶ್ರೀ ಶ್ರೀಕಾಂತ ಹೆಗಡೆ ಸಿದ್ದಾಪುರ, ಶೇಷಾದ್ರಿಪುರಂ ಕೆನ್ ಸ್ಕೂಲ್ ಕಲಾ ಶಾಲೆಯ ಶ್ರೀ ಅಶೋಕ ಯು.,ಜಗಳೂರು ರಾಜಾ ರವಿವರ್ಮ ಕಲಾ ಶಾಲೆಯ ಶ್ರೀಮತಿ ರೂಪಾ ಎಂ.ಆರ್., ಬೈಲಹೊಂಗಲದ ಶ್ರೀ ಈರಣ್ಣ ಮಡಿವಾಳಪ್ಪ ಬಲ್ಲಿ, ಶ್ರೀ ಮಹೇಶ ನಿಂಗಪ್ಪ, ಶ್ರೀ ದಫಲಾಪುರ ಶ್ರಮಿಸಿದ್ದಾರೆ. ಈ ಕಾರ್ಯಕ್ಕೆ ಪಕ್ಷಭೇದ ಮರೆತು ಶಾಸಕರುಗಳು ಮೆಚ್ಚುಗೆ ವ್ಯಕ್ತಪಡಿಸಿದರು.

**ವಕ್ಫ್ ಗದ್ದಲ :** ವಕ್ಫ್ ಮಂಡಳಿಯ ಭೂ ಕಬಳಿಕೆ ನೀತಿಯ ವಿರುದ್ದ ಬಿಜೆಪಿ ಹೋರಾಟಗಳನ್ನು ರೂಪಿಸುತ್ತಿದ್ದು, ಸದನದಲ್ಲೂ ಸಹ ಮೊದಲನೇ ದಿನದಿಂದಲೆ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿತು. ಆದರೆ ಸರ್ಕಾರ ಮಾತ್ರ ಪ್ರತಿಪಕ್ಷಗಳ ಧ್ವನಿಯನ್ನು ಹತ್ತಿಕ್ಕುವ ಪ್ರಯತ್ನದಲ್ಲೇ ಕಾಲ ಕಳೆಯಿತೇ ಹೊರತು, ವಕ್ಫ್ ಭೂ ಕಬಳಿಕೆ ನೀತಿಯ ಬಗ್ಗೆ ಸರಿಯಾದ ಮತ್ತು ಸಮರ್ಪಕ ಉತ್ತರ ಕೊಡಲಿಲ್ಲ, ಅದಕ್ಕೆ ಪಟ್ಟು ಬಿಡದ ಪ್ರತಿಪಕ್ಷಗಳ ಹೋರಾಟಕ್ಕೆ ಸರ್ಕಾರ ಮಣಿದು, ದೇವಸ್ಥಾನ ಮತ್ತು ರೈತರ ತಂಟೆಗೆ ವಕ್ಫ್ ಮಂಡಳಿ ಹೋಗುವುದಿಲ್ಲ ಎಂದು ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಹೇಳಿದರಾದರೂ, ಮುಸ್ಲಿಂ ಓಲೈಕೆ ರಾಜಕಾರಣದಲ್ಲಿ ತೊಡಗಿರುವ ಕಾಂಗ್ರೆಸ್‌ನಿಂದ ಈ ಮಾತು ಕಾರ್ಯರೂಪಕ್ಕೆ ಬರುವುದೇ ಎಂದು ಕಾದು ನೋಡಬೇಕಿದೆ.

**ಬಾಣಂತಿಯರ, ಹಸುಗೂಸುಗಳ ಸರಣಿ ಸಾವು :** ಬೆಳಗಾವಿ ಸೇರಿದಂತೆ ರಾಜ್ಯಾದ್ಯಂತ ಬಾಣಂತಿಯರ ಸರಣಿ ಸಾವು ಮತ್ತು ಹಸುಗೂಸುಗಳ ಸಾವಿನ ಬಗ್ಗೆ ಪ್ರತಿಪಕ್ಷ ಬಿಜೆಪಿ ಸದನದಲ್ಲಿ ಸರ್ಕಾರವನ್ನು ಪ್ರಶ್ನೆ ಮಾಡಿದರೆ, ಸರಿಯಾಗಿ ಉತ್ತರ ನೀಡದೆ, ನುಣುಚಿಕೊಳ್ಳುವ ಕಾರ್ಯವನ್ನು ಮಾಡಿತು. ನ್ಯಾಯಾಂಗ ತನಿಖೆಗೆ ಬಿಜೆಪಿ ಪಟ್ಟು ಹಿಡಿದ ಪರಿಣಾಮ, ಸದನದ ನಂತರ ಸರ್ಕಾರ ನ್ಯಾಯಾಂಗ ತನಿಖೆಗೆ ಸದರಿ ಪ್ರಕರಣವನ್ನು ವಹಿಸಿದ್ದು, ಬಿಜೆಪಿಯ ಹೋರಾಟದ ಯಶಸ್ಸಾಗಿದ್ದು, ನಿಷ್ಪಕ್ಷಪಾತ ತನಿಖೆ ನಡೆದು ನ್ಯಾಯ ದೊರಕಲಿ.

**ಉತ್ತರ ಸಿಗದ ಉತ್ತರಕರ್ನಾಟಕದ ಸಮಸ್ಯೆ:** ಉತ್ತರ ಕರ್ನಾಟಕದ ಸಮಸ್ಯೆ ಬಗ್ಗೆ ಚರ್ಚಿಸಲೆಂದೆ ಚಳಿಗಾಲದ ಅಧಿವೇಶನ ಬೆಳಗಾವಿಯಲ್ಲಿ ನಡೆಯುವುದು ರೂಢಿ. ಅದರಂತೆ ಈ ಸಲವೂ ಬೆಳಗಾವಿಯಲ್ಲಿ ಜನರ ತೆರಿಗೆಯ ಕೋಟಿ ಕೋಟಿ ಹಣವನ್ನು ಖರ್ಚು ಮಾಡಿ, ಅಧಿವೇಶನ ನಡೆದರೂ ಸರ್ಕಾರ ಮಾತ್ರ ಉತ್ತರ ಕರ್ನಾಟಕದ ಸಮಸ್ಯೆಗಳಿಗೆ ಉತ್ತರ ಕಂಡುಕೊಳ್ಳುವುದಿರಲಿ, ಚರ್ಚೆಯಲ್ಲಿ ಭಾಗಿಯಾಗಲು ಆಸಕ್ತಿ ತೋರದೆ ಇರುವುದು ಉದ್ದಟತನದ ಪರಮಾವಧಿಯಾಗಿದೆ. ಕೊನೆಯ ಮೂರು ದಿನ ಉತ್ತರ ಕರ್ನಾಟಕದ ಸಮಸ್ಯೆಗಳನ್ನು ಚರ್ಚಿಸಲು ಮೀಸಲಿಡಲಾಗಿತ್ತು. ಅದರಂತೆ ಉತ್ತರಕರ್ನಾಟಕದ ಭಾಗದ ಶಾಸಕರು, ಮತ್ತು ಪ್ರತಿಪಕ್ಷ ಬಿಜೆಪಿ ಚರ್ಚೆಯಲ್ಲಿ ನಿರತರಾದರೆ, ಅದನ್ನ ಕೇಳಿಸಿಕೊಂಡು ಅದಕ್ಕೆ ಉತ್ತರ

ಮತ್ತು ಪರಿಹಾರ ನೀಡಬೇಕಾಗಿದ್ದ ಆಡಳಿತ ಪಕ್ಷದ ಕಾಂಗ್ರೆಸ್ ಸಚಿವರು ಬಾರದೆ ಖುರ್ಚಿಗಳು ಖಾಲಿ ಹೊಡೆಯುತ್ತಿದ್ದುದು ಕಂಡು ಬಂದಿತು.

**ರಾಜ್ಯಪಾಲರ ಪವರ್‌ಕಟ್‌ಗೆ ವಿಧೇಯಕ ಮಂಡನೆ :** ರಾಜ್ಯಪಾಲರಿಗೆ ಅವರದ್ದೆ ಆದ ಒಂದಿಷ್ಟು ಅಧಿಕಾರಗಳಿರುತ್ತದೆ. ಆದರೆ ರಾಜ್ಯ ಸರ್ಕಾರ ಅದನ್ನು ಮೊಟಕು ಗೊಳಿಸಲು ಮುಂದಾಗಿದೆ. ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಸರ್ಕಾರ ವಿಧಾನಸಭೆಯಲ್ಲಿ ಮಂಡಿಸಿದೆ. ಇನ್ಮುಂದೆ ರಾಜ್ಯಪಾಲರ ಬದಲು ಮುಖ್ಯಮಂತ್ರಿ ಕುಲಾಧಿಪತಿಗಳಾಗಲಿದ್ದಾರೆ ಎಂಬುದು ವಿಧೇಯಕದ ಪ್ರಮುಖ ಅಂಶ. ಘಟಿಕೋತ್ಸವದ ಅಧ್ಯಕ್ಷತೆ, ಕುಲಪತಿ ನೇಮಕ ಅಧಿಕಾರವೂ ರಾಜ್ಯ ಸರ್ಕಾರದ ಸುಪರ್ದಿಗೆ ಬರಲಿದೆ. ಚಾಣಕ್ಯ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ ಮಂಡನೆಯಾಗಿದ್ದು ಖಾಸಗಿ ವಿಶ್ವದ್ಯಾಲಯ ಅಧಿನಿಯಮ 2021ರ ಪ್ರಕಾರ ರಾಜ್ಯ ಸರ್ಕಾರದ ಮೂಲಕ ಸಂಬಂಧಪಟ್ಟ ಕ್ಷೇತ್ರದಿಂದ ಒಬ್ಬ ವಿಶೇಷ ತಜ್ಞರನ್ನು ಆಡಳಿತ ಮಂಡಳಿಗೆ ನಾಮನಿರ್ದೇಶನ ಮಾಡುವುದಕ್ಕೆ ಅವಕಾಶ ಮಾಡಿಕೊಡಲಾಗಿದೆ. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ತಿದ್ದುಪಡಿ ವಿಧೇಯಕ ಮಂಡಿಸಿದ್ದು, ಈ ವಿಧೇಯಕದ ಪ್ರಕಾರ ಇನ್ನು ಮುಂದೆ ರಾಯಚೂರು ಹೆಸರನ್ನು ಆದಿ ಕವಿ ಮಹರ್ಷಿ ವಾಲ್ಮೀಕಿ ಎಂದು ಬದಲಾಯಿಸಲಾಗುತ್ತದೆ.

ಮಂಡನೆಯಾದ ಇತರ ಬಿಲ್‌ಗಳೆಂದರೆ, ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ, ಬಸವನಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ (ತಿದ್ದುಪಡಿ) ವಿಧೇಯಕ, ಕರ್ನಾಟಕ ಪ್ರವಾಸೋದ್ಯಮ ರೋಪ್‌ವೇಗಳ ವಿಧೇಯಕ, ಕರ್ನಾಟಕ ಅಂತರ್ಜಲ, (ಅಭಿವೃದ್ಧಿ ಮತ್ತು ನಿರ್ವಹಣೆ ನಿಯಮ ಹಾಗೂ ನಿಯಂತ್ರಣ) ವಿಧೇಯಕವಾಗಿದೆ. ಒಟ್ಟಾರೆ ಕಾಂಗ್ರೆಸ್ ಸರ್ಕಾರ ಅಧಿವೇಶನ ನಡೆಸಿದ ರೀತಿ ಒಂದು ತರ ಪಿಕ್‌ನಿಕ್‌ನಂತಿದ್ದು ಜನಸಾಮಾನ್ಯರ ಸಮಸ್ಯೆಗಳಿಗೆ ಯಾವುದೆ ಪರಿಹಾರ ಕಂಡುಕೊಳ್ಳುವ ಇಚ್ಛಾಶಕ್ತಿ ಸರ್ಕಾರಕ್ಕಿಲ್ಲದ್ದು ಕಂಡುಬಂದಿತು. ಅಷ್ಟೆ ಅಲ್ಲದೆ ಮಿತ್ರ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ಜನರ ಧ್ವನಿಯಾಗಿ ಕೇಳಿದ ಪ್ರಶ್ನೆಗಳಿಗೆ ಸರಿಯಾಗಿ ಮಾಹಿತಿಯಾಗಲಿ, ಭರವಸೆಯಾಗಲಿ ನೀಡದೆ ಕಾಟಾಚಾರದ ಅಧಿವೇಶನ ಮುಗಿಸಿ ಬೆಂಗಳೂರಿಗೆ ವಾಪಸ್ ಆಗಿದೆ.

## ಬಂಧನ ಮತ್ತು ಲಾಠಿ ಚಾರ್ಜ್





ಸುವರ್ಣ ಸೌಧದಲ್ಲಿ ಅದಿವೇಶನ ನಡೆಯುತ್ತಿದ್ದರೆ, ಹೊರಗಡೆ ಹಲವಾರು ಸಂಘಟನೆಗಳು ತಮ್ಮ ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಪ್ರತಿಭಟಿಸುತ್ತಿದ್ದ ದೃಶ್ಯ ಎಲ್ಲಾ ದಿನವು ಕಂಡುಬಂದಿತ್ತು. ಆದರೆ ಸರ್ಕಾರ ಮಾತ್ರ ಯಾರ ಸಮಸ್ಯೆಯನ್ನು ಆಲಿಸುವ ಗೋಜಿಗೆ ಹೊಗದೆ ಅಧಿಕಾರದ ದುರಹಂಕಾರ ಮೆರೆದಿದೆ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಪ್ರತಿಭಟಿಸುವ, ತಮ್ಮ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಡುವ ಹಕ್ಕು ಪ್ರತಿಯೊಬ್ಬರಿಗೂ ಇದೆ. ಅದರಂತೆ ತಮಗೆ ಮೀಸಲಾತಿ ನೀಡಬೇಕೆಂದು ಸರ್ಕಾರದ ಮುಂದೆ ಪ್ರತಿಭಟಿಸುತ್ತಿದ್ದ ಪಂಚಮಸಾಲಿ ಸಮುದಾಯದ ಮೇಲೆ ಸರ್ಕಾರ ಲಾಠಿ ಚಾರ್ಜ್ ಮಾಡಿಸಿ ಅವರ ಪ್ರತಿಭಟಿಸುವ ಹಕ್ಕನ್ನು ಕಿತ್ತುಕೊಂಡಿದೆ. ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದ ಪ್ರತಿಭಟನಾಕಾರರ ಮೇಲೆ ತನ್ನ ಅಧಿಕಾರದ ಅಮಲಿನಲ್ಲಿ ಲಾಠಿ ಜಾರ್ಜ್‌ಮಾಡಿಸಿ ಬೆದರಿಸುವ ತಂತ್ರವನ್ನು ಮಾಡಿರುವುದು ಸರ್ಕಾರದ ದುಷ್ಟತನವೆ ಸರಿ.

ಇನ್ನೊಂದೆಡೆ ಪ್ರತಿಪಕ್ಷ ಬಿಜೆಪಿಯ ಮೇಲ್ಮನೆ ಸದಸ್ಯರಾದ ಡಾ. ಸಿ.ಟಿ. ರವಿರವರನ್ನು ಕಾನೂನುಗಳನ್ನು ಗಾಳಿಗೆ ತೂರಿ, ಅಧಿಕಾರದ ಪ್ರಭಾವ ಬಳಸಿ, ಸುವರ್ಣಸೌಧದಿಂದಲೆ ಬಂಧನ ಮಾಡಿದ್ದಲ್ಲದೆ, ಬಂಧನದ ನಂತರ ಸಹ ಮೃಗೀಯ ರೀತಿಯಲ್ಲಿ ನಡೆಸಿಕೊಂಡಿದೆ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ. ಅಂದರೆ ಒಂದು ಜನಪ್ರತಿನಿಧಿಗೆ ಕಾನೂನು ರಿತ್ಯಾ ವ್ಯವಸ್ಥೆ ನೀಡದೆ ಅಮಾನವೀಯವಾಗಿ ನಡೆಸಿಕೊಂಡಿದ್ದು, ಜನಸಾಮಾನ್ಯರನ್ನು ಯಾವ ರೀತಿ ನಡೆಸಿಕೊಳ್ಳಬಹುದು ಎಂದು ಜನರು ಆತಂಕದಲ್ಲಿದ್ದಾರೆ.




# ಬಿಜೆಪಿಯಿಂದ 'ಭೀಮ ಸಂಗಮ' ಅಭಿಯಾನ

**ಡಾ.** ಅಂಬೇಡ್ಕರ್ ಮತ್ತು ದಲಿತರ ವಿಚಾರವಾಗಿ ಪ್ರತಿಪಕ್ಷ ಬಿಜೆಪಿ ವಿರುದ್ಧ ರಾಜ್ಯದಲ್ಲಿ ಆಡಳಿತಾರೂಢ ಕಾಂಗ್ರೆಸ್ ನಿರಂತರವಾಗಿ ಸುಳ್ಳು ಆರೋಪಗಳನ್ನು ಮಾಡುತ್ತಿದೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ರವರು ಬದುಕಿದ್ದಾಗ ಅವರ ರಾಜಕೀಯ ಬೆಳವಣಿಗೆಯನ್ನು ಸಹಿಸದೆ ಸಾಕಷ್ಟು ತೊಂದರೆಗಳನ್ನು ಕೊಟ್ಟ ಕಾಂಗ್ರೆಸ್ ಅವರ ನಿಧನದ ಸಂದರ್ಭದಲ್ಲಿಯೂ ಅವರ ವಿರುದ್ಧ ದ್ವೇಷದ ನಡೆಯನ್ನು ಪ್ರದರ್ಶಿಸಿದ್ದು ಇತಿಹಾಸವಾದರೂ ಎಂದೂ ಮರೆಯಲು ಸಾಧ್ಯವಿಲ್ಲ.

ಆದರೆ ಕಾಂಗ್ರೆಸ್ ತಾನು ಮಾಡಿದ ಡಾ. ಅಂಬೇಡ್ಕರ್ ವಿರೋಧಿ ನಡೆಯನ್ನೂ ಮರೆಮಾಚಿ ಬಿಜೆಪಿಯ ವಿರುದ್ಧ ಆರೋಪಗಳನ್ನು ಮಾಡುವ ಕಾರ್ಯವನ್ನು ಮಾಡುತ್ತಿದೆ. ಅದೇ ರೀತಿ ದಲಿತ ಜನಾಂಗವನ್ನು ವೋಟ್ ಬ್ಯಾಂಕ್ ಆಗಿ ಮಾತ್ರ ಬಳಸಿಕೊಳ್ಳುತ್ತಿರುವ ಕಾಂಗ್ರೆಸ್ ಬಿಜೆಪಿಯನ್ನು ದಲಿತ ವಿರೋಧಿ ಎಂದು ಬಿಂಬಿಸುವ ಹುನ್ನಾರವನ್ನೂ ಮಾಡುತ್ತಿದೆ.

ಅಂಬೇಡ್ಕರ್ ಬಗ್ಗೆ ಹೊಂದಿದ್ದ ಗೌರವಾತ್ಮಕ ನಿಲುವುಗಳು, ಕಾಂಗ್ರೆಸ್ ಮಾಡುತ್ತಿರುವ ಹುರುಳಿಲ್ಲದ ಆರೋಪಗಳು, ಅಂಬೇಡ್ಕರ್ ಸ್ಮರಣಾರ್ಥ ಬಿಜೆಪಿ ಸರ್ಕಾರಗಳು ಕೈಗೊಂಡಿರುವ ಯೋಜನೆಗಳು, ಪರಿಶಿಷ್ಟ ಜಾತಿ ಮತ್ತು ಪಂಗಡ ಹಾಗೂ ಹಿಂದುಳಿದ ವರ್ಗಗಳ ಏಳಿಗೆಗಾಗಿ ಬಿಜೆಪಿಯ ಬದ್ಧತೆ ಹಾಗೂ ಕೈಗೊಂಡ ಯೋಜನೆಗಳನ್ನು ತಿಳಿಸಿ, ಜನತೆಯಲ್ಲಿ ಸಂವಿಧಾನ ಜಾಗೃತಿ ಮೂಡಿಸುವುದಕ್ಕಾಗಿ ಬಿಜೆಪಿಯಿಂದ ಜನವರಿ 25 ರ ವರೆಗೆ 'ಭೀಮ ಸಂಗಮ' ಅಭಿಯಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.




ಇದರ ಅಂಗವಾಗಿ ಪಕ್ಷದ ಸಂಸದರು ಹಾಗೂ ಶಾಸಕರು ದಲಿತರನ್ನು ತಮ್ಮ ಮನೆಗಳಿಗೆ ಕರೆದು ಊಟೋಪಚಾರದ ಜೊತೆಗೆ ಸನ್ಮಾನ ಮಾಡಲಿದ್ದಾರೆ. ಸಂವಿಧಾನಕ್ಕೆ ಯಾರು ಅನ್ಯಾಯ ಹಾಗೂ ಅಪಮಾನ ಮಾಡಿದರು, ಯಾರ ಅವಧಿಯಲ್ಲಿ ಹೆಚ್ಚು ತಿದ್ದುಪಡಿಯಾಯಿತು ಎಂಬ ಬಗ್ಗೆ ಈ ವೇಳೆ ಮಾಹಿತಿ ನೀಡಲಿದ್ದಾರೆ.

ಈ ಬಗ್ಗೆ ಪಕ್ಷದ ಕಚೇರಿ ಜಗನ್ನಾಥ ಭವನದಲ್ಲಿ ಪಕ್ಷದ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಶ್ರೀ ಬಿ.ಎಲ್. ಸಂತೋಷ, ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ, ಮಾಜಿ ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿ, ರೇಲ್ವೆ ಖಾತೆ ರಾಜ್ಯ ಸಚಿವರಾದ ಶ್ರೀ ವಿ. ಸೋಮಣ್ಣ, ವಿಧಾನಸಭೆಯ ಪ್ರತಿಪಕ್ಷದ ನಾಯಕ ಶ್ರೀ ಆ.ರ್. ಅಶೋಕ ಹಾಗೂ ಪ್ರಮುಖರು ಉಪಸ್ಥಿತರಿದ್ದ **'ನಮ್ಮ ಸಂವಿಧಾನ-ನಮ್ಮ ಹೆಮ್ಮೆ'** ಅಭಿಯಾನ ಕುರಿತ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ.

ಶಾಸಕರು, ಸಂಸದರು ತಮ್ಮ ಮನೆಗಳಲ್ಲಿ ಈ ಕಾರ್ಯಕ್ರಮ ನಡೆಸಲಿದ್ದಾರೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ವರ್ಗದವರನ್ನು ತಮ್ಮ ಮನೆಗೆ ಕರೆದು ಸನ್ಮಾನ ಮಾಡಲಿದ್ದಾರೆ. ದಲಿತ ಸಮುದಾಯದ ಕುಟುಂಬದವರನ್ನು ಮನೆಗೆ ಕರೆಸಿ ಸಂವಿಧಾನ ಬಗ್ಗೆ ಅರಿವು ಮೂಡಿಸಲಾಗುತ್ತದೆ. ಅಲ್ಲದೇ, ಇದೇ 25ರಂದು ಪ್ರತಿ ಬೂತ್‌ನಲ್ಲಿ ಸಂವಿಧಾನ ಪೀಠಿಕೆ ಓದಲಾಗುತ್ತದೆ. ಅಲ್ಲದೇ, ಪ್ರತಿ ವಿಧಾನಸಭಾ ಕ್ಷೇತ್ರ, ಮಂಡಲ ವ್ಯಾಪ್ತಿಯಲ್ಲಿ ಶಾಸಕರಿಂದ ಬಹಿರಂಗ ಸಮ್ಮೇಳನವನ್ನು ಸಹ ಆಯೋಜಿಸಲಾಗುತ್ತದೆ.

ಸಂವಿಧಾನ ಮಂಡನೆಯ ದಿನವಾದ ನವೆಂಬರ್ 26ರಿಂದ ಸಂವಿಧಾನ ಜಾರಿಯಾದ ಜನವರಿ 26ರ ವರೆಗೆ ಜಾಗೃತಿ ಮೂಡಿಸಲಾಗುತ್ತಿದೆ. ನಮ್ಮ ಸಂವಿಧಾನ ನಮ್ಮ ಹೆಮ್ಮೆ ಅಭಿಯಾನದಡಿ ಇದನ್ನು ಮಾಡಲಾಗುತ್ತಿದ್ದು, ಈಗಾಗಲೇ ಈ ಅಭಿಯಾನ ಆರಂಭವಾಗಿದ್ದು, ಜನವರಿ 26 ರವರೆಗೆ ಮುಂದುವರೆಸಲಾಗಿದೆ.

ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರಿಗೆ ಕಾಂಗ್ರೆಸಿಗರು 1920ರಿಂದ ಆರಂಭಿಸಿ ಪರಿನಿರ್ವಾಣ ಆಗುವವರೆಗೆ ಹೆಜ್ಜೆಹೆಜ್ಜೆಗೂ ಡಾ. ಅಂಬೇಡ್ಕರ್‌ರವರನ್ನು ಅತ್ಯಂತ ಹೀನಾಯವಾಗಿ ನಡೆಸಿಕೊಂಡರು. ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕ 2015ರಿಂದ ಸಂವಿಧಾನ ದಿನ ಆಚರಣೆ ನಡೆದಿದೆ. ಸಂವಿಧಾನಕ್ಕೆ ಗೌರವ ತರುವ ಹಾಗೂ ಜಾಗೃತಿ ಮೂಡಿಸುವ ಕಾರ್ಯವನ್ನು ಪ್ರಧಾನಿ ಶ್ರೀ ನರೇಂದ್ರ ಮೋದಿ ಮಾಡಿದ್ದಾರೆ.

ಸಂವಿಧಾನಕ್ಕೆ ಕಾಂಗ್ರೆಸ್‌ನಿಂದ ಈವರೆಗೆ 106 ತಿದ್ದುಪಡಿಗಳನ್ನು ಮಾಡಲಾಗಿದೆ. ಬಿಜೆಪಿ 22 ತಿದ್ದುಪಡಿ ಮಾಡಿದ್ದು, ಮಾಜಿ ಪ್ರಧಾನಿ ದಿ. ಅಟಲ್ ಬಿಹಾರಿ ವಾಜಪೇಯಿ ರವರ ಕಾಲದಲ್ಲಿ 14, ಪ್ರಧಾನಿ ಶ್ರೀ ನರೇಂದ್ರ ಮೋದಿ ಆಡಳಿತಾವಧಿಯಲ್ಲಿ 8 ತಿದ್ದುಪಡಿಗಳನ್ನು ಮಾಡಲಾಗಿದೆ. ಇವೆಲ್ಲವೂ ಸಂವಿಧಾನದ ಪರ, ಮೀಸಲಾತಿಯ ಪರ ಇದ್ದು, ಎಸ್‌ಸಿ, ಎಸ್‌ಟಿ ಮತ್ತು ಇತರೆ ವರ್ಗಗಳಿಗೆ ಶಕ್ತಿ ತುಂಬುವ ತಿದ್ದುಪಡಿಗಳಾಗಿವೆ. ಕಾಂಗ್ರೆಸ್ ಪಕ್ಷವು ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಮಾಡಿದ ತಿದ್ದುಪಡಿಗಳು ಕರಾಳ ತಿದ್ದುಪಡಿಗಳಾಗಿವೆ.

ವ್ಯಕ್ತಿಯ ಸ್ವಾತಂತ್ರ್ಯ ಹರಣ, ಜೀವಿಸುವ ಸ್ವಾತಂತ್ರ್ಯ ಹರಣ, ಅಭಿವ್ಯಕ್ತಿ ಸ್ವಾತಂತ್ರ್ಯ ಹರಣ, ನ್ಯಾಯಾಲಯ ನಿಯಂತ್ರಣ ಮಾಡುವ ತಿದ್ದುಪಡಿಗಳನ್ನು ಕಾಂಗ್ರೆಸ್ಸಿಗರು ಮಾಡಿದ್ದರು ಈ ಎಲ್ಲಾ ಸಂಗತಿಗಳ ಬಗ್ಗೆ ಜನತೆಯಲ್ಲಿ ಜಾಗೃತಿ ಮೂಡಿಸುವ ಕಾರ್ಯವನ್ನು ಈ ಅಭಿಯಾನ ಸಂದರ್ಭದಲ್ಲಿ ಮಾಡಲಾಗುತ್ತಿದೆ. ಎಂದು ತಿಳಿಸಿದರು.

# ಕಾಂಗ್ರೆಸ್ಸಿಗರಿಗೆ ಡಾ. ಅಂಬೇಡ್ಕರ್ ರವರ ಬಗ್ಗೆ ಮಾತನಾಡಲು ಇರುವ ಯೋಗ್ಯತೆಯಾದರೂ ಏನು?



ಬಾಬಾ ಸಾಹೇಬ ಅಂಬೇಡ್ಕರರಿಗೆ 1920ರಿಂದ ಆರಂಭಿಸಿ ಅವರು ಪರಿನಿರ್ವಾಣ ಆಗುವವರೆಗೆ ಹೆಜ್ಜೆ ಹೆಜ್ಜೆಗೆ ಹಿಂದಕ್ಕೆ ತಳ್ಳಿದವರು, ಅವರನ್ನು ಅವಮಾನಿಸಿದವರು, ಅವರನ್ನು ಸೋಲಿಸಿದವರಿಗೆ ಇವತ್ತು ಡಾ. ಅಂಬೇಡ್ಕರರ ಬಗ್ಗೆ ಮಾತನಾಡಲು ಏನು ಯೋಗ್ಯತೆ ಇದೆ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷರಾದ ಶ್ರೀ ಎನ್. ಮಹೇಶ್ ಅವರು ಪ್ರಶ್ನಿಸಿದರು.

ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಇಂದು ಬಿಜೆಪಿ ರಾಜ್ಯಾಧ್ಯಕ್ಷರು ಮತ್ತು ಶಾಸಕರಾದ ಶ್ರೀ ಬಿ.ವೈ. ವಿಜಯೇಂದ್ರ ಅವರ ಅಧ್ಯಕ್ಷತೆಯಲ್ಲಿ ಸಂವಿಧಾನ ಸನ್ಮಾನ ದಿನ, ನಮ್ಮ ಸಂವಿಧಾನ-ನಮ್ಮ ಹೆಮ್ಮೆ ಅಭಿಯಾನದ ಅಂಗವಾಗಿ ನಡೆದ ಸಂದರ್ಭದಲ್ಲಿ ಅವರು, ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕ 2015ರಿಂದ ಸಂವಿಧಾನ ದಿನ ಆಚರಣೆ ನಡೆದಿದೆ. ಸಂವಿಧಾನಕ್ಕೆ ಗೌರವ ತರುವ ಹಾಗೂ ಜಾಗೃತಿ ಮೂಡಿಸುವ ಕಾರ್ಯವನ್ನು ಪ್ರಧಾನಿ ಶ್ರೀ ನರೇಂದ್ರ ಮೋದಿ ರವರು ಮಾಡಿದ್ದಾರೆ ಎಂದು ವಿವರಿಸಿದರು.

ಅಂಬೇಡ್ಕರರಿಗೆ ಅವಮಾನ ಆದಲ್ಲೆಲ್ಲ ಅದನ್ನು ಅಳಿಸಿ ಅವರಿಗೆ ಗೌರವ ತರುವ ಕೆಲಸವನ್ನು ಬಿಜೆಪಿ- ಮೋದಿಜೀ ಅವರು ಮಾಡಿದ್ದಾರೆ ಎಂದರು. ಸಂವಿಧಾನ ಬದಲಿಸಿದ್ದು ಯಾರು? ಸಂವಿಧಾನಕ್ಕೆ ಶಕ್ತಿ ತುಂಬಿದ್ದು ಯಾರೆಂಬ ವಿಷಯವನ್ನು ನಾವು ಈ ಅಭಿಯಾನದಲ್ಲಿ ಹೇಳುತ್ತಿದ್ದೇವೆ ಎಂದು ಅವರು ತಿಳಿಸಿದರು.

ಸಂವಿಧಾನ ಮಂಡನೆಯಾದ ದಿನವಾದ ನವೆಂಬರ್ 26ರಿಂದ ಸಂವಿಧಾನ ಜಾರಿಯಾದ ಜನವರಿ 26ರ ವರೆಗೆ 2 ತಿಂಗಳ ಕಾಲ ಜಾಗೃತಿ ಮೂಡಿಸಲಾಗುತ್ತಿದೆ. ಜಿಲ್ಲಾ ಮಟ್ಟದಲ್ಲಿ ಜಾಗೃತಿ ಕಾರ್ಯ ಮುಗಿದಿದ್ದು ಇದೀಗ ಮಂಡಲ ಮಟ್ಟದಲ್ಲಿ ಮಾಹಿತಿ ನೀಡಲಾಗುತ್ತಿದೆ ಎಂದು ಹೇಳಿದರು.

### ಸಂವಿಧಾನಕ್ಕೆ ಕಾಂಗ್ರೆಸ್ನಿಂದ ಗರಿಷ್ಠ ತಿದ್ದುಪಡಿ

ಕಾಂಗ್ರೆಸ್ ಒಟ್ಟು 106 ತಿದ್ದುಪಡಿ ಮಾಡಿದೆ. 1951ರಲ್ಲಿ ಅಧಿಕೃತ ಸರ್ಕಾರ ಇರಲಿಲ್ಲ; ಬ್ರಿಟಿಷರು ನೇಮಿಸಿದ ಸರ್ಕಾರ ಅಧಿಕಾರದಲ್ಲಿತ್ತು. ಇಂಥ ಸಂದರ್ಭದಲ್ಲಿ ಸಂವಿಧಾನಕ್ಕೆ ಮೊದಲನೇ ತಿದ್ದುಪಡಿ ಮಾಡಿದವರು ಜವಾಹರಲಾಲ್ ನೆಹರೂ ಎಂದು ಟೀಕಿಸಿದರು. ಮಾಧ್ಯಮಗಳನ್ನು ನಿಯಂತ್ರಣ ಮಾಡಲು ಅಭಿವ್ಯಕ್ತಿ ಸ್ವಾತಂತ್ರ್ಯ ನಿಯಂತ್ರಿಸುವ ತಿದ್ದುಪಡಿ ಇದಾಗಿತ್ತು ಎಂದರು.

ಸುಳ್ಳು ಊರೆಲ್ಲ ಸುತ್ತಿ ಬರುವ ಹೊತ್ತಿಗೆ ಸತ್ಯ ಹೊಸಲು ದಾಟಿರಲಿಲ್ಲ ಎಂಬ ಗಾದೆ ಮಾತನ್ನು ಉಲ್ಲೇಖಿಸಿದ ಅವರು, ಕಾಂಗ್ರೆಸ್ ಪಕ್ಷವು ನಮ್ಮ ವಿರುದ್ಧ ಬಿಜೆಪಿ ಅಧಿಕಾರಕ್ಕೆ ಬಂದರೆ ಸಂವಿಧಾನ ಬದಲಿಸುತ್ತಾರೆ; ಬಿಜೆಪಿಯವರು ಡಾ. ಅಂಬೇಡ್ಕರರ ವಿರೋಧಿ; ಬಿಜೆಪಿ ದಲಿತ ವಿರೋಧಿ ಎಂಬ ಕಪೋಲ ಕಲ್ಪಿತ ಕತೆಯನ್ನು ಕಟ್ಟಿ ಜನತೆಯನ್ನು ದಿಕ್ಕು ತಪ್ಪಿಸುವ ಪ್ರಯತ್ನವನ್ನು ಕಾಂಗ್ರೆಸ್‌ನವರು ಮಾಡುತ್ತಿದ್ದಾರೆ, ಅದರ ಬದಲು ಸತ್ಯವನ್ನು ತಿಳಿಸುವ ಅಭಿಯಾನ ಇದಾಗಿದೆ ಎಂದು ವಿವರಿಸಿದರು.

### ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಕರಾಳ ತಿದ್ದುಪಡಿಗಳು

ಕಾಂಗ್ರೆಸ್ ಪಕ್ಷವು ತುರ್ತು ಪರಿಸ್ಥಿತಿ ಸಂದರ್ಭದಲ್ಲಿ 38, 39, 40, 41, 42 ತಿದ್ದುಪಡಿ ಮಾಡಿದ್ದು, ಅವೆಲ್ಲವೂ ಕರಾಳ ತಿದ್ದುಪಡಿಗಳು. ವ್ಯಕ್ತಿ ಸ್ವಾತಂತ್ರ್ಯ ಹರಣ, ಜೀವಿಸುವ ಸ್ವಾತಂತ್ರ್ಯ ಹರಣ, ಅಭಿವ್ಯಕ್ತಿ ಸ್ವಾತಂತ್ರ್ಯ ಹರಣ, ನ್ಯಾಯಾಲಯ ನಿಯಂತ್ರಣ ಮಾಡುವ ತಿದ್ದುಪಡಿ ಮಾಡಿದ್ದರು ಎಂದು ಶ್ರೀ ಮಹೇಶ್ ಅವರು ಆಕ್ಷೇಪಿಸಿದರು.

ಪ್ರಧಾನಮಂತ್ರಿಗಳನ್ನು ನ್ಯಾಯಾಲಯ ಪ್ರಶ್ನಿಸುವಂತಿಲ್ಲ ಎಂಬ ತಿದ್ದುಪಡಿ ಮಾಡಿ ಪ್ರಜಾಪ್ರಭುತ್ವಕ್ಕೆ ಅವಮಾನ ಮಾಡಿದ್ದಾರೆ. 21 ತಿಂಗಳ ಕಾಲ ಸಂವಿಧಾನವನ್ನು ಅಮಾನತಿನಲ್ಲಿಟ್ಟು ಅವಮಾನಿಸಿದ್ದಾರೆ. ಇವತ್ತು ಕಾಂಗ್ರೆಸ್ಸಿಗರು ಸಂವಿಧಾನದ ಕುರಿತು ಮಾತನಾಡುತ್ತಿದ್ದಾರೆ ಎಂದು ಟೀಕಿಸಿದರು.

## ಚರ್ಚೆಗೊಂದು ಸಾಲು...

**ಕಾಂಗ್ರೆಸ್ ಸರ್ಕಾರದ ಕರಾಳ ಕೃತ್ಯಗಳು ಅದರ ಹತಾಶೆಯ ನಡೆಯೋ ಅಥವಾ ನಮ್ಮ ಆತ್ಮಸ್ಥೈರ್ಯ ಕುಗ್ಗಿಸುವ ಕ್ರಿಯೆಯೋ?**




# ಖರ್ಗೆ ಕ್ಷೇತ್ರದಲ್ಲಿ ಕೇಸರಿ ಪಡೆ ಘರ್ಜನೆ

**ಕಾಂ**ಗ್ರೆಸ್ ಸರ್ಕಾರ ಬಂದಾಗಿನಿಂದ ಯಾರ ಜೀವಕ್ಕೂ ಗ್ಯಾರಂಟಿ ಇಲ್ಲದಂತಾಗಿದೆ. ಸಾಮಾನ್ಯ ಜನರಿಂದ ಸರ್ಕಾರಿ ಅಧಿಕಾರಿಗಳವರೆಗೂ ಜೀವವನ್ನು ಭಯದ ಕೈಗೆ ಕೊಟ್ಟು ಬದುಕುವಂತಹ ಪರಿಸ್ಥಿತಿ ಎದುರಾಗಿದೆ. ದಿನ ಒಂದಿಲ್ಲೊಂದು ಒತ್ತಡ, ಕಿರುಕುಳದಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಅಧಿಕಾರಿಗಳು ಮತ್ತು ಗುತ್ತಿಗೆದಾರರ ಸಂಖ್ಯೆ ಹೆಚ್ಚುತ್ತಲೆ ಇದೆ. ಕಾಂಗ್ರೆಸ್ ಸರ್ಕಾರದ ಸಚಿವರ ಭ್ರಷ್ಟಾಚಾರದ ಹಪಾಹಪಿತನ, ಅಧಿಕಾರದ ದುರಹಂಕಾರಕ್ಕೆ ಅನೇಕರು ಬಲಿಯಾಗುತ್ತಿದ್ದಾರೆ.

ಈ ಮರಣ ಮೃದಂಗ ಹಾಗೆ ಮುಂದುವರೆಯುತ್ತಿದ್ದು, ಆ ಸಾಲಿಗೆ ಗುತ್ತಿಗೆದಾರ ಸಚಿನ್ ಪಾಂಚಾಳ ಆತ್ಮಹತ್ಯೆ ಪ್ರಕರಣವೂ ಸೇರಿದೆ. ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರ ಸುಪುತ್ರ, ರಾಜ್ಯ ಕಾಂಗ್ರೆಸ್ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಪ್ರಿಯಾಂಕ ಖರ್ಗೆ ಅವರ ಕಿರುಕುಳಕ್ಕೆ ಗುತ್ತಿಗೆದಾರ ಸಚಿನ್ ಪಾಂಚಾಳ ಆತ್ಮಹತ್ಯೆಗೆ ಕಾರಣ ಎಂಬುದು ತಿಳಿದು ಬಂದಿದೆ. ಸಚಿನ್ ಅವರು ಡೆತ್ ನೋಟ್‌ನಲ್ಲಿಯೂ ಸಹ ಸಚಿವ ಪ್ರಿಯಾಂಕ ಖರ್ಗೆ ಅವರ ಹೆಸರನ್ನು ಬರೆದಿಟ್ಟರಿವುದು ತಿಳಿದುಬಂದಿದೆ. ಆದರೆ ಪ್ರಿಯಾಂಕ ಖರ್ಗೆ ಮಾತ್ರ ಅಧಿಕಾರದ ಅಮಲಿನಲ್ಲಿ ಇದಕ್ಕೂ ನನಗೂ ಸಂಬಂಧವಿಲ್ಲ ಎಂದು ಉದ್ದಟತನದ ಮಾತನಾಡುತ್ತಿದ್ದಾರೆ.

ಪ್ರಿಯಾಂಕ ಖರ್ಗೆ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು, ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಿಬೇಕೆಂದು ಆಗ್ರಹಿಸಿ ರಾಜ್ಯ ಬಿಜೆಪಿ ರಾಜ್ಯಾದ್ಯಂತ ಹೋರಾಟ ಮಾಡುತ್ತಿದೆ. ಹೋರಾಟವನ್ನು ಮುಂದುವರೆಸಿರುವ ಬಿಜೆಪಿ ಪ್ರಿಯಾಂಕ ಖರ್ಗೆ ಅವರ ಸ್ವಕ್ಷೇತ್ರವಾದ ಕಲ್ಬುರ್ಗಿಯಲ್ಲಿ ಉಗ್ರಹೋರಾಟವನ್ನು ಮಾಡಿದೆ. ನಾಯಕರ ನೇತೃತ್ವದಲ್ಲಿ ಸಾವಿರಾರು ಕಾರ್ಯಕರ್ತರ ಸಮ್ಮುಖದಲ್ಲಿ ಪ್ರಿಯಾಂಕ ಖರ್ಗೆ ಅವರ ಮನೆಗೂ ಮುತ್ತಿಗೆ ಹಾಕಲಾಯಿತು.

**ಖರ್ಗೆ ಕ್ಷೇತ್ರದಲ್ಲಿ ಬಿಜೆಪಿ ಘರ್ಜನೆ :** ಆತ್ಮಹತ್ಯೆ ಮಾಡಿಕೊಂಡ ಗುತ್ತಿಗೆದಾರ ಸಚಿನ್ ಪಾಂಚಾಳ ಪ್ರಕರಣವನ್ನು ಸಿಬಿಐಗೆ ವಹಿಸುವುದರ ಜತೆಗೆ ಜಿಲ್ಲೆಯ ನಾಲ್ವರು ಪ್ರತಿಷ್ಠಿತರ ಕೊಲೆಗೆ ಸುಪಾರಿ ಬಗ್ಗೆಯೂ ನಿಷ್ಪಕ್ಷಪಾತ ತನಿಖೆಗೆ ಒತ್ತಾಯಿಸಿ ಸಚಿವ ಪ್ರಿಯಾಂಕ್ ಖರ್ಗೆ ಮನೆಗೆ ಮುತ್ತಿಗೆ ಹಾಕಲಾಯಿತು. ಇದಕ್ಕೂ ಮುನ್ನ ಜಗತ್ ವೃತ್ತದಲ್ಲಿ ಬೃಹತ್ ಪ್ರತಿಭಟನಾ ಸಭೆ ನಡೆಸಿದ ನಾಯಕರು, ನೈತಿಕ ಹೊಣೆ ಹೊತ್ತು ಸಚಿವ ಪ್ರಿಯಾಂಕ್ ಖರ್ಗೆ ರಾಜೀನಾಮೆ ನೀಡಬೇಕು. ನೊಂದ ಸಚಿನ್ ಕುಟುಂಬಕ್ಕೆ ಒಂದು ಕೋಟಿ ರೂ. ಪರಿಹಾರ ಮತ್ತು ಪರಿವಾರದ ಒಬ್ಬರಿಗೆ ಸರ್ಕಾರಿ ನೌಕರಿ ನೀಡಬೇಕು ಎಂದು ಒತ್ತಾಯಿಸಿದರು.

ಬಳಿಕ ಪಾದಯಾತ್ರೆ ಮೂಲಕ ಸಚಿವರ ಮನೆಗೆ ಮುತ್ತಿಗೆ ಹಾಕಲು ಬರುತ್ತಿರುವಾಗ ಮಿನಿ ವಿಧಾನಸೌಧದ ಹತ್ತಿರ ಸಮಾಜ ಕಲ್ಯಾಣ ಇಲಾಖೆ ಕಚೇರಿ ಎದುರು ಪೊಲೀಸರು ಬ್ಯಾರಿಕೇಡ್ ಹಾಕಿ ತಡೆಯೊಡ್ಡಲು ಮುಂಚಿತವೇ ಪ್ಲಾನ್ ಮಾಡಿದ್ದರು. ಮೆರವಣಿಗೆ ಮೂಲಕ ಮುಖಂಡರು ಆಗಮಿಸುತ್ತಿದ್ದಂತೆ ಪೊಲೀಸರು ವಶಕ್ಕೆ ಪಡೆದು ಬಸ್‌ನಲ್ಲಿ ಪೊಲೀಸ್ ಮೈದಾನಕ್ಕೆ ಕರೆದೊಯ್ದರು. ಈ ವೇಳೆ ಪೊಲೀಸರು ಮತ್ತು ಪ್ರತಿಭಟನಾಕಾರರ ಮಧ್ಯೆ ನೂಕಾಟ, ತಳ್ಳಾಟ ನಡೆಯಿತು. ಪೊಲೀಸರು ಮುಖಂಡರನ್ನು ವಶಕ್ಕೆ ಪಡೆದ ನಂತರವೂ ನೆರೆದಿದ್ದ ಸಾವಿರಾರು ಕಾರ್ಯಕರ್ತರು, ಪ್ರಮುಖರು ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧವಲ್ಲದೆ ಭಾರತ ಮಾತಾಕೀ ಜೈ, ಬಿಜೆಪಿ ಜಿಂದಾಬಾದ್' ಘೋಷಣೆಗಳನ್ನು ಮೊಳಗಿಸಿದರು. ಈ ಸಮಯದಲ್ಲಿ ಬಿಜೆಪಿಯ ಎಲ್ಲಾ ನಾಯಕರನ್ನು ಮತ್ತು ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದು ತದ ನಂತರ ಬಿಡುಗಡೆಗೊಳಿಸಿದರು.

**ಔಟ್ ಗೋಯಿಂಗ್ ಸಿಎಂ :** ಕಲಬುರಗಿ ಜಗತ್ ವೃತ್ತದಲ್ಲಿ ನಡೆದ ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ಪ್ರತಿಪಕ್ಷದ ನಾಯಕರಾದ ಶ್ರೀ ಆರ್. ಅಶೋಕ್, ಸಚಿವ ಪ್ರಿಯಾಂಕ್ ಖರ್ಗೆ ಉಸ್ತುವಾರಿಯ ಕಲಬುರಗಿ ಜಿಲ್ಲೆಯಲ್ಲಿ ಅರಾಜಕತೆ ಸೃಷ್ಟಿಯಾಗಿದೆ. ಪ್ರಿಯಾಂಕ್ ಕಂಡರೆ ಪೊಲೀಸರು ನಡುಗುತ್ತಾರೆ. ಸಿಎಂ ಸಿದ್ದ ರಾಮಯ್ಯ ಅವರು ಔಟ್ ಗೋಯಿಂಗ್ ಸಿಎಂ ಎಂದರು. ಸಿದ್ದರಾಮಯ್ಯ ಔಟ್ ಗೋಯಿಂಗ್ ಮುಖ್ಯಮಂತ್ರಿ ಎನ್ನುವ ಧಾಟಿಯಲ್ಲೇ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಹ ಹೇಳಿದ್ದಾರೆ. ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣಕ್ಕೆ ಸಂಬಂಧಿಸಿದಂತೆ ಈಗಾಗಲೇ



# ಸಚಿನ್ ಪಾಂಚಾಳ ಸಾವಿಗೆ ನ್ಯಾಯ ಸಿಗುವವರೆಗೂ ಬಿಜೆಪಿ ಹೋರಾಟ!!!

ನಾಗೇಂದ್ರ ರಾಜೀನಾಮೆ ನೀಡಿದ್ದು, ಮುಖ್ಯಮಂತ್ರಿಗಳಿಗೆ ನೋಟಿಸ್ ಬರಲಿದೆ. ಒಟ್ಟಾರೆ ಸಾಸಿವೆ ಕಾಳು ಕದ್ದರೂ ಬಿಜೆಪಿ ಬಿಡೋದಿಲ್ಲ ಎಂದು ಗುಡುಗಿದರು. ಹಾಲು, ಪೆಟ್ರೋಲ್, ಆಲ್ಕೋಹಾಲ್, ಕರೆಂಟ್, ಬಸ್ ಚಾರ್ಜ್- ಸೇರಿ ಎಲ್ಲ ದರಗಳನ್ನು ಹೆಚ್ಚಿಸಿದ್ದಾರೆ ಎಂದು ಆಕ್ಷೇಪಿಸಿದರು. ಸಚಿನ್ ಆತ್ಮಹತ್ಯೆಗೆ ಕಾರಣನಾದ ರಾಜು ಕಪನೂರ್ ಒಬ್ಬ ಗೂಂಡಾ. ಅವನನ್ನು ಕಾಂಗ್ರೆಸ್ಸಿಗರು ಗೂಂಡಾ ಕಾಯಿದೆಯಿಂದ ತೆಗೆಸಿದ್ದಾರೆ. ಈಗ ನಮ್ಮವನಲ್ಲ; ನಮ್ಮವನಲ್ಲ ಎನ್ನುತ್ತಿದ್ದಾರೆ ಎಂದು ಟೀಕಿಸಿದರು. ಆರೋಪಿಗಳಲ್ಲಿ ಮೊದಲ 3 ಜನ ಕಾಂಗ್ರೆಸ್ಸಿಗರು ಎಂದು ಗಮನ ಸೆಳೆದರು. ಈ ಭ್ರಷ್ಟ, ಆತ್ಮಹತ್ಯೆಗಳಿಗೆ ಕಾರಣವಾಗುವ ಸರಕಾರಕ್ಕೆ ತಕ್ಕ ಪಾಠ ಕಲಿಸಬೇಕಿದೆ ಎಂದು ಹೇಳಿದರು. ಸಚಿನ್ ಆತ್ಮಹತ್ಯೆ ಪ್ರಕರಣಕ್ಕೆ ನ್ಯಾಯ ಕೊಡಿಸುವವರೆಗೆ ಬಿಜೆಪಿ ವಿರಮಿಸುವುದಿಲ್ಲ ಎಂದು ತಿಳಿಸಿದರು.

ಬಿಜೆಪಿ, ಮುಂದಿನ ಹಂತದಲ್ಲಿ ಮುಖ್ಯಮಂತ್ರಿಗೆ ಪತ್ರ ಬರೆಯುವ ಚಳುವಳಿ ಹಮ್ಮಿಕೊಂಡಿದೆ. ಸಚಿನ್ ಡೆತ್‌ನೋಟ್‌ನಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಮತ್ತು ಅವರ ಆಪ್ತರ ಹೆಸರಿವೆ. ಸುಪಾರಿ ಕೊಲೆ ಸಂಚು, ಹನಿಟ್ರ್ಯಾಪ್ ಅಂಶಗಳು ಪ್ರಸ್ತಾಪವಾಗಿವೆ. ನೀತಿ ಪಾಠ ಹೇಳುವ ಪ್ರಿಯಾಂಕ್ ರಾಜೀನಾಮೆ ನೀಡಬೇಕು ಇಲ್ಲವೇ, ಅವರಿಂದ ಮುಖ್ಯಮಂತ್ರಿ ರಾಜೀನಾಮೆ ಪಡೆಯಬೇಕು ಎಂದು ವಿಪಕ್ಷ ನಾಯಕರಾದ ಶ್ರೀ ಆರ್. ಅಶೋಕ್ ಹೇಳಿದರು.

**ಪ್ರಾಣ ಕಳೆದುಕೊಂಡವರ ಪರ ಇದ್ದೇವೆ :** ವಿಧಾನಪರಿಷತ್ ವಿಪಕ್ಷ ನಾಯಕ ಶ್ರೀ ಛಲವಾದಿ ನಾರಾಯಣಸ್ವಾಮಿ ಅವರು ಮಾತನಾಡಿ, ಪ್ರಿಯಾಂಕ್ ಖರ್ಗೆಯವರು ಸಚಿವರಾಗಲು ಮೆರಿಟ್ ಕೋಟಾ / ಪೇಮೆಂಟ್ ಕೋಟಾವಿತ್ತೇ ಎಂದು ಪ್ರಶ್ನಿಸಿ ಇದು ಡಾ. ಅಂಬೇಡ್ಕರರು ನಮಗೆ ಕೊಟ್ಟ ಸಾಂವಿಧಾನಿಕ ಹಕ್ಕಿನ ದುರುಪಯೋಗ ಎಂದು ಆಕ್ಷೇಪಿಸಿ ದಲಿತರನ್ನು ತುಳಿದು ಸಮಾಧಿ ಮಾಡಿದ್ದಾರೆ ಎಂದು ಟೀಕಿಸಿದರು. ನಿಮ್ಮ ಆಸ್ತಿ ತೆಗೆದುಕೊಂಡು ಹೋಗಲು ನಾವು ಬಂದಿಲ್ಲ; ನಿಮ್ಮ ಬಗ್ಗೆ ಜನರು ತೀರ್ಮಾನಿಸುತ್ತಾರೆ, ಕಲ್ಯಾಣ ಕರ್ನಾಟಕದಲ್ಲಿ ಪರಿಶಿಷ್ಟ ಜಾತಿಯವರು ಯಾಕೆ ಮೇಲಕ್ಕೆ ಬಂದಿಲ್ಲ ಎಂಬುದಕ್ಕೆ ಪ್ರಿಯಾಂಕ್ ಅವರು ಉತ್ತರಿಸಬೇಕು ಎಂದು ಸವಾಲು ಹಾಕಿದರು.

ರಾಜ್ಯದ ಕಾಂಗ್ರೆಸ್ ಸರಕಾರದ ಬಳಿ ಸಚಿನ್ ಆತ್ಮಹತ್ಯೆಗೆ ಸಂಬಂಧಿಸಿ ನ್ಯಾಯ ಕೇಳಿದರೆ, ಕಾಫಿ, ಟೀ, ಮಜ್ಜಿಗೆ ಕೊಡುವುದಾಗಿ ಪ್ರಿಯಾಂಕ ಖರ್ಗೆಯವರು ಹೇಳುತ್ತಾರೆ. ಪ್ರಿಯಾಂಕ, ನಿನ್ನಂಥವರನ್ನು ಬಹಳ ಜನರನ್ನು ಈ ದೇಶ ನೋಡಿದೆ ಎಂದು ತಿಳಿಸಿದರು. ನಿಮ್ಮ ಮನೆಗೆ ಸಂಬಂಧ ಮಾಡಲು ನಾವು ಬರುತ್ತಿಲ್ಲ; ನಾವು ಪ್ರಾಣ ಕಳಕೊಂಡವರ ಕಡೆ ಇದ್ದೇವೆ. ನೀವು ಪ್ರಾಣ ಕಳೆದವರ ಕಡೆ ಇದ್ದೀರಿ ಎಂದು ಆಕ್ಷೇಪಿಸಿದರು..

**ರಾಜ್ಯದಲ್ಲಿ ಸುಪಾರಿ ರಾಜಕಾರಣ ನಡೆಯಲು ಸಾಧ್ಯವಿಲ್ಲ :** ವಿಧಾನಪರಿಷತ್ ಸದಸ್ಯ ಶ್ರೀ ಸಿ.ಟಿ. ರವಿ ಅವರು ಮಾತನಾಡಿ, ರಾಜ್ಯದಲ್ಲಿ ಸುಪಾರಿ ರಾಜಕಾರಣ ನಡೆಯಲು ಸಾಧ್ಯವಿಲ್ಲ; ಇಲ್ಲಿ ಸಂವಿಧಾನಬದ್ಧ ರಾಜಕಾರಣ ಮಾತ್ರ ನಡೆಯಬೇಕು ಎಂದು ಆಗ್ರಹಿಸಿದರು. ಸುಪಾರಿ ರಾಜಕಾರಣ ಮಾಡುವವರಿಗೆ ಕಲಬುರ್ಗಿಯ ಜನತೆ ಅವಕಾಶ ಕೊಡುವುದಿಲ್ಲ ಎಂದು ಎಚ್ಚರಿಸಿದರು.

ರಾಜ್ಯ ಉಪಾಧ್ಯಕ್ಷರಾದ ಶ್ರೀ ಎನ್. ಮಹೇಶ್, ವಿಧಾನಪರಿಷತ್ ಸದಸ್ಯರಾದ ಶ್ರೀ ಎನ್. ರವಿಕುಮಾರ್, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಪಿ. ರಾಜೀವ್, ಮಾಜಿ ಸಂಸದರಾದ ಡಾ. ಉಮೇಶ್ ಜಾಧವ್, ಶಾಸಕರಾದ ಶ್ರೀ ಬಸವರಾಜ್ ಮತ್ತಿಮೂಡ್, ಶ್ರೀ ಡಾ. ಶೈಲೇಂದ್ರ ಬೆಲ್ದಾಳೆ, ಶ್ರೀ ಶರಣು ಸಲಗಾರ, ಮಾಜಿ ಶಾಸಕರಾದ ಶ್ರೀ ರಾಜಕುಮಾರ್ ಪಾಟೀಲ್ ತೆಲ್ಕೂರ್, ವಿಧಾನಪರಿಷತ್ ಸದಸ್ಯರಾದ ಶ್ರೀ ಬಿ.ಜಿ. ಪಾಟೀಲ್, ವಿಧಾನಪರಿಷತ್ ಮಾಜಿ ಸದಸ್ಯರಾದ ಶ್ರೀ ಅಮರನಾಥ್ ಪಾಟೀಲ್, ಮಾಜಿ ಶಾಸಕರಾದ ಶ್ರೀ ದತ್ತಾತ್ರೇಯ ಪಾಟೀಲ್ ರೇವೂರ, ನಿಕಟಪೂರ್ವ ರಾಜ್ಯ ಕಾರ್ಯದರ್ಶಿಗಳಾದ ಶ್ರೀ ಜಗದೀಶ್ ಹಿರೇಮನಿ, ಕಲಬುರ್ಗಿ ನಗರ ಜಿಲ್ಲಾಧ್ಯಕ್ಷರಾದ ಶ್ರೀ ಚಂದ್ರಕಾಂತ ಪಾಟೀಲ್, ಕಲಬುರ್ಗಿ ಗ್ರಾಮಾಂತರ ಜಿಲ್ಲಾಧ್ಯಕ್ಷರಾದ ಶ್ರೀ ಶಿವರಾಜ ಪಾಟೀಲ್ ರದ್ದೇವಾಡಿ ಮತ್ತು ಪಕ್ಷದ ಮುಖಂಡರು, ಜಿಲ್ಲೆಯ, ರಾಜ್ಯದ ವಿವಿಧ ಸ್ತರದ ಪದಾಧಿಕಾರಿಗಳು, ಸಹಸ್ರಾರು ಕಾರ್ಯಕರ್ತರು ಪ್ರತಿಭಟನೆಯಲ್ಲಿ ಉಪಸ್ಥಿತರಿದ್ದರು.



# ಬಾಬಾಸಾಹೇಬ್ ಮತ್ತು ಅಟಲ್ ಜೀ ಕನಸು, ಮೋದಿ ಜೀಯವರಿಂದ ನನಸು !!!!

## ಸುಶಾಸನ್ ದಿವಸದಂದು ಮಧ್ಯಪ್ರದೇಶದಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿ




**ಅಶ್ವಿನಿ ಶಂಕರ್**
ರಾಜ್ಯ ಉಪಾಧ್ಯಕ್ಷರು,
ಒಬಿಸಿ ಮೋರ್ಚಾ - ಬಿಜೆಪಿ


ಅಟಲ್‌ಜೀಯವರ ಜನ್ಮ ದಿನವಾದ ಇಂದು, ದೇಶದ ಇತಿಹಾಸದಲ್ಲಿ ಅಚ್ಚಳಿಯದ ಒಂದು ಐತಿಹಾಸಿಕ ದಿನ. ಈ ದಿನವನ್ನು ಸುಶಾಸನ್ ದಿನವಾಗಿ ಆಚರಿಸಲಾಗುತ್ತಿದ್ದು, ಶ್ರೀ ಅಟಲ್‌ಜೀಯವರ ಆಶಯದಂತೆ ಆಡಳಿತಾತ್ಮಕ ನಿರ್ಧಾರಗಳನ್ನು ಮಾಡಲಾಗುತ್ತದೆ ಮತ್ತು ಯೋಜನೆಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಪ್ರಧಾನಿ ಶ್ರೀ ನರೇಂದ್ರಮೋದಿ ತಿಳಿಸಿದರು.

ಮಧ್ಯಪ್ರದೇಶದ ನಲ್ಲಿ ನಡೆದ ಸುಶಾಸನ್ ದಿವಸ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು ಮಧ್ಯಪ್ರದೇಶದಲ್ಲಿ 11 ಸಾವಿರಕ್ಕೂ ಅಧಿಕ ಅಟಲ್ ಗ್ರಾಮ ಸೇವಾ ಸದನದ ನಿರ್ಮಾಣದ ಕಾರ್ಯವು ಇಂದಿನಿಂದ ಪ್ರಾರಂಭಗೊಂಡಿದೆ, ಅಟಲ್ ಗ್ರಾಮ ಸೇವಾ ಸದನವು ಹಳ್ಳಿಗಳ ಅಭಿವೃದ್ಧಿಗೆ ಒಂದು ಹೊಸದಾದ ವೇಗವನ್ನು ದೊರಕಿಸಿಕೊಡಲಿದೆ. ನಮಗೆ ಸುಶಾಸನ ದಿವಸವು ಒಂದು ದಿನದ ಕಾರ್ಯಕ್ರಮವಲ್ಲ, ಗವರ್ನೆನ್ಸ್ ಅಂದರೆ ಸುಶಾಸನವನ್ನ ಭಾಜಪ ಸರ್ಕಾರದ ಗುರುತನ್ನಾಗಿಸಿದ್ದೇವೆ. ದೇಶದ ಜನರು ಸತತವಾಗಿ ಮೂರನೇ ಬಾರಿ ಕೇಂದ್ರದಲ್ಲಿ ಭಾರತೀಯ ಜನತಾ ಪಕ್ಷದ ಸರ್ಕಾರವನ್ನು ಆರಿಸಿದ್ದಾರೆ. ಇದರ ಹಿಂದಿರುವುದೇ ಸುಶಾನದ ಭರವಸೆಯ ಕಾರಣ ಎಂದರು.

### ಪರಾಮರ್ಶಿಸಲಿ

ನಾನು ದೇಶದ ಗಣ್ಯರಲ್ಲಿ ಅರ್ಥಶಾಸ್ತ್ರಜ್ಞರಲ್ಲಿ ಹಿರಿಯ ವಿದ್ವಾಂಸರಲ್ಲಿ ತಂತ್ರಜ್ಞಾನದ ಶ್ರೇಷ್ಠರಲ್ಲಿ, ಅರ್ಥಶಾಸ್ತ್ರಜ್ಞರಲ್ಲಿ ಆಗ್ರಹಿಸುವುದೇನೆಂದರೆ ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳು ಕಳೆದಿದೆ, ಹಾಗಾಗಿ ಒಮ್ಮೆ ಅವರೆಲ್ಲರೂ ಕೂಡಿ ಅಭಿವೃದ್ಧಿಯ ಸುಶಾಸನದ ಜನಹಿತದ ಕುರಿತಾದ ಒಂದು ಸಮೀಕ್ಷೆಯನ್ನು ದೇಶಾದ್ಯಂತ ನಡೆಸಲಿ ಎಂದು ಆಗ್ರಹಿಸಿದ ಶ್ರೀ ಮೋದಿ ಕೆಲವು ನಿರ್ದಿಷ್ಟ ದಿನಾಂಕಗಳನ್ನು ಇಟ್ಟುಕೊಂಡು ಕಾಂಗ್ರೆಸ್ ಪಕ್ಷದ ಸರ್ಕಾರಗಳಿರುವ ಪ್ರದೇಶಗಳಲ್ಲಿ, ಎಡಪಂಥೀಯರ ಸರ್ಕಾರಗಳಿರುವ ರಾಜ್ಯಗಳಲ್ಲಿ ಸಾಗಿರುವ ಅಭಿವೃದ್ಧಿಯ ಬಗ್ಗೆ ಪರಾಮರ್ಶಿಸಲಿ, ಎಲ್ಲಿ ಒಂದೇ ಪರಿವಾರದ ಪಕ್ಷಗಳು ಸರ್ಕಾರ ನಡೆಸಿವೆಯೋ ಆ ಸ್ಥಳಗಳಲ್ಲಿ ಹೇಗೆ ಅಭಿವೃದ್ಧಿಯಾಗುತ್ತಿದೆ, ಎಲ್ಲಿ ಸೇನೆಯು ಸರ್ಕಾರಗಳನ್ನು ನಡೆಸಿವೆಯೋ ಅಲ್ಲಿ ಏನಾಗಿದೆ, ಇವೆಲ್ಲದರ ಜೊತೆ ಭಾರತೀಯ ಜನತಾ ಪಕ್ಷಕ್ಕೆ ಸರ್ಕಾರ ನಡೆಸುವ ಅವಕಾಶ ಸಿಕ್ಕಾಗ ಅಲ್ಲಿ ಆಗಿರುವ ಅಭಿವೃದ್ಧಿ ಯಾವ ರೀತಿಯಾಗಿ ಸಾಗಿದೆ ಎಂದು ತುಲನೆ ಮಾಡಲಿ, ನಾನು ಸಾಕ್ಷಿ ಸಮೇತನಾಗಿ ಹೇಳಬಲ್ಲೆ, ಯಾವಾಗ ದೇಶದಲ್ಲಿ ಭಾರತೀಯ ಜನತಾ ಪಕ್ಷಕ್ಕೆ ಎಲ್ಲೆಲ್ಲಿ ಅಧಿಕಾರ ನಡೆಸಲು ಅವಕಾಶ ಸಿಕ್ಕಿದೆಯೋ ನಾವು ಹಿಂದಿನ ಎಲ್ಲಾ ದಾಖಲೆಗಳನ್ನು ಮೀರಿ ಜನಕಲ್ಯಾಣದ ಜನ ಹಿತದ ಅಭಿವೃದ್ದಿಯ ಕಾರ್ಯಗಳಲ್ಲಿ ಜಯಸಿದ್ದೇವೆ ಎಂದರು.

ಈ ಪರಾಮರ್ಶೆಯಿಂದ ಇಡೀ ದೇಶಕ್ಕೆ ನಾವು ಜನಕ್ಕಾಗಿ ಮಾಡಿರುವ ಯೋಜನೆಗಳು ಮತ್ತು ಸಾಧನೆಗಳನ್ನು ತಿಳಿದಂತಾಗುತ್ತದೆ ಎಂದು ಹೇಳಿದ ಅವರು. ಸ್ವಾತಂತ್ರ್ಯ ಹೋರಾಟದ ವೀರರು ಯಾವ ಕನಸುಗಳನ್ನು ಕಂಡಿದ್ದರೋ ಅವುಗಳನ್ನು ನನಸಾಗಿಸಲು ನಾವು ಹಗಲಿರುಳು ಬೆವರು ಸುರಿಸಿ ಶ್ರಮಿಸುತ್ತಿದ್ದೇವೆ, ದೇಶಕ್ಕಾಗಿ ಯಾರು ತಮ್ಮ ರಕ್ತವನ್ನು ಚೆಲ್ಲಿದರೋ,ಅವರ ಇಷ್ಟಾರ್ಥವನ್ನು ಸಾಕಾರಗೊಳಿಸುವ ಸಲುವಾಗಿ ನಾವು ನಮ್ಮ ಬೆವರಿನಿಂದ ಆ ಕನಸುಗಳನ್ನೆಲ್ಲ ನನಸಾಗಿಸುತ್ತಿದ್ದೇವೆ ಹಾಗೂ ಸುಶಾನಕ್ಕಾಗಿ ಒಳ್ಳೆಯ ಯೋಜನೆಗಳ ಜೊತೆ ಜೊತೆಗೆ ಅವುಗಳನ್ನು ಒಳ್ಳೆಯ ರೀತಿಯಲ್ಲಿ ಅನುಷ್ಠಾನಗೊಳಿಸುವುದು ಸಹ ಪ್ರಮುಖವಾಗಿದೆ. ಸರ್ಕಾರದ ಯೋಜನೆಗಳ ಲಾಭ ಎಷ್ಟರಮಟ್ಟಿಗೆ ತಲುಪಿದೆ ಎಂಬುದು ಸುಶಾಸನದ ಪ್ರಮಾಣವಾಗಿರುತ್ತದೆ.

### ಕಾಂಗ್ರೆಸ್ ವಂಚನೆ

ಹಿಂದೆಲ್ಲಾ ಕಾಂಗ್ರೆಸ್ ಸರ್ಕಾರಗಳು ಬರಿ ಘೋಷಣೆಗಳನ್ನು ಮಾಡಿ ಜನರನ್ನು ವಂಚಿಸುತ್ತಿದ್ದವು. ಘೋಷಣೆ ಮಾಡುವುದು ಆಸೆಗಳನ್ನು ಹುಟ್ಟಿಸುವುದು, ಬೆಳಕು ತೋರಿಸುವುದು, ದಿನಪತ್ರಿಕೆಗಳಲ್ಲಿ ಆಡಂಬರದ ಭಾವಚಿತ್ರಗಳನ್ನು ಹಾಕುವುದು ಇಷ್ಟರಲ್ಲಿಯೇ ಅವರ ಕೆಲಸ ಪೂರ್ತಿಗೊಳ್ಳುತ್ತಿತ್ತು. ಜನರಿಗೆ ಜನರಿಗಾಗಿ ಎಂದಿಗೂ ಆ ಯೋಜನೆಗಳ ಲಾಭ ಸಿಗುತ್ತಿರಲಿಲ್ಲ. ನಾನು ಪ್ರಧಾನಿಯಾದಾಗ ಪ್ರಗತಿಪರ ಕಾರ್ಯಕ್ರಮಗಳಾಗಿರುವ ಪಟ್ಟಿಯಲ್ಲಿ ಹಳೆಯ ಯೋಚನೆಗಳ ಪಟ್ಟಿ ನೋಡಿದಾಗ ಹೈರಾಣ ಆಗಿ ಹೋದೆನು 35-40 ವರ್ಷಗಳ ಹಿಂದೆ ನಡೆದಂತಹ ಕಾಮಗಾರಿಗಳ ಶಿಲಾನ್ಯಾಸದ ನಂತರ ಅಲ್ಲಿ ಯಾವ ಕೆಲಸವೂ ನಡೆದಿಲ್ಲ ಕಾಂಗ್ರೆಸ್

ಸರ್ಕಾರಗಳಿಗೆ ಯಾವತ್ತೂ ನಿಯತ್ತಿನ ಅರಿವಿರಲಿಲ್ಲ, ಜೊತೆಗೆ ಯೋಜನೆಗಳನ್ನು ಅನುಷ್ಠಾನಗೊಳಿಸುವ ಗಂಭೀರತೆ ಇರಲಿಲ್ಲ. ನಾವು ಪ್ರಧಾನಮಂತ್ರಿ ಯೋಜನೆಯ ಅಡಿಯಲ್ಲಿ ದೇಶದಲ್ಲಿರುವ ರೈತರಿಗೆ ವಾರ್ಷಿಕ 12 ಸಾವಿರ ರೂಪಾಯಿಗಳನ್ನು ಮಧ್ಯಪ್ರದೇಶವನ್ನು ಸೇರಿದಂತೆ ನೀಡುತ್ತಿದ್ದೇವೆ, ಇದು ಸಾಧ್ಯವಾದದ್ದು ಜನಧನ ಬ್ಯಾಂಕ್ ಖಾತೆಗಳ ಅಳವಡಿಕೆಯಿಂದಾಗಿ ಕಡಿಮೆ ದರದಲ್ಲಿ ಪಡಿತರ ನೀಡುವುದು ಮೊದಲಿನಿಂದಲೂ ಜಾರಿಯಲ್ಲಿತ್ತು ಆದರೆ ಬಡವರು ಪಡಿತರಕ್ಕಾಗಿ ಅಲೆದಾಡಬೇಕಾಗಿತ್ತು. ಆದರೆ ಇಂದು ಬಡವರಿಗೆ ನಮ್ಮ ಸರ್ಕಾರದಲ್ಲಿ ಉಚಿತ ಪಡಿತರ ಸಿಗುತ್ತಿದೆ, ಅದರಲ್ಲೂ ಪಾರದರ್ಶಕವಾಗಿ ದೊರೆಯುತ್ತಿದೆ ಇದು ತಂತ್ರಜ್ಞಾನದ ಬಳಕೆಯಿಂದ ಸಾಧ್ಯವಾಗಿದೆ. ಯಾವಾಗ ಒಂದು ದೇಶ ಒಂದು ಪಡಿತರ ಯೋಜನೆ ಲಾಭ ಬಡವರಿಗೆ ದೊರೆಯಿತು. ಸುಶಾಸನದ ನಿಜವಾದ ಅರ್ಥ ಅಂದರೆ ಇದೇ. ನಮ್ಮ ಅಧಿಕಾರಕ್ಕಾಗಿಯೇ ಜನಸಾಮಾನ್ಯನನ್ನು ಸರ್ಕಾರದ ಮುಂದೆ ಕೈ ಚಾಚುವಂತಹ ಸಂದರ್ಭ ಎಂದಿಗೂ ಬರಕೂಡದು ಸರ್ಕಾರಿ ಕಚೇರಿಗಳಿಗೆ ಜನಸಾಮಾನ್ಯರು ಅಲೆದಾಡಕೂಡದು ಎಂದು ಹೇಳಿದರು.

ಶೇಕಡಾ 100 ರಷ್ಟು ಫಲಾನುಭವಿಗಳಿಗೆ ಶೇಕಡಾ 100 ಯೋಜನೆಯ ಫಲ ದೊರಕಿಸುವ ನೀತಿ ಅಟಲ್‌ಜೀಯವರ ಸುಶಾಸನದ ಪರಿಕಲ್ಪನೆಯಾಗಿದೆ. ಸುಶಾಸನದ ಇದೇ ಮಂತ್ರವು ಭಾರತೀಯ ಜನತಾ ಪಕ್ಷದ ಸರ್ಕಾರಗಳನ್ನು ಬೇರೆ ಪಕ್ಷಗಳಿಗಿಂತ ಭಿನ್ನವಾದ ಸ್ಥಾನದಲ್ಲಿರಿಸುತ್ತದೆ ಎಂದು ಹೇಳಿದ ಶ್ರೀ ಮೋದಿಯವರು ಇಂದು ಇದನ್ನು ದೇಶದ ಜನತೆ ಗಮನಿಸುತ್ತಿದ್ದಾರೆ. ಆದ್ದರಿಂದಲೇ ಪ್ರತೀ ಬಾರಿಯೂ ಭಾರತೀಯ ಜನತಾ ಪಕ್ಷವನ್ನು ದೇಶ ಜನತೆ ಆರಿಸುತ್ತಿದ್ದಾರೆ. ಎಲ್ಲಿ ಸುಶಾಸನವಿರುತ್ತದೆಯೋ ಅಲ್ಲಿ ವರ್ತಮಾನದ ಸವಾಲುಗಳ ಜೊತೆಯಲ್ಲಿಯೇ ಭವಿಷ್ಯದ ಸವಾಲುಗಳ ಕುರಿತಾಗಿಯೂ ಕೆಲಸವಾಗುತ್ತದೆ. ಆದರೆ ದೌರ್ಭಾಗ್ಯವೆಂದರೆ, ಈ ದೇಶದಲ್ಲಿ ಹಿಂದಿನ ಹಲವಾರು ವರ್ಷಗಳು ಕಾಂಗ್ರೆಸ್ ಸರ್ಕಾರಗಳಿದ್ದವು. ಕಾಂಗ್ರೆಸ್ ಶಾಸನ ನಡೆಸುವುದು ತನ್ನ ಜನ್ಮ ಸಿದ್ಧ ಅಧಿಕಾರವೆಂದು ಭಾವಿಸುತ್ತದೆ, ಆದರೆ ಶಾಸನದ ಲಾಭ ಕೇವಲ ಶೇಕಡ 35 ರಷ್ಟು ಮಾತ್ರ. ಎಲ್ಲಿ ಕಾಂಗ್ರೆಸ್ ಇದೆಯೋ ಅಲ್ಲಿ ಸುಶಾಸನ ಸಾಧ್ಯವೇ ಆಗುವುದಿಲ್ಲ. ದೇಶದ ರೈತರು ಮಾತೆಯರು ಭಗಿನಿಯರು ಒಂದೊಂದು ಹನಿ ನೀರಿಗಾಗಿ ದೊಡ್ಡ ದೊಡ್ಡ ಸಂಘರ್ಷಗಳನ್ನು ನಡೆಸಿದ್ದಾರೆ.

## ಡಾ.ಅಂಬೇಡ್ಕರ್ ಮತ್ತು ದೂರದೃಷ್ಟಿತನ

ಕಾಂಗ್ರೆಸ್ ಎಂದಿಗೂ ನೀರಿನ ಬವಣೆಯ ಕುರಿತಾಗಿ ಯೋಚಿಸಲೇ ಇಲ್ಲ..... ಭಾರತಕ್ಕೆ ನದಿ ನೀರಿನ ಮಹತ್ವವೇನು ಎಂಬುದು ಮೊದಲು ತಿಳಿಸಲು ನಮ್ಮ ದೇಶ ಸ್ವಾತಂತ್ರ್ಯ ಪಡೆದ ನಂತರ ಮೊದಲ ಬಾರಿಗೆ ಜಲಶಕ್ತಿ, ನದಿ ನೀರಿನ ಸಾಮರ್ಥ್ಯ, ಜಲಸಂಪನ್ಮೂಲ, ನೀರಿಗಾಗಿ ದೂರದೃಷ್ಟಿಯ ಯೋಜನೆ ಈ ವಿಷಯಗಳ ಬಗ್ಗೆ ಮೊಟ್ಟಮೊದಲು ಯೋಚಿಸಿದವರು, ಕಾರ್ಯಪ್ರವೃತ್ತರಾದವರು ಯಾರೆಂದು ಇಂದಿಗೂ ಸಹ ಯಾರಿಗೂ ತಿಳಿದಿಲ್ಲ ಏಕೆಂದರೆ ಆ ಸತ್ಯವನ್ನು ಹೂತಿಡಲಾಗಿತ್ತು, ಅದನ್ನು ಬಚ್ಚಿಡಲಾಗಿತ್ತು ಹಾಗೂ ಒಬ್ಬನೇ ಒಬ್ಬ ವ್ಯಕ್ತಿಗೆ ಇದರ ಲಾಭ ನೀಡುವ ನಶೆಯಲ್ಲಿ ನಿಜವಾದ ದೇಶ ಸೇವಕನನ್ನು ಹುದುಗಿಸಿ ಇಡಲಾಗಿತ್ತು. ಇಂದು ನಾನು ನಿಮಗೆ ಆ ಹೂತಿಟ್ಟಿರುವ ಸತ್ಯವನ್ನು ತಿಳಿಸುತ್ತೇನೆ. ಭಾರತದಲ್ಲಿ ಜಲಶಕ್ತಿ, ಜಲಸಂಪನ್ಮೂಲ, ನೀರಿಗಾಗಿ ಅಣೆಕಟ್ಟುಗಳ ನಿರ್ಮಾಣದ ದೂರ ದೃಷ್ಟಿ ಇದ್ದಂತಹ ಒಬ್ಬ ಮಹಾಪುರುಷರೆಂದರೆ ಅವರು ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್‌ರವರು. ಭಾರತದಲ್ಲಿ ಯಾವಾಗ ದೊಡ್ಡ ದೊಡ್ಡ ನದಿಗಳ ಕಣಿವೆಗಳ ಯೋಜನೆಗಳನ್ನು ರೂಪಿಸಿದಾಗ ಇಂತಹ ಯೋಜನೆಗಳ ಹಿಂದೆ ಡಾ. ಬಾಬಾ ಸಾಹೇಬ್ ಅಂಬೇಡ್ಕರ್‌ರವರ ದೂರದೃಷ್ಟಿತನವಿತ್ತು. ಇಂದು ಯಾವ ಕೇಂದ್ರೀಯ ಜಲ ಮಂಡಳಿ ಇದೆಯೋ ಇದರ ಹಿಂದೆಯೂ ಸಹ ಡಾಕ್ಟರ್ ಅಂಬೇಡ್ಕರ್ ಅವರದ್ದೇ ಪರಿಶ್ರಮವಿತ್ತು. ಆದರೆ ಕಾಂಗ್ರೆಸ್ ಎಂದಿಗೂ ಜಲಸಂಪನ್ಮೂಲ ಯೋಜನೆಗಳಿಗಾಗಿ ಬಾಬಾ ಸಾಹೇಬರಿಗೆ ಅದರ ಶ್ರೇಯಸ್ಸು ನೀಡಲೇ ಇಲ್ಲ. ಯಾರಿಗೂ ತಿಳಿಸಲು, ತಿಳಿಯಲು ಸಹ ಬಿಡಲಿಲ್ಲ ಎಂದರು.

70 ವರ್ಷ ಕಳೆದ ನಂತರವೂ ದೇಶದ ಅನೇಕ ರಾಜ್ಯಗಳ ನಡುವೆ ಹಲವು ನೀರಿನ ವಿವಾದಗಳಿವೆ. ಪಂಚಾಯ್ತಿಯ ಮಟ್ಟದಿಂದ ಸಂಸತ್ ನಡೆಸುವವರೆಗೂ ಕಾಂಗ್ರೆಸ್‌ನದ್ದೇ ಶಾಸನವಿದ್ದಿತ್ತೋ ಆಗ ಇದೆಲ್ಲವನ್ನೂ ಸುಲಭವಾಗಿ ಪರಿಹರಿಸಬಹುದಿತ್ತು. ಆದರೆ ನಿಯತ್ತಿಲ್ಲದಿರುವ ಕಾರಣ ಕಾಂಗ್ರೆಸ್ ಎಂದಿಗೂ ಈ ವಿಷಯದ ಕುರಿತಾಗಿ ಪ್ರಯತ್ನ ನಡೆಸಲೇ ಇಲ್ಲ ದೇಶದಲ್ಲಿ ಯಾವಾಗ ಅಟಲ್ ಜಿ ರವರ ಸರ್ಕಾರ ರಚನೆಯಾಯಿತು. ಆಗ ಅವರು ನದಿ ನೀರಿನ ವಿಷಯದ ವಿವಾದಗಳನ್ನು ಬಗೆಹರಿಸುವ ಸಲುವಾಗಿ ಗಂಭೀರವಾಗಿ ಯೋಚಿಸಿ ಕಾರ್ಯ ಪ್ರವೃತ್ತರಾದರು. ಆದರೆ 2004ರ ನಂತರ ಅವರ ಪ್ರಯತ್ನಗಳಿಗೆ ತದನಂತರ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರವು, ಎಲ್ಲಾ ಯೋಜನೆಗಳು ಹಾಗೂ ಕನಸುಗಳಿಗೆ ತಣ್ಣೀರೆರಚಿತು. ಇಂದು ನಮ್ಮ ಸರ್ಕಾರ ದೇಶಾದ್ಯಂತ ನದಿಗಳ ಜೋಡಣಾ ಕಾರ್ಯಕ್ಕೆ ವೇಗ ನೀಡುತ್ತಿದ್ದೇವೆ. ನದಿಗಳನ್ನು ಜೋಡಿಸುವ ಕಾರ್ಯದಲ್ಲಿ ಅತ್ಯಂತ ಕ್ರಿಯಾಶೀಲರಾಗಿದ್ದೇವೆ. ಮಧ್ಯಪ್ರದೇಶವು ದೇಶದ ಮೊದಲ ರಾಜ್ಯ ದೇಶದ ಪ್ರಮುಖ ಎರಡು ನದಿಗಳನ್ನು ಜೋಡಿಸುವ ಮಹಾ ಅಭಿಯಾನದ ಅಡಿಯಲ್ಲಿ ಎರಡು ಬೃಹತ್ ಯೋಜನೆಗಳ ಪ್ರಾರಂಭಗೊಂಡಂತಹ ಪ್ರಥಮ ರಾಜ್ಯವಾಗಿದೆ. ಕೆಲವು ದಿನಗಳ ಹಿಂದೆಯಷ್ಟೇ ರಾಜಸ್ಥಾನದಲ್ಲಿ ಪಾರ್ವತಿ ಕಾಳಿ ಸಿಂಗ್ ಚಂಬಾನ್ ಹಾಗೂ ಯೋಜನೆಯ ಮೂಲಕ ಅನೇಕ ನದಿಗಳ ಜೋಡಣೆ ನಿಶ್ಚಯಗೊಂಡಿದೆ ಈ ಒಡಂಬಡಿಕೆಯು ಮಧ್ಯಪ್ರದೇಶಕ್ಕೆ ಬೃಹತ್ ಲಾಭ ದೊರಕಿಸಿಕೊಡಲಿದೆ. 21ನೇ ಶತಮಾನದ ಅತಿ ದೊಡ್ಡ ಸವಾಲುಗಳಲ್ಲಿ ಒಂದಾದ ಭಾರತದ ನದಿಗಳ ಜೋಡಣೆಯ, ಬಾಬಾ ಸಾಹೇಬರ ಮಹತ್ವಾಕಾಂಕ್ಷೆಯನ್ನು ಭಾರತೀಯ ಜನತಾ ಪಕ್ಷವು ಇಂದು ನನಸಾಗಿಸಿದೆ ಎಂದರು.

26

ಹಿರಿಯ ಕಾರ್ಯಕರ್ತರ

# ಪರಿಚಯಮಾಲೆ

# ಬೀದರ್ ಲೋಕಸಭಾ ಕ್ಷೇತ್ರದಲ್ಲಿ ಕೈ ಕೋಟೆ ಛಿದ್ರಗೊಳಿಸಿದ

# ದಿ. ರಾಮಚಂದ್ರ ವೀರಪ್ಪ



**ಕರ್ನಾಟಕ ಕಿರೀಟಪ್ರಾಯ, ಉತ್ತರದ ಮಲೆನಾಡು ಖ್ಯಾತಿಯ ಬೀದರ್ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿಗೆ ಗಟ್ಟಿ ನೆಲೆ ಹಾಕಿಕೊಟ್ಟ ನಾಯಕರಲ್ಲಿ ದಿ.ರಾಮಚಂದ್ರ ವೀರಪ್ಪ ಅವರು ಹೆಸರು ಅಗ್ರಸ್ಥಾನದಲ್ಲಿದೆ. ಬೀದರ್ ಕ್ಷೇತ್ರದಲ್ಲಿ ಕಾಂಗ್ರೆಸ್ ಕೋಟೆಯನ್ನು ಮೊದಲ ಸಲ ಛಿದ್ರಗೊಳಿಸಿದ ಶ್ರೇಯಸ್ಸು ಇವರಿಗೆ ಸಲ್ಲುತ್ತದೆ. ಸತತ ಐದು ಸಲ ಇಲ್ಲಿ ಕಮಲ ಅರಳಿಸಿದ್ದರು. ಅಷ್ಟೇ ಅಲ್ಲ ಬೀದರ್ ಕ್ಷೇತ್ರದಿಂದ ಅತಿ ಹೆಚ್ಚು 7 ಬಾರಿ ಲೋಕಸಭಾ ಸದಸ್ಯರಾಗಿ, ದೇಶದ ಹಿರಿಯ ಸಂಸದರಾಗಿ ಮೆರೆದ ಖ್ಯಾತಿಯೂ ಅವರದ್ದಾಗಿದೆ.**




**ಸದಾನಂದ ಜೋಷಿ**
ಹಿರಿಯ ಪತ್ರಕರ್ತರು, ಬೀದರ್


ರಾಮಚಂದ್ರ ವೀರಪ್ಪ ಅವರು ಸರಳ ವ್ಯಕ್ತಿತ್ವ ಹೊಂದಿದ್ದ ಅಪರೂಪದ ರಾಜಕಾರಣಿ. ಸಿಂಪಲ್ ನಾಯಕರಾಗಿದ್ದುಕೊಂಡೇ ಗಡಿ ಜಿಲ್ಲೆಯಲ್ಲಿ ಬಲಿಷ್ಠವಾಗಿದ್ದ ಕಾಂಗ್ರೆಸ್‌ಗೆ ಪರ್ಯಾಯ ಶಕ್ತಿ ಕಲ್ಪಿಸಿದ್ದರು. ರಾಮಚಂದ್ರ ವೀರಪ್ಪ ಅವರು ಹಾಕಿಕೊಟ್ಟ ಗಟ್ಟಿ ನೆಲೆಯ ಪರಿಣಾಮವಾಗಿ ಬೀದರ್ ಲೋಕಸಭಾ ಕ್ಷೇತ್ರ ಬಿಜೆಪಿ ಭದ್ರಕೋಟೆಯಾಗಿ ಮಾರ್ಪಟ್ಟಿದೆ. ಲೋಕಸಭೆ ಚುನಾವಣೆ ಬಂದಾಗೊಮ್ಮೆ ಕಾಂಗ್ರೆಸ್‌ಗೆ ಇಲ್ಲಿ ಬಿಜೆಪಿ ದುಸ್ವಪ್ನವಾಗಿ ಕಾಡುತ್ತಿದೆ. ಒಂದು ಕಾಲದಲ್ಲಿ ತನ್ನದೇ ಪಾರುಪತ್ಯದಿಂದ ಮೆರೆದ ಕಾಂಗ್ರೆಸ್ಸಿಗರಿಗೆ ಈಗ ಕ್ಷೇತ್ರದಲ್ಲಿ ಬಿಜೆಪಿ ಹಣೆಯಲು ತಿಣುಕಾಡುವಂತಹ ಸ್ಥಿತಿಯಿದೆ. ಇದಕ್ಕೆ ಕಾರಣ ರಾಮಚಂದ್ರ ವೀರಪ್ಪ ಎಂದರೆ ಅತಿಶಯೋಕ್ತಿ ಆಗಲಾರದು.

ರಾಷ್ಟ್ರಮಟ್ಟದಲ್ಲಿ ಬೀದರ್ ಲೋಕಸಭೆ ಕ್ಷೇತ್ರಕ್ಕೆ ಬಿಜೆಪಿ ಭದ್ರಕೋಟೆ ಎಂಬ ಖ್ಯಾತಿ ಕೊಟ್ಟವರು ರಾಮಚಂದ್ರ ವೀರಪ್ಪ. ಇವರ ರಾಜಕೀಯ ಹಾದಿ ಬಲು ರೋಚಕವಾಗಿದೆ. ಒಮ್ಮೆ ಶಾಸಕ, 7 ಸಲ ಸಂಸದರಾಗಿದ್ದರು. ಸತತ 5 ಬಾರಿ ಬಿಜೆಪಿಯಿಂದ ಗೆದ್ದು, ಗಡಿ ಜಿಲ್ಲೆಯಲ್ಲಿ ಕೇಸರಿ ಪಡೆಗೆ ಶಕ್ತಿ ತುಂಬಿದರು. ತಮ್ಮ 96ನೇ ವಯಸ್ಸಿನಲ್ಲಿ ರಾಮಚಂದ್ರ ವೀರಪ್ಪ 2004ರಲ್ಲಿ (ಸಂಸದರಿದ್ದಾಗಲೇ) ನಿಧನ ಹೊಂದಿದ್ದರು.

ರಾಮಚಂದ್ರ ವೀರಪ್ಪ ಸ್ವಾತಂತ್ರ್ಯ ಹೋರಾಟಗಾರರು. ಹೈದ್ರಾಬಾದ್ ಕರ್ನಾಟಕ ವಿಮೋಚನಾ ಚಳವಳಿಯಲ್ಲೂ ಸಕ್ರಿಯರಿದ್ದರು. ಆರ್ಯ ಸಮಾಜದ ಮೂಲಕ ಗುರುತಿಸಿಕೊಂಡಿದ್ದ ಅಪ್ಪಟ ದೇಶಭಕ್ತರಾಗಿದ್ದರು. ಇವರು ಮೂಲತಃ ಕಾಂಗ್ರೆಸ್ಸಿಗರು. 1962ರಲ್ಲಿ ಬೀದರ್ ಲೋಕಸಭೆ ಕ್ಷೇತ್ರವು ಪರಿಶಿಷ್ಟ ಜಾತಿಗೆ (ಎಸ್‌ಸಿ) ಮೀಸಲಾಯಿತು. ಆಗ ಕಾಂಗ್ರೆಸ್‌ನಿಂದ ನಿಂತು ಗೆದ್ದು ಮೊದಲ ಸಲ ಸಂಸತ್ತಿಗೆ ಎಂಟ್ರಿ ಕೊಟ್ಟರು. 1967ರಲ್ಲೂ ಕಾಂಗ್ರೆಸ್‌ನಿಂದ ಮರು ಆಯ್ಕೆಯಾದರು. 1971ರಲ್ಲಿ ಎನ್‌ಸಿಎನ್, 1977ರಲ್ಲಿ ಬಿಎಲ್‌ಡಿಯಿಂದ ನಿಂತು ಸೋತರು. 1980, 1984 ಹಾಗೂ 1989ರ

## ಸ್ವಚ್ಛ ಆಡಳಿತ, ನಿಷ್ಕಳಂಕ ಸೇವೆ

ರಾಮಚಂದ್ರ ವೀರಪ್ಪ ಅವರದ್ದು ಅತ್ಯಂತ ಸಿಂಪಲ್ ವ್ಯಕ್ತಿತ್ವ. ದೀರ್ಘ ಅವಧಿ ಅಧಿಕಾರದಲ್ಲಿದ್ದರೂ ಹುಮನಾಬಾದ್ ನಗರದ ಪುಟ್ಟ ಮನೆಯಲ್ಲಿಯೇ ಕೊನೆವರೆಗೂ ಕಳೆದರು. ಸರಳತೆ, ಸಜ್ಜನಿಕೆ, ನೈತಿಕತೆ ಮೂಲಕ ಅಪರೂಪದ ರಾಜಕಾರಣಿ ಎನಿಸಿದ್ದರು. ಅಟಲ್ ಬಿಹಾರಿ ವಾಜಪೇಯಿ, ಲಾಲಕೃಷ್ಣ ಆಡ್ವಾಣಿ ಸೇರಿದಂತೆ ಬಿಜೆಪಿಯ ಮೊದಲ ಪಂಕ್ತಿಯ ಬಹುತೇಕ ನೇತಾರರ ಜೊತೆಗೆ ಆತ್ಮೀಯ ಒಡನಾಟ ಹೊಂದಿದ್ದರು. ರಾಷ್ಟ್ರಮಟ್ಟದಲ್ಲಿ ದೊಡ್ಡಸ್ಥಿಕೆ ಗಳಿಸಿದರೂ ಯಾವತ್ತೂ ಸಹ ಘಮಂಡ್ ತೋರಿಸಿದವರಲ್ಲ. ಹೀಗಾಗಿ ಅವರ ಬಗ್ಗೆ ಎಲ್ಲರಿಗೂ ಎಲ್ಲಿಲ್ಲದ ಗೌರವ, ಅಭಿಮಾನ, ಹೆಮ್ಮೆ ಇತ್ತು. ಒಮ್ಮೆ ಶಾಸಕ, ಏಳು ಬಾರಿ ಸಂಸದರಾಗಿದ್ದರೂ ಸ್ವಚ್ಛ ಆಡಳಿತ, ನಿಷ್ಕಳಂಕ ಸೇವೆಯೂ ಇದಕ್ಕೆ ಕಾರಣವಾಗಿತ್ತು. ಪರಿಶಿಷ್ಟ ಜಾತಿಗೆ ಸೇರಿದ್ದ ಇವರು ಯಾವತ್ತೂ ಜಾತಿಯತೆ ಮಾಡಿದವರಲ್ಲ. ಎಲ್ಲ ಜಾತಿಯವರ ಜೊತೆಯಲ್ಲಿ ಅನ್ಯೋನ್ಯವಾಗಿದ್ದರು. ಇದು ಸಹ ಇವರು ಸತತ 5 ಸಲ ಬಿಜೆಪಿಯಿಂದ ಗೆಲ್ಲುವಂತೆ ಮಾಡಿತ್ತು ಎನ್ನಬಹುದು.

ಚುನಾವಣೆಯಲ್ಲಿ ಸ್ಪರ್ಧಿಸಲಿಲ್ಲ. 1983ರಲ್ಲಿ ಹುಲಸೂರು ವಿಧಾನಸಭೆ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ನಿಂತು ಗೆದ್ದು, ಮೊದಲ ಬಾರಿ ವಿಧಾನಸಭೆಗೂ ಪ್ರವೇಶಿಸಿದ್ದರು.

ಜನಸಂಘ ಬಿಜೆಪಿಯಾದ ನಂತರ 1984ರಲ್ಲಿ ನಡೆದ ಲೋಕಸಭೆ ಚುನಾವಣೆಯಲ್ಲಿ ರಾಜೇಂದ್ರ ವರ್ಮಾ ಬಿಜೆಪಿಯಿಂದ ನಿಂತು 1,20,221 ಮತ ಗಳಿಸಿದ್ದರು. ಇಷ್ಟೊಂದು ಮತ ಬಂದಿದ್ದು ಬಿಜೆಪಿಗೆ ಉತ್ತಮ ಆರಂಭ ಎಂಬಂತಾಯಿತು. ಆಗ ಕಾಂಗ್ರೆಸ್ಸಿನ ನರಸಿಂಗರಾವ ಸೂರ್ಯವಂಶಿ ಗೆದ್ದರು. 1989ರಲ್ಲಿ ಬಿಜೆಪಿ ಅಭ್ಯರ್ಥಿ ನಿಲ್ಲಿಸಲಿಲ್ಲ. 1990ರಲ್ಲಿ ದೇಶದಲ್ಲಿ ವಾಜಪೇಯಿ-ಆಡ್ವಾಣಿ ಅಲೆ ಬೀಸಿತು. ಶ್ರೀ ರಾಮ ಜನ್ಮಭೂಮಿ ರಥಯಾತ್ರೆಯ ಗಾಳಿ ಜೋರಾಗಿ ಎದ್ದಿತ್ತು. ಆಗ ರಾಮಚಂದ್ರ ವೀರಪ್ಪ ಬಿಜೆಪಿ ತೆಕ್ಕೆಗೆ ಜಾರಿದರು. ಒಳ್ಳೆಯ ವ್ಯಕ್ತಿತ್ವವುಳ್ಳ ಅಭ್ಯರ್ಥಿ ಹುಡುಕಾಟದಲ್ಲಿದ್ದ ಬಿಜೆಪಿ, 1991ರ ಲೋಕಸಭೆ ಚುನಾವಣೆಯಲ್ಲಿ ಇವರಿಗೆ ಟಿಕೆಟ್ ನೀಡಿತ್ತು. ಆಗ ರಾಮಚಂದ್ರ ವೀರಪ್ಪ ಅವರು ಭರ್ಜರಿ ಜಯ ಬಾರಿಸಿದರು.

ಇದಾದ ಬಳಿಕ 1996, 1998, 1999 ಹಾಗೂ 2004ರಲ್ಲಿ ನಡೆದ ಚುನಾವಣೆಗಳಲ್ಲೂ ಸತತವಾಗಿ ಬಿಜೆಪಿಯಿಂದ ಜಯಭೇರಿ ಬಾರಿಸಿ ಕ್ಷೇತ್ರವನ್ನು ಪಕ್ಷದ ಭದ್ರಕೋಟೆಯನ್ನಾಗಿ ಪರಿವರ್ತಿಸಿದರು. ದೇಶದ ಹಿರಿಯ ಸಂಸದರಾಗಿದ್ದರೂ ತಾನು ದೊಡ್ಡ ರಾಜಕಾರಣಿ ಎಂದು ಅವರೆಂದೂ ಭಾವಿಸಿಕೊಂಡಿಲ್ಲ. ಸರಳಾತಿಸರಳ ವ್ಯಕ್ತಿತ್ವದ ಜೀವನವೇ ಅವರು ಇಷ್ಟೊಂದು ಸಲ ಗೆಲ್ಲಲು ಕಾರಣವಾಗಿತ್ತು.

## ಹಮ್ ಪಾಗಲ್ ಅಚ್ಛೆ ಹೈ...

ರಾಮಚಂದ್ರ ವೀರಪ್ಪ ಅವರು ಹೆಚ್ಚೇನೂ ಕಲಿತಿರಲಿಲ್ಲ. ಇವರಲ್ಲಿ ಅಕ್ಷರ ಜ್ಞಾನ ಇರದಿದ್ದರೂ ದೇಶ, ಸಮಾಜದ ಬಗ್ಗೆ ಅಪಾರ ಕಾಳಜಿ ಹೊಂದಿದ್ದರು. ಅಪ್ಪಟ ದೇಶಪ್ರೇಮವನ್ನು ಮೈಗೂಡಿಸಿಕೊಂಡಿದ್ದರು. ಜಾತಿ, ಮತ, ಪಕ್ಷಕ್ಕಿಂತ ರಾಷ್ಟ್ರವೇ ಮೊದಲು, ಉಳಿದೆಲ್ಲವೂ ನಂತರ ಎಂಬ ತತ್ವಕ್ಕೆ ಬದ್ಧರಾಗಿದ್ದರು. ಯಾವ ಸಭೆ, ಸಮಾರಂಭಗಳಲ್ಲಿ ಇವರು ಭಾಷಣಕ್ಕೆ ನಿಂತರೂ ದೇಶಭಕ್ತಿ, ದೇಶಾಭಿಮಾನ ಕುಟ್ಟಿ, ಕುಟ್ಟಿ ಬರಬೇಕಿದೆ ಎಂದು ಹೇಳಲು ಮರೆಯುತ್ತಿರಲಿಲ್ಲ. ಇಂದಿನ ಯುವಕರಲ್ಲಿ ದೇಶಭಕ್ತಿ ಕಮ್ಮಿಯಾಗುತ್ತಿದೆ ಎಂದು ನೋವಿನಿಂದ ಹೇಳುತ್ತಿದ್ದರು. ದೇಶವಿದ್ದರೆ ನಾವು, ನಮ್ಮ ಜಾತಿ, ಪಕ್ಷ, ಅಧಿಕಾರ ಎಲ್ಲವೂ ಎಂಬುದು ಅರಿಯಿರಿ ಎಂದು ಕರೆ ನೀಡುತ್ತಿದ್ದರು. ಇದರೊಟ್ಟಿಗೆ ಬಸವಣ್ಣನವರ ವಚನವನ್ನೂ ಹೇಳುತ್ತಿದ್ದರು. ಅಕ್ಷರ ಜ್ಞಾನ ಹೊಂದಿರದ ಕಾರಣ ಜನರು ಏನಂತಾರೋ? ಎಂಬುದರ ಬಗ್ಗೆ ಎಂದೂ ಸಹ ತಲೆಕೆಡಿಸಿಕೊಂಡಿಲ್ಲ. ಹೀಗೆನ್ನುವವರಿಗೆ ಶಾಯರಿ ಮೂಲಕ ಉತ್ತರಿಸುತ್ತಿದ್ದರು. ಭಾಷಣ ಆರಂಭಕ್ಕೂ ಮುನ್ನ 'ಇನ್ಹಿ ಬಿಗಡೆ ದಿಮಾಕೊಂಮೇ ಅಮ್ರುತ್ ಕೆ ಗುಚ್ಛೆ ಹೈ, ಹಮೇ ಲೋಗ್ ಪಾಗಲ್ ಕಹ್ತೆ ಹೈ, ಹಮ್ ಪಾಗಲ್ ಅಚ್ಛೆ ಹೈ' (ಈ ಬಿಗಡಾಯಿಸಿರುವ ತಲೆಯಲ್ಲಿ ಅಮೃತಧಾರೆ ಇದೆ. ಜನರು ನಮಗೆ ಹುಚ್ಚ ಅನ್ನುತ್ತಾರೆ, ಆದರೆ ನಾವು ಹುಚ್ಚರೇ ಚೆನ್ನಾಗಿದ್ದೇವೆ) ಎನ್ನುತ್ತಿದ್ದರು.

## ಗುಂಡು ಬಿದ್ದರೂ ನಿಲ್ಲದ ಹೋರಾಟ

ರಾಮಚಂದ್ರ ವೀರಪ್ಪ ಅವರು ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದರು. ಇದರೊಟ್ಟಿಗೆ ಹೈದರಾಬಾದ್ ಕರ್ನಾಟಕ ವಿಮೋಚನಾ ಚಳವಳಿಯಲ್ಲಿಯೂ ಸಹ ಸಕ್ರಿಯವಾಗಿ ಭಾಗವಹಿಸಿದ್ದರು. ರಜಾಕಾರರ ದೌರ್ಜನ್ಯ, ಮಹಿಳಾ ಶೋಷಣೆ ವಿರುದ್ಧ ಸಂಘರ್ಷ ನಡೆಸಿದ್ದರು. ರಜಾಕಾರರಿಂದ ಕೈಗೆ ಗುಂಡೇಟು ಬಿದ್ದಿದ್ದರೂ ಇವರಲ್ಲಿನ ಹೋರಾಟದ ಕಿಚ್ಚು ತಣ್ಣಗಾಗಿರಲಿಲ್ಲ. ಜೀವದ ಹಂಗು ತೊರೆದು ಆಂದೋಲನದಲ್ಲಿ ಸಕ್ರಿಯವಾಗಿ ತೊಡಗಿದ್ದರು. ಬಾಲ್ಯದಿಂದಲೇ ಆರ್ಯ ಸಮಾಜದ ಸಂಪರ್ಕದಲ್ಲಿದ್ದರಿಂದ ಅದರ ಪ್ರಭಾವಕ್ಕೊಳಗಾಗಿದ್ದರು. ದೇಶಭಕ್ತಿ ಅವರಲ್ಲಿ ಜಾಗೃತಗೊಂಡಿತ್ತು. ಸ್ವಾತಂತ್ರ್ಯ ಚಳವಳಿಗಾರರಿಂದ ಸಾಕಷ್ಟು ಪ್ರೇರಣೆ ಪಡೆದಿದ್ದರು. ಚಿಕ್ಕಂದಿನಿಂದಲೇ ಅನ್ಯಾಯದ ವಿರುದ್ಧ ಹೋರಾಟಕ್ಕೆ ಸೈ ಎಂದರು. ಇದೆಲ್ಲದರ ಫಲವೆಂಬಂತೆ ರಾಜಕೀಯದಲ್ಲಿ ಸಹ ವರ್ಚಸ್ಸು ಗಳಿಸಿಕೊಂಡಿದ್ದರು. ಯಾವ ಪಕ್ಷದಲ್ಲಿದ್ದರೂ ಜನಮನ್ನಣೆ ಗಳಿಸಿದ್ದು ಇವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ.

# ಅರ್ಥಪೂರ್ಣ ಜೀವನಕ್ಕಾಗಿ ಧನಾತ್ಮಕ ಮನೋವಿಜ್ಞಾನ

## (Positive Psychology for Meaningful Life)




**ಪ್ರ**ತೀ ತಿಂಗಳು ಜಗನ್ನಾಥ ಭವನದ ಸಿಬ್ಬಂದಿ ವರ್ಗದವರಿಗೆ ಅನೇಕ ವಿಶೇಷ ಹಾಗೂ ಉಪಯುಕ್ತ ವಿಷಯಗಳಲ್ಲಿ ಪರಿಣತಿ ಹೊಂದಿರುವ ಗಣ್ಯರನ್ನು ಆಹ್ವಾನಿಸಿ ವೈಚಾರಿಕ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸುತ್ತಿರುವುದು ವಿಶೇಷ ಸಂಗತಿಯಾಗಿದೆ.

ಡಿಸೆಂಬರ್ ತಿಂಗಳ ವೈಚಾರಿಕ ಉಪನ್ಯಾಸ ಕಾರ್ಯಕ್ರಮಕ್ಕೆ ಕೇರಳದ ಕಾಸರಗೋಡಿನ ಶ್ರೀ ನವೀನ್ ಎಲ್ಲಂಗಳ ರವರು ಅರ್ಥಪೂರ್ಣ ಜೀವನಕ್ಕಾಗಿ ಧನಾತ್ಮಕ ಮನೋವಿಜ್ಞಾನ (Positive Psychology for Meaningful Life) ವಿಷಯದ ಕುರಿತ ಉಪನ್ಯಾಸವು ಮತ್ತಷ್ಟು ಉಪಯುಕ್ತವಾಗಿತ್ತು ಎಂದರೆ ಅತಿಶಯೋಕ್ತಿಯಲ್ಲ. ಮನಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಇವರು ಮನಶಾಸ್ತ್ರ ಹಾಗೂ ಹೋಲಿಸ್ಟಿಕ್ ಲೈಫ್ ತರಬೇತುದಾರರಾಗಿ ಮೈಂಡ್ ಟ್ರೈನಿಂಗ್ ಮತ್ತು ಮೆಂಟರ್‌ಶಿಪ್‌ನಲ್ಲಿ 14 ವರ್ಷಗಳ ಅನುಭವದೊಂದಿಗೆ ಸುಮಾರು 20,000 ಜನರ ಜೀವನವನ್ನು ಸಕಾರಾತ್ಮಕವಾಗಿ ಪರಿವರ್ತಿಸುವ ಸತ್ಕಾರ್ಯದಲ್ಲಿ ಯಶಸ್ವಿಯಾಗಿದ್ದಾರೆ.

ಸಕಾರಾತ್ಮಕ ಜೀವನದ ಕುರಿತು 9 ಪುಸ್ತಕಗಳನ್ನು ಬರೆದಿರುವ ಇವರು ಉಪನ್ಯಾಸದ ಆರಂಭದಿಂದಲೇ ಸಿಬ್ಬಂದಿಗಳೊಂದಿಗೆ ಸಂವಾದದ ರೂಪದಲ್ಲಿ ಪರಸ್ಪರ ಚರ್ಚಿಸಿ ನಿತ್ಯದ ಬದುಕಿನಲ್ಲಿ ತೆಗೆದುಕೊಳ್ಳುವ ನಿರ್ಧಾರ, ಮನಸ್ಸಿನ ಚಂಚಲತೆಗೆ ಕಡಿವಾಣ ಹಾಕುವ ಬಗೆ, ಸಕಾರಾತ್ಮಕ ಯೋಚನೆಗಳ ಅಳವಡಿಕೆಯನ್ನು ಒಗ್ಗೂಡಿಸಿಕೊಳ್ಳುವುದು ಹೇಗೆ ಎಂಬುದನ್ನು ತಿಳಿಸುತ್ತಾ ಸಿಬ್ಬಂದಿವರ್ಗದವರ ಗಮನವನ್ನು ಕೇಂದ್ರೀಕರಿಸುವಲ್ಲಿ ಯಶಸ್ವಿಯಾದರು.

ಈ ಸಂದರ್ಭದಲ್ಲಿ ಸಿಬ್ಬಂದಿವರ್ಗದವರ ಅನೇಕ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರವನ್ನು ನೀಡಿ ತಮ್ಮ ಅನುಭವದ ಉದಾಹರಣೆಯೊಂದಿಗೆ ವ್ಯಕ್ತಿ ವಿಕಸನ, ಆರೋಗ್ಯ, ನೆನಪಿನ ಶಕ್ತಿ, ಏಕಾಗ್ರತೆ ಇತ್ಯಾದಿಗಳು ದಿನ ನಿತ್ಯದಲ್ಲಿ ಹೇಗೆ ಸಹಾಯವಾಗುತ್ತವೆ ಎಂಬುದನ್ನು ತಿಳಿಸಿದರು.

ಈ ಸಂದರ್ಭದಲ್ಲಿ ಬಿಜೆಪಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀ ಪಿ. ರಾಜೀವ್, ರಾಜ್ಯ ಕಾರ್ಯಾಲಯ ಕಾರ್ಯದರ್ಶಿಗಳಾದ ಶ್ರೀ ಲೋಕೇಶ್ ಅಂಬೆಕಲ್ಲು, ಮಾಧ್ಯಮ ವಿಭಾಗದ ಪ್ರಮುಖರು ಹಾಗೂ ಕಾರ್ಯಾಲಯದ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಎಸ್. ವೀಣಾ ರವರು, ಸ್ವಾಗತವನ್ನು ಶ್ರೀ ಕರಿಬಸವ ರವರು, ಉಪನ್ಯಾಸಕರ ಪರಿಚಯವನ್ನುಕು. ಪದ್ಮಾವತಿ ಜೋಶಿ, ವಂದನಾರ್ಪಣೆಯನ್ನು ಶ್ರೀ ಜಿ.ಎನ್. ಪರಮೇಶ್ ಮಾಡಿದರು ಹಾಗೂ ಆಗಮಿಸಿದ್ದ ಉಪನ್ಯಾಸಕರಿಗೆ ಶ್ರೀಮತಿ ಪ್ರೇಮಾ ರವರು ಕಿರು ಕಾಣಿಕೆ ನೀಡಿದರು.

**ದಾಮೋದರ್ ನಾಯ್ಕ್**
ಕಾರ್ಯಾಲಯ ಸಿಬ್ಬಂದಿ

ಮನ್ ಕಿ

# ಬಾತ್

# ಏಕತೆಯ ಮಹಾಕುಂಭ



## ದ್ವೇಷಮುಕ್ತ ಸಮಾಜ ನಿರ್ಮಾಣಕ್ಕೆ ಪ್ರಧಾನಿ ಮೋದಿ ಸಲಹೆ

ಮುಂಬರುವ 2025ರ ಮಹಾಕುಂಭ ಮೇಳವು ಏಕತೆಯ ಮಹಾಕುಂಭವೆಂದು ಬಣ್ಣಿಸಿದ ಪ್ರಧಾನಿ ಶ್ರೀ ನರೇಂದ್ರ ಮೋದಿ, ಸಮಾಜವನ್ನು ದ್ವೇಷ ಮತ್ತು ಒಡಕಿನಿಂದ ಮುಕ್ತಗೊಳಿಸುವ ದೃಢ ಸಂಕಲ್ಪಧಾರಿಗಳಾಗೋಣ ಎಂದು ಜನತೆಗೆ ಕರೆ ನೀಡಿದರು. ಮನ್ ಕೀ ಬಾತ್ 117ನೇ ಆವೃತ್ತಿಯಲ್ಲಿ ದೇಶವಾಸಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ಕುಂಭ ಮೇಳದಲ್ಲಿ ಎಲ್ಲೂ ಬಡವ ಬಲ್ಲಿದನೆಂಬ ಭೇದಕ್ಕೆ ಜಾಗವಿಲ್ಲ. ಹಾಗಾಗಿ ನಮ್ಮ ಕುಂಭಮೇಳವು ಏಕತೆಯ ಮಹಾಕುಂಭವೆನಿಸಲಿದೆ ಎಂದು ಅವರು ತಿಳಿಸಿದರು.

ಭಕ್ತರು ಸರ್ಕಾರದ ಮಂಜೂರಾತಿ ಪಡೆದ ಟೂರ್ ಪ್ಯಾಕೇಜ್‌ಗಳು, ವಸತಿ ಸೌಲಭ್ಯ ಮತ್ತು ಹೋಂಸ್ಟೇ ಬಗ್ಗೆ ತಮ್ಮ ಮೊಬೈಲ್‌ಗಳಲ್ಲೇ ಮಾಹಿತಿ ಪಡೆಯಬಹುದು. ಮಹಾಕುಂಭ ಮೇಳ ನಡೆಯುವ ಇಡೀ ಪ್ರದೇಶದಲ್ಲಿ ಎಐ ಆಧಾರಿತ ಕ್ಯಾಮರಾಗಳ ಕಣ್ಗಾವಲಿರಲಿದ್ದು, ಭಕ್ತರ ಕುಟುಂಬದ ಯಾರೇ ಮಕ್ಕಳು ಅಥವಾ ಸದಸ್ಯರು ಅಕಸ್ಮಾತ್ ತಪ್ಪಿಸಿಕೊಂಡರೂ ಅವರನ್ನು ಪತ್ತೆಹಚ್ಚಲು ಈ ಕ್ಯಾಮರಾಗಳು ನೆರವಾಗಲಿವೆ ಎಂದು ಹೇಳಿದರು.

**ಎಐಚಾಟ್ ಬೋಟ್ ವ್ಯವಸ್ಥೆ:** ಜ.13ರಿಂದ ಪ್ರಯಾಗ್ ರಾಜ್‌ನಲ್ಲಿ ನಡೆಯುವ ಮಹಾಕುಂಭ ಮೇಳದ ಬಗ್ಗೆ ಜನರಿಗೆ ಮಾಹಿತಿ ಒದಗಿಸಲು 11 ಭಾರತೀಯ ಭಾಷೆಗಳಲ್ಲಿ ಎಐ ಸಂವಾದ ವ್ಯವಸ್ಥೆ ಮಾಡಲಾಗಿದೆ. 2025ರ ಮಹಾಕುಂಭ ಮೇಳ ಸಂದರ್ಭದಲ್ಲಿ ತ್ರಿವೇಣಿ ಸಂಗಮದ ದಡಗಳಲ್ಲಿ ಅನೇಕ ಅಭೂತಪೂರ್ವ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ತಿಳಿಸಿದರು. ಡಿಜಿಟಲ್ ನೇವಿಗೇಶನ್ ನೆರವಿನಿಂದ ಜನರು ಬೇರೆ ಬೇರೆ ಘಾಟ್‌ಗಳು, ದೇವಾಲಯಗಳು, ಸಾಧುಗಳ ಅಖಾಡಗಳಿಗೆ ತಲುಪಬಹುದು. ಪಾರ್ಕಿಂಗ್ ಜಾಗವನ್ನು ಕೂಡ ಇದೇ ನೇವಿಗೇಶನ್ ವ್ಯವಸ್ಥೆ ನೆರವಿನಿಂದ ತಲುಪಬಹುದುದಾಗಿದೆ ಎಂದು ಹೇಳಿದರು.

**ಸಂವಿಧಾನ ಅಭಿಯಾನಕ್ಕೆ ಆಹ್ವಾನ:** ದೇಶದ ಘನ ಸಂವಿಧಾನವು ನಮಗೆಲ್ಲರಿಗೂ ದಾರಿದೀಪ, ನಮ್ಮ ದಕ್ಷ ಮಾರ್ಗದರ್ಶಕ, ನಾನಿಲ್ಲಿಗೆ ತಲುಪಲು ಸಂವಿಧಾನವೇ ಪ್ರೇರಣೆ, ರಾಷ್ಟ್ರದ ಮೈಲಿಗಲ್ಲು ಸಮಾನ ಸಂವಿಧಾನವು ಮುಂದಿನ ವರ್ಷ ಜನವರಿ 26ಕ್ಕೆ ಬರೋಬ್ಬರಿ 75ವರ್ಷಗಳನ್ನು ಪೂರ್ಣಗೊಳಿಸಲಿದೆ. ಈ ನಿಟ್ಟಿನಲ್ಲಿ ದೇಶಾದ್ಯಂತ ವ್ಯಾಪಕ ಅಭಿಯಾನ ಹಮ್ಮಿಕೊಳ್ಳಲಾಗಿದ್ದು, ಸಂವಿಧಾನದ ಅವತರಣಿಕೆಯನ್ನು ಓದಿ ತಮ್ಮ ಅಭಿಪ್ರಾಯಗಳನ್ನು ವಿಡಿಯೋ ಮೂಲಕ ಶೇರ್ ಮಾಡಿ ಎಂದು ದೇಶದ ನಾಗರಿಕರಿಗೆ ಪ್ರಧಾನಿ ಶ್ರೀ ಮೋದಿ ರವರು ಕರೆ ನೀಡಿದರು. ದೇಶದ ಜನರನ್ನು ಸಂವಿಧಾನದ ದಂತಕಥೆ ಜತೆ ಜೋಡಿಸುವ ನಿಟ್ಟಿನಲ್ಲಿ ಕಾನ್‌ಸ್ಟಿಟ್ಯುಶನ್75.ಕಾಮ್ ಎಂಬ ವೆಬ್‌ಸೈಟ್ ತೆರೆಯಲಾಗಿದೆ. ಅಸಂಖ್ಯ ಭಾಷೆಗಳಲ್ಲಿರುವ ಸಂವಿಧಾನವನ್ನು ಓದಿ ಅದರ ಬಗ್ಗೆ ಪ್ರಶ್ನೆ ಕೇಳಲು ದೇಶವಾಸಿಗಳಿಗೆ ಅವಕಾಶ ಕಲ್ಪಿಸಲಾಗಿದೆ ಎಂದು ಅವರು ತಿಳಿಸಿದರು.

**ದಕ್ಷಿಣ ಅಮೆರಿಕದಲ್ಲಿ ಆಯುರ್ವೇದ ಕಂಪು:** ಆಯುರ್ವೇದದ ಮೂಲ ಬೇರಿರುವುದು ಭಾರತದಲ್ಲಿ. ದಕ್ಷಿಣ ಅಮೆರಿಕದ ಪರುಗ್ವೆಯಲ್ಲಿರುವ ಭಾರತೀಯರ ಸಂಖ್ಯೆ ಒಂದು ಸಾವಿರ ಮೀರದು, ಎರಿಕಾ ಹ್ಯೂಬರ್ ಎಂಬ ಆಯುರ್ವೇದ ವೈದ್ಯ ನೂರಾರು ಜನರಿಗೆ ಆಯುರ್ವೇದ ಔಷಧಿಗಳನ್ನು ಶಿಫಾರಸು ಮಾಡುತ್ತಿರುವುದು ಅಚ್ಚರಿಯ ಸಂಗತಿ ಎಂದು ಪ್ರಧಾನಿ ಶ್ರೀ ಮೋದಿ ಹೇಳಿದರು.

**ವೇವ್ಸ್ ಶೃಂಗಸಭೆ:** ಮುಂದಿನ ವರ್ಷ ಭಾರತದಲ್ಲಿ ಪ್ರಥಮ ಬಾರಿ ವರ್ಲ್ಡ್ ಆಡಿಯೊ ವಿಷುವಲ್ ಎಂಟರ್‌ಟೈನ್‌ಮೆಂಟ್ ಸಮಿಟ್ ಅಥವಾ 'ವೇವ್ಸ್' ಆಯೋಜಿಸಲಾಗಿದೆ. ಜಾಗತಿಕ ಪ್ರಧಾನ ವಿಚಾರಧಾರೆ ಸೃಷ್ಟಿಸುವ ಕೇಂದ್ರವಾಗಿ ಭಾರತವನ್ನು ಪರಿವರ್ತಿಸುವ ನಿಟ್ಟಿನಲ್ಲಿ 'ವೇವ್ಸ್' ಮಹತ್ವದ ಹೆಜ್ಜೆಯಾಗಲಿದೆ. ಭಾರತವು 5 ಟ್ರಿಲಿಯನ್ ಡಾಲರ್ ಆರ್ಥಿಕತೆ ಸಾಧಿಸುವ ಹಾದಿಯಲ್ಲಿ ದಾಪುಗಾಲಿಟ್ಟಿರುವಾಗ, ದೇಶದ ಆರ್ಥಿಕತೆಗೆ ಹೊಸ ಶಕ್ತಿ ತುಂಬುವಲ್ಲಿ ಪ್ರಸ್ತಾವಿತ 'ವೇವ್ಸ್' ಶೃಂಗಸಭೆ ನಿರ್ಣಾಯಕ ಪಾತ್ರ ವಹಿಸಲಿದೆ ಎಂದು ಪ್ರಧಾನಿ ಶ್ರೀ ಮೋದಿ ರವರು ತಿಳಿಸಿದರು. ಯುವ / ಪ್ರಬುದ್ಧ ಕಲಾವಿದರು, ಸಿನಿಮಾ ರಂಗದಲ್ಲಿರುವವರು, ಕಿರುತೆರೆ ವೃತ್ತಿಪರರು ತಂತ್ರಜ್ಞಾನ ಕ್ಷೇತ್ರದವರೆಲ್ಲರೂ ತಪ್ಪದೆ 'ವೇವ್ಸ್' ಶೃಂಗಸಭೆಯಲ್ಲಿ ಪಾಲ್ಗೊಳ್ಳಿ ಎಂದು ಪ್ರಧಾನಿ ಶ್ರೀ ಮೋದಿ ಮನವಿ ಮಾಡಿದರು.

**ಚಿತ್ರಕಲಾ ಸ್ಪರ್ಧೆಗೆ ಈಜಿಪ್ಟ್ ಮಕ್ಕಳು! :** ಭಾರತೀಯ ಸಂಸ್ಕೃತಿಯ ಛಾಪು ಜಗತ್ತಿನ ಮೂಲೆ ಮೂಲೆಗೂ ತಲುಪಿದೆ. ಭಾರತೀಯ ಸಂಸ್ಕೃತಿ ಮತ್ತು ಭಾರತ-ಈಜಿಪ್ಟ್ ನಡುವಣ ಚಾರಿತ್ರಿಕ ಸಂಬಂಧಗಳ ಕುರಿತು ನಡೆದ ಚಿತ್ರಕಲಾ ಸ್ಪರ್ಧೆಯಲ್ಲಿ ಈಜಿಪ್ಟ್‌ನ ಬರೋಬ್ಬರಿ 23ಸಾವಿರ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

**ಒಡಿಶಾದಲ್ಲಿ ತರಕಾರಿ ಕ್ರಾಂತಿ :** ಕಾಳಹದಿಯ 10 ರೈತರ ಗುಂಪೊಂದು ಹೊಸತಾಗಿ ಎಫ್‌ಪಿಒ -ಕಿಸಾನ್ ಉತ್ಪಾದ್ ಸಂಘ ಸ್ಥಾಪಿಸಿ ಆಧುನಿಕ ತಂತ್ರಜ್ಞಾನ ಬಳಸಿ ಕೃಷಿ ಚಟುವಟಿಕೆಯಲ್ಲಿ ತೊಡಗಿದರು. ಪರಿಣಾಮ ಇಂದವರ ಎಫ್‌ಪಿಒಗೆ ಕೋಟಿಗಟ್ಟಲೆ ವ್ಯವಹಾರವಾಗುತ್ತಿದೆ. ಇಂದೀಗ ಎಫ್‌ಪಿಒಗೆ 200 ರೈತರು ಸದಸ್ಯರಾಗಿದ್ದು, ಇವರ ಪೈಕಿ 15 ಮಂದಿ ಮಹಿಳೆಯರಿದ್ದಾರೆ. ದೃಢ ಸಂಕಲ್ಪ ಮತ್ತು ಸಾಮೂಹಿಕ ಕಠಿಣ ಪರಿಶ್ರಮಗಳಿಗೆ ಫಲವಿದೆ ಎಂಬ ಸಂದೇಶ ನೀಡಿದ ಈ ಬೆಳವಣಿಗೆ ಶ್ಲಾಘನೀಯ ಎಂದು ಪ್ರಧಾನಿ ಶ್ರೀ ಮೋದಿ ರವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

# ‘ಬಾಣಂತಿಯರ ಸರಣಿ ಸಾವು’ ಕಾಂಗ್ರೆಸ್ ಸರ್ಕಾರದ ನಿರ್ಲಕ್ಷ್ಯ ಖಂಡಿಸಿ ಬಿಜೆಪಿ ಪ್ರತಿಭಟನೆ



ಶಿವಮೊಗ್ಗ



ಬೆಂಗಳೂರು ಗ್ರಾಮಾಂತರ



ಬೀದರ್



ಚಿಕ್ಕೋಡಿ




ದಾವಣಗೆರೆ



ಗದಗ




ಹಾಸನ




ತುಮಕೂರು

ಸ್ವಸ್ಥಕ್ಕೆಡೆಗೊಂದು ವೃಷ್ಟಿ
ಸಮಷ್ಟಿ



ಕಾಲೇ ವರ್ಷತು ಪರ್ಜನ್ಯಃ

# ಶ್ರೀ ಕೃಷ್ಣನಿಗೆ ಪೂಜ್ಯರು ಯಾರು ...?

'ಮಹಾಭಾರತ' ಸನಾತನ ಹಿಂದೂ ಸಂಸ್ಕೃತಿಯ ಜೀವಾಳ. ಇಡೀ ವಿಶ್ವವೇ ಒಪ್ಪಿರುವ ನೀತಿ ಪಾಠ ಮಹಾಭಾರತದಲ್ಲಿದೆ. ಇದರ ಶ್ರೇಷ್ಠತೆಯ ಸೂತ್ರಧಾರ ಕೃಷ್ಣ. ಮಹಾಭಾರತದಲ್ಲಿ ಏನೆಲ್ಲಾ ಆಗಲಿದೆ, ಏನಾಗುತ್ತಿದೆ ಎಂಬುದು ಶ್ರೀಕೃಷ್ಣನಿಗೆ ತಿಳಿದಿತ್ತು. ಯಾವುದು ಹೇಗೆ ನಡೆಯಬೇಕಂಬುದು ಕೃಷ್ಣನಿಗೆ ಅರಿವಿತ್ತು, ಕೃಷ್ಣ ಭಗವಂತ ಸ್ವರೂಪಿ, ಆತ ಮನಸು ಮಾಡಿದರೆ ಉದ್ದೇಶದಂತೆ ನೇರವಾಗಿ ಧರ್ಮ ಸ್ಥಾಪನೆಯನ್ನು ಮಾಡಬಹುದಿತ್ತು. ಆದರೆ ಆತ ಹಾಗೆ ಮಾಡಲಿಲ್ಲ, ಬದಲಾಗಿ ಜೀವನದ ಮೌಲ್ಯಗಳನ್ನು, ಧರ್ಮದ ಅವಶ್ಯಕತೆಯನ್ನು ಅರ್ಥಮಾಡಿಸಿ, ಅನೀತಿಯ ದಾರಿಯಲ್ಲಿದ್ದವರಿಗೆ ತಪ್ಪಿನ ಅರಿವು ಮೂಡಿಸಿ, ಪ್ರತಿಯೊಬ್ಬರೂ ಅವರ ಕರ್ತವ್ಯ, ಜವಾಬ್ದಾರಿಯನ್ನು ನಿರ್ವಹಿಸುವಂತೆ ಮಾಡಿ, ಕೊನೆಗೆ ಧರ್ಮ ಸ್ಥಾಪನೆಯನ್ನು ಮಾಡಿದ. ಅದಕ್ಕೆ ಶ್ರೀ ಜಗದ್ವಂದ್ಯ. ಸರ್ವಮಾನ್ಯ. ಮಹಾಭಾರತದ ಸೂತ್ರಧಾರನಾಗಿ ಅಧರ್ಮವನ್ನು ಸೋಲಿಸಿ, ಸಿಂಹಾಸನದಲ್ಲಿ ಧರ್ಮ ಸ್ಥಾಪನೆ ಮಾಡಿದ ಈ ಕೃಷ್ಣಾವತಾರವನ್ನು ಸಮಸ್ತ ಮಾನವಕುಲ ಭಕ್ತಿಯಿಂದ ಪೂಜಿಸುತ್ತದೆ. ಕೃಷ್ಣ ಬೋಧಿಸಿದ ಭಗವದ್ಗೀತೆ ಜೀವನಾಮೃತವಾಗಿದೆ.

ಸಮಸ್ತ ಭೂ ಮಂಡಲ ಕೃಷ್ಣನನ್ನ ಪೂಜಿಸುತ್ತದೆ. ಆದರೆ ಕೃಷ್ಣ ಯಾರನ್ನಾದರೂ ಪೂಜೆ ಮಾಡುತ್ತಾನಾ..? ಪೂಜಿಸಿದರೆ ಯಾರನ್ನ ಪೂಜಿಸಬಹುದು ಎಂಬ ಪ್ರಶ್ನೆ ಒಮ್ಮೆ ಬಂದಿರಬಹುದು. ಆದರೆ ಇದೆ ಪ್ರಶ್ನೆ ಆಗಲೆ ಕೃಷ್ಣನ ಆಪ್ತ ಗೆಳೆಯ ಸುಧಾಮನಿಗೂ ಒಮ್ಮೆ ಬಂದಿತ್ತಂತೆ. ಅದಕ್ಕೆ ಸುಧಾಮ ಈ ಬಗ್ಗೆ ಕೃಷ್ಣನನ್ನೆ ಕೇಳಿ ತಿಳಿಯೋಣ ಎಂದು ಒಮ್ಮೆ ಮಾತನಾಡುವಾಗ, ಕೃಷ್ಣ, ನಿನ್ನನ್ನು ಭಕ್ತರು ಪರಿ, ಪರಿಯಾಗಿ ಪೂಜಿಸುತ್ತಾರೆ, ವೈಭವೀಕರಿಸುತ್ತಾರೆ. ಅದಕ್ಕೆ ನೀನು ಅರ್ಹನು ಸಹ ಹೌದು. ಆದರೆ ನನಗೊಂದು ಅನುಮಾನ, ನೀನು ಯಾರನ್ನಾದರು ಪೂಜೆ ಮಾಡುತ್ತೀಯೇ..? ಎಂದು ಕೇಳುತ್ತಾನೆ.

ಆಗ ಕೃಷ್ಣ ಏನೂ ಮಾತನಾಡದೆ, ಸುಧಾಮನನ್ನು ಒಂದು ಕೋಣೆಗೆ ಕರೆದುಕೊಂಡು ಹೋಗಿ ಅಲ್ಲಿರುವ ಒಂದು ದೊಡ್ಡ ಮರದ ಪೆಟ್ಟಿಗೆಯನ್ನು ತೆರೆಯಲು ಹೇಳುತ್ತಾನೆ. ಸುಧಾಮ ಪೆಟ್ಟಿಗೆ ತೆರೆದು ನೋಡಿದರೆ ಅದರೊಳಗೆ ಇನ್ನೊಂದು ಪೆಟ್ಟಿಗೆ, ಸುಧಾಮ ಪ್ರಶ್ನಾರ್ಥಕವಾಗಿ ಕೃಷ್ಣನನ್ನು ನೋಡಿದಾಗ, ಅದರೊಳಗೆ ಎಷ್ಟು ಪೆಟ್ಟಿಗೆ ಇದೆಯೋ ಎಲ್ಲವನ್ನು ತೆರೆದು ನೋಡು ಎನ್ನುತ್ತಾನೆ ಕೃಷ್ಣ. ಅದರಂತೆ ಒಂದೊರಳೊಗೊಂದಿರುವ ಪೆಟ್ಟಿಗೆಯನ್ನು ತೆರೆಯುತ್ತಾ ಹೋದ ಸುಧಾಮನಿಗೆ ಕೊನೆಯಲ್ಲಿ ಒಂದು ಚಿಕ್ಕ ಪೆಟ್ಟಿಗೆ ಸಿಗುತ್ತದೆ. ಅದನ್ನು ತೆರೆದು ನೋಡಿದರೆ ಅದರಲ್ಲಿ ಒಂದು ಹಿಡಿ ಮಣ್ಣು.

ಇದರಿಂದ ಗೊಂದಲಕ್ಕೀಡಾದ ಸುಧಾಮ, ನಾನು ಕೇಳಿದ್ದು ನೀನು ಯಾರನ್ನಾದರೂ ಪೂಜಿಸುತ್ತಿಯಾ ಎಂದು, ಆದರೆ ಇದೇನಿದು ನೀನು ಈ ಮಣ್ಣನ್ನು ತೋರಿಸುತ್ತಿರುವೆ ಎನ್ನುತ್ತಾನೆ. ಆಗ ಕೃಷ್ಣ ಹೆಮ್ಮೆ ಮತ್ತು ಗೌರವದಿಂದ ನಾನು ಪೂಜಿಸುವುದು ಇದನ್ನೇ. ಇದನ್ನು ಮಣ್ಣು ಎನ್ನಬೇಡ ಎನ್ನುತ್ತಾನೆ. ಇದನ್ನು ಯಾಕೆ ನೀನು ಪೂಜಿಸುವೆ ಎಂದು ಸುಧಾಮನ ಮರು ಪ್ರಶ್ನೆ ಹಾಕುತ್ತಾನೆ. ಆಗ ಕೃಷ್ಣ ಉತ್ತರಿಸುತ್ತಾ, ಅದು ಕೇವಲ ಮಣ್ಣಲ್ಲ ಶೇಷ್ಠವಾದ, ಪವಿತ್ರವಾದ ಮಣ್ಣು. ನನ್ನನ್ನು ಪೂಜಿಸುವ ಕೋಟ್ಯಾಂತರ ಭಕ್ತರ ಪಾದ ಧೂಳಿಯ ಮಣ್ಣು. ನನ್ನ ಭಕ್ತರೇ ನನಗೆ ಶ್ರೇಷ್ಠ. ಆ ಭಕ್ತರು ತುಳಿದ ಮಣ್ಣು ನನಗೆ ಪವಿತ್ರ. ಈ ಯುಗದ ಶ್ರೇಷ್ಠವಾದ, ಪವಿತ್ರವಾದ ಭಕ್ತರ ಪಾದ ಧೂಳಿಯನ್ನು ನಾನು ಪೂಜಿಸುತ್ತೇನೆ ಎಂದಾಗ ಸುಧಾಮ ಮೂಕಸ್ಮಿತನಾಗಿ, ಈ ಕಾರಣಕ್ಕೆ ಕೃಷ್ಣ ಭಗವಂತನ ಸ್ವರೂಪಿಯಾಗಿದ್ದು ಎನ್ನುತ್ತಾನೆ.

ಒಂದು ಸಂಘಟನೆ ಅಥವಾ ಪಕ್ಷದ ಶಕ್ತಿ ಕಾರ್ಯಕರ್ತರು, ಈ ಕಾರ್ಯಕರ್ತರು ಪಕ್ಷ, ಸಂಘಟನೆಯೊಂದಿಗೆ ಸದಾ ನಿಲ್ಲುತ್ತಾರೆ. ತಮ್ಮ ಶಕ್ತಿಗೂ ಮೀರಿ ಪಕ್ಷಕ್ಕಾಗಿ ಸಮಯವನ್ನು ನೀಡಿ ಸಂಘಟನೆ ಮಾಡುತ್ತಾರೆ. ಪಕ್ಷವನ್ನು ಭಕ್ತಿಯಿಂದ ಪೂಜಿಸುತ್ತಾರೆ, ನಿರ್ಧಾರಗಳನ್ನು ಗೌರವಿಸುತ್ತಾರೆ, ಸಂಘಟನೆಗೆ ಸದಾ ಬದ್ದರಾಗಿರುತ್ತಾರೆ. ಇಂತಹ ಭಕ್ತ ಸ್ವರೂಪಿ ಕಾರ್ಯಕರ್ತ ಶ್ರೀ ಕೃಷ್ಣನ ಭಕ್ತರಾದರೆ, ಕಾರ್ಯಕರ್ತನ್ನು ಶ್ರೀ ಕೃಷ್ಣನ ರೂಪದಲ್ಲಿ ಗೌರವಿಸುವ ವ್ಯಕ್ತಿಯೇ ಕೃಷ್ಣಸ್ವರೂಪಿ ನಾಯಕನಾಗುತ್ತಾನೆ.

ಸಂಘಟನೆಯ ನಾಯಕರುಗಳು, ಕಾರ್ಯಕರ್ತರ ಭಾವನೆಗಳಿಗೆ ಧ್ವನಿಯಾಗಬೇಕು. ಕಾರ್ಯಕರ್ತರ ನಡೆ ನುಡಿಗಳು ಶ್ರೀ ಕೃಷ್ಣನಿಂದ ಪೂಜ್ಯಾರ್ಹವಾಗುವಂತೆ ಇರಬೇಕು. ನಾಯಕ ಶ್ರೀ ಕೃಷ್ಣನ ರೀತಿಯಲ್ಲಿ ಸಂಘಟನೆಯ ಜೀವಾಳವಾದರೆ, ಕಾರ್ಯಕರ್ತ ಪೂಜ್ಯನೀಯ. ಈ ಭಾವನೆಗಳಿಗೆ ಆದ್ಯತೆ ಸಿಕ್ಕರೆ ಅದು ಸಂಘಟನೆಯ ಶಕ್ತಿ ವೃದ್ಧಿಗೆ ಪೂರಕ. ಪಕ್ಷದ ನಾಯಕತ್ವವನ್ನು ಕೃಷ್ಣನೆಂದು ಪೂಜಿಸುವ ಕಾರ್ಯಕರ್ತರ ಸಂತತಿ, ಕಾರ್ಯಕರ್ತನನ್ನು ಶ್ರೀ ಕೃಷ್ಣನಂತೆ ಗೌರವಿಸುವ ನಾಯಕರುಗಳ ಸಂತತಿ ನಿರಂತರವಾಗಿರಲೇ ಬೇಕು.

– ಸ್ವಯಂಭೂ

**KAMALA PATHA** Monthly in Kannada
Date of Publication : 8th of Every Month
Price : ₹ 10/- Pages : 36

RNI No.:KARKAN/2023/84034 REGISTERED NEWSPAPER UNDER No. KRNA/BGE/1173/2023-25
LICENCED TO POST WITHOUT PAYMENT - LICENCE No. PMG BG/WPP-408/2023-2025
OFFICE OF POSTING : BENGALURU PSO - 560 026 DATE OF POSTING : 10th / 15th / 20th OF EVERY MONTH

**KAMALA PATHA** – Printed and Published by **H.S. GOPINATH** on behalf of **SAMAGRA VIKASA TRUST**, Printed at **RASHTROTTHANA MUDRANALAYA,** No. 8 & 8/1, Satya Pramoda Teertha, Building, 3rd Main, 9th Cross, Chamrajpet, BENGALURU – 560 018. Published At # 7/6, 4TH Cross, CC Road, Sarvagna Nagar, Cox Town, BENGALURU – 560 005. Editor: **B. V. PRAKASH (Bidare Prakash)**